ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 6 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 20 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸರ್ಕಾರಿ ನೌಕರರಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯ

ಡಿಸೆಂಬರ್‌ವರೆಗೆ ಗಡುವು

ಬೆಂಗಳೂರು: ಸರ್ಕಾರಿ ನೌಕರರಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯಗೊಳಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ತಿದ್ದುಪಡಿ ಮಾಡಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.



ಈ ನಿಯಮಾವಳಿ ಪ್ರಕಾರ ಸರ್ಕಾರಿ ನೌಕರರು ಇನ್ನುಮುಂದೆ ಕಂಪ್ಯೂಟರ್ ಪರೀಕ್ಷೆ ಪಾಸಾಗದಿದ್ದರೆ ಮುಂಬಡ್ತಿ, ವಾರ್ಷಿಕ ವೇತನ ಬಡ್ತಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ಈವರೆಗೆ ಅಧಿಸೂಚನೆ ಹೊರಡಿಸಿದ 10 ವರ್ಷದೊಳಗೆ ಪರೀಕ್ಷೆ ಪಾಸ್ ಮಾಡಿಕೊಳ್ಳಲು ಅವಕಾಶ ನೀಡಿದ್ದ ಸರ್ಕಾರ, ಅದಕ್ಕಾಗಿ 2012ರಲ್ಲೇ ನಿಯಮ ಜಾರಿಗೊಳಿಸಿತ್ತು.

ಈಗ ಮತ್ತೆ ತಿದ್ದುಪಡಿ ಮಾಡಿ ಎಲ್ಲಾ ಸರ್ಕಾರಿ ನೌಕರರು 2022 ಡಿಸೆಂಬರ್ 31ರೊಳಗೆ ಕಂಪ್ಯೂಟರ್ ಪರೀಕ್ಷೆ ಪಾಸ್ ಮಾಡಿಕೊಳ್ಳುವಂತೆ ಕಡ್ಡಾಯ ಮಾಡಿ ಸರ್ಕಾರ ಗಡುವು ವಿಧಿಸಿದೆ.

ಮೇ 13ರಂದು ಜೆಡಿಎಸ್‌ನ 'ಜನತಾ ಜಲಧಾರೆ' ಸಮಾಪ್ತಿ

ಬೆಂಗಳೂರು: ಕಳೆದ ತಿಂಗಳು 16ರಂದು ಹನುಮ ಜಯಂತಿ ದಿನ ಆರಂಭವಾದ ಜೆಡಿಎಸ್‌ನ ಜನತಾ ಜಲಧಾರೆ ಕಾರ್ಯಕ್ರಮ ರಾಜ್ಯಾದ್ಯಂತ ಯಶಸ್ವಿಯಾಗಿ ನಡೆದಿದ್ದು, ಮೇ 13ರಂದು ಬೆಂಗಳೂರಿನ ನೆಲಮಂಗಲ ಟೋಲ್ ಪ್ಲಾಜಾ ಬಳಿ ಭಾರೀ ಸಮಾವೇಶ ನಡೆಯಲಿದೆ. ಜಲಧಾರೆ ಕಾರ್ಯಕ್ರಮವು ಈ ಸಮಾವೇಶದ ಮೂಲಕ ಸಮಾಪ್ತಿಯಾಗಲಿದ್ದು, ಆ ಬೃಹತ್ ಸಮಾವೇಶದ ಸಿದ್ಧತೆ ಮತ್ತು ರೂಪುರೇಷೆಗಳ ಬಗ್ಗೆ ಪಕ್ಷದ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು. ಸಭೆ ನಂತರ ಮಾಹಿತಿ ನೀಡಿದ ಕೋರ್ ಕಮಿಟಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ್, ರಾಜ್ಯದ 184 ವಿಧಾನ ಸಭೆ ಕ್ಷೇತ್ರಗಳಲ್ಲಿ ಜಲಧಾರೆಯ 15 ಗಂಗಾ ರಥಗಳು ಯಶಸ್ವಿಯಾಗಿ ಸಂಚರಿಸುತ್ತಿವೆ. ಇವುಗಳ ಮೂಲಕ ರಾಜ್ಯದ ಎಲ್ಲ ಜೀವ ನದಿಗಳಿಂದ ಸಂಗ್ರಹ ಮಾಡಲಾಗಿರುವ ಪುಣ್ಯಜಲ ಬೃಹತ್ ಕಲಶಕ್ಕೆ ತುಂಬಿಸಿ ಪೂಜೆ ನೆರವೇರಿಸಲಾಗುವುದು.

ಮೈಸೂರು, ತುಮಕೂರು ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಬೆಂಗಳೂರು ಹೊರತುಪಡಿಸಿ ಇನ್ನಿತರೆ ಪಾಲಿಕೆ, ನಗರಸಭೆ, ಪುರಸಭೆ, ಪಪಂ ವ್ಯಾಪ್ತಿಯ

ಅಕ್ರಮ ನಿರ್ಮಾಣ ಸಕ್ರಮ

- ಮನೆ ಅಳತೆ ಆಧರಿಸಿ ದಂಡ ವಸೂಲಿ ಮಾಡಿ ಸಕ್ರಮ
- ಈ ನಿರ್ಧಾರದಿಂದ ಸರ್ಕಾರಕ್ಕೆ 10 ಸಾವಿರ ಕೋಟಿ ಆದಾಯ ಸಂಗ್ರಹ
- ಮೈಸೂರು ಸೇರಿ ಇತರೆ ಪಾಲಿಕೆಯ ಕೆಲ ಪ್ರಕರಣ ಕೋರ್ಟ್‌ನಲ್ಲಿರುವ ಕಾರಣ ಯಾವುದೇ ನಿರ್ಧಾರವಿಲ್ಲ
- ಮೈಸೂರು ಪಾಲಿಕೆ ವ್ಯಾಪ್ತಿಯ ಹೊಸ ಬಡಾವಣೆ ಅಭಿವೃದ್ಧಿಗೆ ನೂರು ಕೋಟಿ

ಬೆಂಗಳೂರು, ಮೇ 5(ಕೆಎಂಶಿ)– ನಗರ ಪಾಲಿಕೆಗಳೂ ಸೇರಿದಂತೆ ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.



ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಮೈಸೂರು, ತುಮಕೂರು, ದಾವಣಗೆರೆ, ಹುಬ್ಬಳ್ಳಿ–ಧಾರವಾಡ ಸೇರಿದಂತೆ ಬೆಂಗಳೂರು ಹೊರತುಪಡಿಸಿ, ಉಳಿದ ಹತ್ತು ನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿರುವ ಅನಧಿಕೃತ ಆರೂವರೆ ಲಕ್ಷ ಅಕ್ರಮ ಮನೆಗಳನ್ನು ಸಕ್ರಮಗೊಳಿಸಲಾಗುವುದು ಎಂದರು.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಖಾಸಗಿ ಬಡಾವಣೆಗಳಲ್ಲಿ ನಕ್ಷೆ ಮಂಜೂರಾತಿ ಪಡೆಯದೇ, ಅಥವಾ ಸಕ್ರಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ನಿರ್ಮಾಣಗೊಂಡಿರುವ ಕಟ್ಟಡಗಳನ್ನು ಸಕ್ರಮಗೊಳಿಸಲಾಗುವುದು.

ಈ ಬಡಾವಣೆಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದೆ. ಆದರೆ ಅವರು, ತೆರಿಗೆ ವ್ಯಾಪ್ತಿಯಿಂದ ದೂರ ಉಳಿದಿದ್ದಾರೆ. ಇಂತಹ ಲಕ್ಷಾಂತರ ಮನೆಗಳನ್ನು ನಿವೇಶನದ ಅಳತೆಯ ಆಧಾರದ ಮೇಲೆ ಒಂದು ಬಾರಿಗೆ ಅನ್ವಯವಾಗುವಂತೆ ದಂಡ ವಿಧಿಸಿ, ಸಕ್ರಮಗೊಳಿಸಲಾಗುವುದು. ಸಕ್ರಮಗೊಳಿಸಿದ ನಂತರ ಆ ಮನೆಯ ಅಳತೆಯ ಅನುಸಾರ ತೆರಿಗೆಯನ್ನು ನಿಗದಿಪಡಿಸಿ, ವಸೂಲಿ ಮಾಡಲು ಸ್ಥಳೀಯ ಪ್ರಾಧಿಕಾರಗಳಿಗೆ ಅನುಮತಿ ನೀಡಲಾಗುವುದು. ಸರ್ಕಾರದ ಈ ನಿರ್ಧಾರದಿಂದ ಸುಮಾರು 9ರಿಂದ 10 ಸಾವಿರ ಕೋಟಿ ರೂ.ಗಳು ರಾಜ್ಯ ಖಜಾನೆಗೆ ಬರಲಿದೆ. ಬಂದ ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗುವುದು. ಅಲ್ಲದೆ ಪ್ರತಿ ವರ್ಷವೂ ಈ ಅಕ್ರಮ ಮನೆಗಳಿಂದ ತೆರಿಗೆ ವಸೂಲಿ ಮಾಡುವುದರಿಂದ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯು ಸುಧಾರಣೆಯಾಗಲಿದೆ. ಕಾನೂನು ಸಚಿವ ಮಾಧುಸ್ವಾಮಿ ಅಧ್ಯಕ್ಷತೆಯ ಸಚಿವ ಸಂಪುಟದ ಉಪಸಮಿತಿ ▶ 3ನೇ ಪುಟಕ್ಕೆ

ಮೈಸೂರು ಕುಡಿಯುವ ನೀರು ಹಳೇ ಉಂಡವಾಡಿ ಯೋಜನೆಯ ಶೇ.50 ಕಾಮಗಾರಿ ಪೂರ್ಣ


ಬೆಂಗಳೂರು,ಮೇ 5(ಕೆಎಂಶಿ)–ಮೈಸೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ಎರಡು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಈ ಪೈಕಿ ಹಳೆ ಉಂಡವಾಡಿಯಿಂದ ಮೈಸೂರಿಗೆ ನೀರು ಕೊಡುವ ಯೋಜನೆಯನ್ನು 240 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಶೇ.50ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಅದೇ ರೀತಿ ಕಬಿನಿಯಿಂದ ಮೈಸೂರಿಗೆ ನೀರು ಕೊಡಲು ಈ ಹಿಂದೆ ರೂಪಿಸಲಾದ ಯೋಜನೆಯಿಂದ 20 ಎಂ.ಎಲ್.ಡಿ ನೀರು ಒದಗಿಸಲಾಗುತ್ತಿದ್ದು, ಇದರ ಸಾಮರ್ಥ್ಯವನ್ನು 120 ಎಂ.ಎಲ್.ಡಿಗಳಿಗೆ ಹೆಚ್ಚಿಸಲು ತೀರ್ಮಾನಿಸಿದೆ. ಯೋಜನೆಗೆ 180 ಕೋಟಿ ವೆಚ್ಚವಾಗಲಿದ್ದು, ಇದಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದರು.


ಕಬಿನಿ ಯೋಜನೆಗೂ ಟೆಂಡರ್ ಪ್ರಕ್ರಿಯೆ

ರಾಜ್ಯದ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ರೈತರಿಂದ ಭೂಮಿ ಪಡೆದು ಶೇ.50:50 ಅನುಪಾತದ ಆಧಾರದ ಮೇಲೆ ನಿವೇಶನಗಳನ್ನು ನಿರ್ಮಿಸುವ ಕೆಲಸ ನಡೆಯುತ್ತಿದೆ. ರೈತರಿಂದ ಪಡೆದ ಭೂಮಿಯನ್ನು ಅಭಿವೃದ್ಧಿಪಡಿಸಿದ ಮೇಲೆ ರೈತರಿಗೆ ಶೇ.50ರಷ್ಟು ಪಾಲು ಕೊಡಲಾಗುವುದು.ಉಳಿದ ಶೇಕಡಾ ಐವತ್ತರಷ್ಟು ನಿವೇಶನಗಳಿಂದ ಬರುವ ಆದಾಯವನ್ನು ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಒದಗಿಸುವುದು ಎಂದರು. ಹಾಸನದಲ್ಲಿ ಈಗಾಗಲೇ 1 ಸಾವಿರ ಎಕರೆ ಭೂಮಿಯನ್ನು ಪಡೆಯಲಾಗಿದ್ದು ಮೈಸೂರು ಸೇರಿದಂತೆ ಉಳಿದೆಡೆಯೂ ರೈತರಿಂದ ಗಣನೀಯ ಪ್ರಮಾಣದ ಭೂಮಿ ಲಭ್ಯವಾಗಿದೆ ಎಂದರು. ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಎಲ್.ಇ.ಡಿ ವಿದ್ಯುತ್ ದೀಪಗಳ ಅಳವಡಿಕೆ ಕಾರ್ಯ ನಡೆದಿದೆ ಎಂದರು.

ಇನ್ನೆರಡು ದಿನದಲ್ಲಿ ಬೊಮ್ಮಾಯಿ ಸರ್ಕಾರದ ಭವಿಷ್ಯ ನಿರ್ಧರಿಸಲಿರುವ ಪ್ರಧಾನಿ ಮೋದಿ

ಬೆಂಗಳೂರು, ಮೇ 5(ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಕರ್ನಾಟಕ ರಾಜ್ಯಸರ್ಕಾರದ ಭವಿಷ್ಯವನ್ನು ಪ್ರಧಾನಿ ನರೇಂದ್ರ ಮೋದಿ ಒಂದೆರಡು ದಿನದಲ್ಲೇ ನಿರ್ಧರಿಸಲಿದ್ದಾರೆ. ಯುರೋಪ್ ಪ್ರವಾಸದಿಂದ ಪ್ರಧಾನಿ ಮೋದಿ ದೆಹಲಿಗೆ ಆಗಮಿಸಿದ್ದಾರೆ. ಶುಕ್ರವಾರ ಇಲ್ಲವೆ ಶನಿವಾರ ಕರ್ನಾಟಕದ ಪರಿಸ್ಥಿತಿ ಬಗ್ಗೆ ಗೃಹ ಸಚಿವ ಅಮಿತ್ ಷಾ ಅವರೊಟ್ಟಿಗೆ ಒಂದು ಸುತ್ತಿನ ಮಾತುಕತೆ ನಡೆಸಿ, ತಮ್ಮ ನಿರ್ಧಾರವನ್ನು ತಿಳಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.





ಪ್ರಧಾನಿ ತೆಗೆದುಕೊಳ್ಳುವ ನಿರ್ಧಾರದ ಬಗ್ಗೆ ಸ್ವತಃ ಮುಖ್ಯಮಂತ್ರಿ ಸೇರಿದಂತೆ ಅವರ ಸಂಪುಟದ ಸಚಿವರು, ಬಿಜೆಪಿ ಮುಖಂಡರು ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಮೇ 10ರೊಳಗೆ ಬಿಜೆಪಿ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರವನ್ನು ಮುಖ್ಯಮಂತ್ರಿಯವರಿಗೆ ರವಾನೆ ಮಾಡಲಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಇಲ್ಲವೆ ಕೇಂದ್ರ ಹಿರಿಯ ಸಚಿವರೊಬ್ಬರ ಮೂಲಕ ಸಂದೇಶ ಬರಬಹುದೆಂದು ಇದೇ ಮೂಲಗಳು ತಿಳಿಸಿವೆ. ಮುಂಬರುವ ವಿಧಾನಸಭಾ ಚುನಾವಣೆಗೆ ಬೊಮ್ಮಾಯಿ ನಾಯಕತ್ವದಲ್ಲೇ ಚುನಾವಣೆ ಎದುರಿಸುವುದು ಎಂಬ ತೀರ್ಮಾನವಾದಲ್ಲಿ, ಅವರ ಮಂತ್ರಿಮಂಡಲಕ್ಕೆ ಮೇಜರ್ ಸರ್ಜರಿಯಾಗಲಿದೆ. ಒಂದು ವೇಳೆ ನಾಯಕತ್ವ ಬದಲಾವಣೆ ಆಗುವುದಾದರೆ ಪರ್ಯಾಯ ನಾಯಕನ ಆಯ್ಕೆ ಮಾಡಿಕೊಂಡ ನಂತರ ಬೊಮ್ಮಾಯಿ ಅವರಿಗೆ ಸಂದೇಶ ರವಾನೆಯಾಗಬಹುದು. ಈಗಾಗಲೇ ಕೇಂದ್ರ ಗೃಹ ಸಚಿವ ಅಮಿತ್ ಷಾ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಆರ್‌ಎಸ್‌ಎಸ್‌ನ ಹಿರಿಯ ಮುಖಂಡರೊಟ್ಟಿಗೆ ಸಮಾಲೋಚನೆ ನಡೆಸಿ, ಕರ್ನಾಟಕದ ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಕುಂದಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಸರ್ಕಾರದ ▶ 3ನೇ ಪುಟಕ್ಕೆ

ಮೇ 10ಕ್ಕೆ ರಾಜ್ಯ ಸಂಪುಟ ಪುನಾರಚನೆ?

ಹಳೆ ಮುಖಗಳಿಗೆ ಕೊಕ್, ಹೊಸಬರಿಗೆ ಮಣೆ

ಬೆಂಗಳೂರು: ರಾಜ್ಯ ಪ್ರವಾಸಕ್ಕೆ ಆಗಮಿಸಿದ್ದ ವೇಳೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಪುಟ ಪುನಾರಚನೆಯ ನೀಲನಕ್ಷೆಯನ್ನು ಸಿಎಂ ಬೊಮ್ಮಾಯಿಗೆ ನೀಡಿದ್ದಾರೆ ಎನ್ನಲಾಗಿದೆ. ಅದರಂತೆ ಮೇ 10ರಂದು ಸಂಪುಟ ಪುನಾರಚನೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಸಂಪುಟ ಪುನಾರಚನೆಯ ಸಂದರ್ಭದಲ್ಲಿ ಈಗಿರುವ ಕೆಲವು ಪ್ರಮುಖ ಮಂತ್ರಿಗಳನ್ನು ಸಂಪುಟದಿಂದ ಹೊರಗಿಡುವಂತೆ ಅಮಿತ್ ಶಾ ಸಿಎಂ ಬೊಮ್ಮಾಯಿಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮೂಲಗಳ ಪ್ರಕಾರ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಕಂದಾಯ ಸಚಿವ ಆರ್.ಅಶೋಕ್, ವಸತಿ ಸಚಿವ ವಿ.ಸೋಮಣ್ಣ, ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್, ಸಣ್ಣ ಕೈಗಾರಿಕಾ ಸಚಿವ ಎಂಟಿಬಿ ನಾಗರಾಜ್ ಹಾಗೂ ಶಶಿಕಲಾ ಜೊಲ್ಲೆಯವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಇನ್ನು ಈ ಬಾರಿಯ ಸಂಪುಟದಲ್ಲಿ ಕೆಲವು ಹೊಸ ಮುಖಗಳಿಗೆ ಸ್ಥಾನ ನೀಡುವ ಸಾಧ್ಯತೆಯಿದೆ. ಸಂಪುಟ ಪುನಾರಚನೆ ರೇಸ್‌ನಲ್ಲಿ ಅರವಿಂದ ಬೆಲ್ಲದ್, ಬಿ.ವೈ.ವಿಜಯೇಂದ್ರ, ಬಸನಗೌಡ ಪಾಟೀಲ್, ಎನ್.ಮಹೇಶ್, ಪ್ರೀತಂಗೌಡ, ಪಿ.ರಾಜೀವ್ ಸೇರಿದಂತೆ ಹಲವರ ಹೆಸರು ಕೇಳಿ ಬಂದಿದೆ.

ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣ ಕೆಲವರ ವಿಚಾರಣೆ ನಡೆಸಿದ್ದೇವೆ

ಮೈಸೂರು, ಮೇ 5– ಮೈಸೂರಿನ ಎಪಿಎಂಸಿ ಏಜೆಂಟ್ ಎಂ.ಜೆ.ರವಿ ಅಲಿಯಾಸ್ ಕ್ಯಾಪ್ಸಿಕಮ್ ರವಿ ಹತ್ಯೆ ಆರೋಪಿಗಳ ಬಂಧನಕ್ಕಾಗಿ ಡಿವೈಎಸ್ಪಿ ಸುಮಿತ್ ಮಾರ್ಗದರ್ಶನದಲ್ಲಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ. ಈ ಸಂಬಂಧ ಕೆಲವರ ವಿಚಾರಣೆ ನಡೆಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ತಿಳಿಸಿದ್ದಾರೆ.



ಆರ್.ಚೇತನ್

ಪ್ರಕರಣ ಸಂಬಂಧ ಗುರುವಾರ ಸಂಜೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೇ 3ರ ಸಂಜೆ 5.30ರ ಸುಮಾರಿನಲ್ಲಿ ರವಿ ತನ್ನ ಮಳಿಗೆಯಲ್ಲಿದ್ದಾಗ ವಾಹನದಲ್ಲಿ ಬಂದ ಗುಂಪೊಂದು ರವಿ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ, ಹತ್ಯೆಗೈದಿದೆ. ಈ ಸಂಬಂಧ ರವಿ ಸಂಬಂಧಿಕರು ನೀಡಿದ ದೂರಿನನ್ವಯ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದರು. ಹತ್ಯೆಯಾದ ರವಿ ಹಾಗೂ ಆರೋಪಿಗೆ ಪರಿಚಯವಿತ್ತು. ವ್ಯವಹಾರಿಕ ವೈಷಮ್ಯದಿಂದ ಕೆಲ ದಿನಗಳಿಂದ ಗಲಾಟೆ ನಡೆಯುತ್ತಿತ್ತು. ಆ ದ್ವೇಷದಿಂದಲೇ ಹತ್ಯೆ ಮಾಡಿದ್ದಾರೆ ಎಂದು ರವಿಯ ಸಂಬಂಧಿಕರು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಆದರೆ ತನಿಖೆಯ ನಂತರ ನಿಖರ ಕಾರಣ ತಿಳಿಯಲಿದೆ. ಈ ಪ್ರಕರಣದಲ್ಲಿ ಕೆಲವರನ್ನು ವಿಚಾರಣೆ ನಡೆಸಲಾಗಿದೆ. ▶ 3ನೇ ಪುಟಕ್ಕೆ

ಸತ್ತ ಕರು ಒಪ್ಪ ಮಾಡುವಾಗ ದುರಂತ

ಬೆದರಿದ ಎತ್ತುಗಳು; ಕಾವೇರಿ ನದಿಗೆ ಗಾಡಿ ಬಿದ್ದು ಬಾಲಕ ದುರ್ಮರಣ, ಎತ್ತು ಸಾವು

ಕೊಳ್ಳೇಗಾಲ, ಮೇ 5(ನಾಗೇಂದ್ರಸ್ವಾಮಿ)– ಸತ್ತಂತಹ ಕರುವಿನ ಕಳೇಬರ ಒಪ್ಪ ಮಾಡಲು ಹೋಗಿದ್ದ ವೇಳೆ ಘೋರ ದುರಂತವೊಂದು ನಡೆದು ಹೋಗಿದೆ. ಕರುವನ್ನು ಸಾಗಿಸಿದ್ದ ಗಾಡಿಯ ಎತ್ತುಗಳು ಬೆದರಿ, ಗಾಡಿ ಸಮೇತ ಕಾವೇರಿ ನದಿಗೆ ಹಾರಿದ ಪರಿಣಾಮ ಗಾಡಿಯಲ್ಲಿದ್ದ ಬಾಲಕ ಹಾಗೂ ಒಂದು ಎತ್ತು ದುರ್ಮರಣಕ್ಕೀಡಾದ ಘಟನೆ ತಾಲೂಕಿನ ಹಳೇ ಹಂಪಾಪುರದಲ್ಲಿ ಗುರುವಾರ ನಡೆದಿದೆ.

ವಿವರ: ಗ್ರಾಮದ ರೈತ ಬಸವರಾಜು ಅವರ ಪುತ್ರ ಮನು (13) ದುರಂತ ಸಾವಿಗೀಡಾದ ಬಾಲಕನಾಗಿದ್ದು, ಬಸವರಾಜು ಸಾಕಿದ್ದ ಕರು ಸಾವಿಗೀಡಾಗಿತ್ತು. ಕಾವೇರಿ ನದಿ ತೀರದಲ್ಲಿ ಅದನ್ನು ಒಪ್ಪ ಮಾಡುವ ಸಲುವಾಗಿ ಅದನ್ನು ಎತ್ತಿನ ಗಾಡಿಯಲ್ಲಿ ಹಾಕಿಕೊಂಡು ತಮ್ಮ ಪುತ್ರ ಮನು ಜೊತೆ ಗುರುವಾರ ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ನದಿ ತೀರಕ್ಕೆ ಬಸವರಾಜು ತೆರಳಿದ್ದಾರೆ. ಬಾಲಕ ಗಾಡಿಯ ಮೇಲೆ ಕುಳಿತಿದ್ದಾಗ ಗಾಡಿಯಲ್ಲಿದ್ದ ಕರುವಿನ ಕಳೇಬರವನ್ನು ಬಸವರಾಜು ಎತ್ತಿಕೊಳ್ಳಲು ಪ್ರಯತ್ನಿಸಿದ ವೇಳೆ ▶ 3ನೇ ಪುಟಕ್ಕೆ

ರಂಜಾನ್ ದಿನ ದೊಡ್ಡ ಕೌಲಂದೆಯಲ್ಲಿ ಆಕ್ಷೇಪಾರ್ಹ ಪ್ರಸ್ತಾಪ: ಪ್ರಕರಣ ದಾಖಲು

ಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪೊಲೀಸರಿಗೆ ಸೂಚನೆ

ಮೈಸೂರು, ಮೇ 5– ನಂಜನಗೂಡು ತಾಲೂಕು ದೊಡ್ಡ ಕೌಲಂದೆ ಗ್ರಾಮದಲ್ಲಿ ರಂಜಾನ್ ದಿನ ಸಾಮೂಹಿಕ ಪ್ರಾರ್ಥನೆ ನಂತರ ಮನೆಗೆ ತೆರಳುವ ವೇಳೆ ಕೆಲವರು ಆಕ್ಷೇಪಾರ್ಹ ಪ್ರಸ್ತಾಪ ಮಾಡಿರುವ ವಿಡಿಯೋ ವೈರಲ್ ಆಗಿದ್ದು, ಈ ಸಂಬಂಧ ಕೌಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದಲ್ಲಿ ರಂಜಾನ್ ಅಂಗವಾಗಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಮನೆಗೆ ಹೊರಟಿದ್ದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ಮಾಡುತ್ತಿದ್ದವರು 'ನಮ್ಮ ಕೌಲಂದೆ ಮಿನಿ ಪಾಕಿಸ್ತಾನ್ ಗೊತ್ತಾಯ್ತಾ' ಎಂದು ಉರ್ದುವಿನಲ್ಲಿ ಹೇಳಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಆಕ್ಷೇಪಾರ್ಹ ಪ್ರಸ್ತಾಪವನ್ನು ಹಲವು ಸಂಘಟನೆಗಳು ಖಂಡಿಸಿ, ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿವೆ. ಈ ಸಂಬಂಧ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿರುವುದಾಗಿ ತಿಳಿಸಿದ್ದರು.



ಪಾಕ್ ಪರ ಆಕ್ಷೇಪಾರ್ಹ ಪ್ರಸ್ತಾಪ ಮಾಡಿದವರನ್ನು ಬಂಧಿಸುವಂತೆ ಆಗ್ರಹಿಸಿ ನಂಜನಗೂಡಿನಲ್ಲಿ ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಪ್ರಕರಣ ದಾಖಲು: ಈ ವಿಚಾರವಾಗಿ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಸಾಮಾಜಿಕ ಜಾಲತಾಣದಲ್ಲಿ ಕೌಲಂದೆ ಗ್ರಾಮಕ್ಕೆ ಸಂಬಂಧಪಟ್ಟ ವಿಡಿಯೋ ವೈರಲ್ ಆಗಿದ್ದು, ಅದರಲ್ಲಿ ಆಕ್ಷೇಪಾರ್ಹ ವಿಷಯವಿರುವುದು ತಿಳಿದು ಬಂದಿದೆ. ಈ ಸಂಬಂಧ ▶ 3ನೇ ಪುಟಕ್ಕೆ

ಪಿಎಸ್‌ಐ ಹಗರಣ: ಹೈಕೋರ್ಟ್ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲಿ

- ವಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹ
- ಪ್ರಕರಣದಲ್ಲಿ 300 ಕೋಟಿ ಹಗರಣ ನಡೆದಿದೆ
- ಸಚಿವರ ಸಂಬಂಧಿಗಳೇ ಕಿಂಗ್‌ಪಿನ್‌ಗಳು, ಪ್ರಕರಣ ಮುಚ್ಚಿ ಹಾಕಲು ಯತ್ನ
- ಮಧ್ಯವರ್ತಿಗಳು ಮಾತ್ರ ಬಂಧನ, ನಿಜವಾದ ಆರೋಪಿಗಳ ಬಂಧನವಾಗಿಲ್ಲ
- ವಾಚ್ ಪ್ರಕರಣ ಇತ್ಯರ್ಥವಾಗಿದೆ, ಮತ್ತೆ ಚರ್ಚೆ ಯಾಕೆ?
- ಪ್ರಿಯಾಂಕ್ ಖರ್ಗೆ ಮನೆಗೆ ಹೋಗಿ ಮಾಹಿತಿ ಪಡೆಯಲಿ, ನೋಟಿಸ್ ಯಾಕೆ?

ಮೈಸೂರು,ಮೇ5(ಎಂಟಿವೈ)–ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿ ನಡೆದಿರುವ ಅಕ್ರಮದಲ್ಲಿ ಸರ್ಕಾರವೇ ನೇರವಾಗಿ ಶಾಮೀಲಾಗಿದ್ದು, ಪ್ರಕರಣದ ಸತ್ಯಾಸತ್ಯತೆ ಬಯಲಾಗಲು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ತಮ್ಮ ನಿವಾಸದ ಬಳಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಹಗರಣವನ್ನು ಮುಚ್ಚಿ ಹಾಕಲು ಸರ್ಕಾರ ಪ್ರಯತ್ನಿಸುತ್ತಿದೆ. ಈ ಹಗರಣದಲ್ಲಿ ಸರ್ಕಾರವೇ ನೇರವಾಗಿ ಭಾಗಿಯಾಗಿರುವುದು ತಲೆ ತಗ್ಗಿಸಬೇಕಾದ ವಿಚಾರ. ಸಚಿವರು ಹಾಗೂ ಬಿಜೆಪಿ ಮುಖಂಡರು ಕಿಂಗ್‌ಪಿನ್‌ಗಳಿಗೆ ಸಾಥ್ ನೀಡಿ ಅಕ್ರಮ ಎಸಗಿದ್ದಾರೆ ಎಂದರು.

ಸಚಿವರ ಸಂಬಂಧಿಗಳೇ ಕಿಂಗ್‌ಪಿನ್‌ಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಮುಚ್ಚಿ ಹಾಕಲು ಎಲ್ಲಾ ಕಸರತ್ತು ನಡೆಸುತ್ತಿದ್ದಾರೆ. ಇದರಿಂದಲೇ ಪ್ರಕರಣದ ತನಿಖೆ ನಡೆಸಲು ಸಿಐಡಿಗೆ ನೀಡಲಾಗಿದೆ. ಸಿಐಡಿಯವರು ಸಚಿವರಾದ ಆರಗ ಜ್ಞಾನೇಂದ್ರ, ಡಾ.ಅಶ್ವತ್ಥನಾರಾಯಣ ಅವರನ್ನು ಕರೆದು ವಿಚಾರಣೆ ನಡೆಸುತ್ತಾರಾ? ಎಡಿಜಿಪಿಯನ್ನು ತನಿಖೆಗೆ ▶ 6ನೇ ಪುಟಕ್ಕೆ



ಮೈಸೂರಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡುತ್ತಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ

ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ, ಸಿಪಿಐ ಆನಂದ್ ಮೇತ್ರೆ ಬಂಧನ

ಕಲಬುರಗಿ, ಮೇ 5– ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿರುವ ಸಿಐಡಿ, ರಾಯಚೂರು ಜಿಲ್ಲೆಯ ಲಿಂಗಸೂಗೂರು ಡಿವೈಎಸ್‌ಪಿ ಮಲ್ಲಿಕಾರ್ಜುನ ಸಾಲಿ ಹಾಗೂ ಕಲಬುರಗಿ ಬೆರಳಚ್ಚು ವಿಭಾಗದ ಸಿಪಿಐ ಆನಂದ್ ಮೇತ್ರೆ ಅವರನ್ನು ಗುರುವಾರ ಬಂಧಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ನಿನ್ನೆಯಿಂದ ಸುಮಾರು 10 ಗಂಟೆಗಳ ಸುದೀರ್ಘ ವಿಚಾರಣೆ ನಡೆಸಿದ ಸಿಐಡಿ ತಂಡ, ಇಂದು ಇಬ್ಬರೂ ಅಧಿಕಾರಿಗಳನ್ನು ಬಂಧಿಸಿದೆ. ವೈದ್ಯಕೀಯ ತಪಾಸಣೆ ನಂತರ ಆರೋಪಿ ಅಧಿಕಾರಿಗಳನ್ನು ಸಿಐಡಿ ಪೊಲೀಸರು 3ನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಮಲ್ಲಿಕಾರ್ಜುನ ಸಾಲಿ ಮತ್ತು ಆನಂದ್ ಮೇತ್ರೆ ಇಬ್ಬರನ್ನೂ 8 ದಿನಗಳ ಕಾಲ ಪೊಲೀಸ್ ▶ 6ನೇ ಪುಟಕ್ಕೆ





ಪರೀಕ್ಷಾ ಅಕ್ರಮದಲ್ಲಿ ಅಶ್ವತ್ಥ್ ನಾರಾಯಣ ಎಕ್ಸ್‌ಪರ್ಟ್

ಬೆಂಗಳೂರು: ಪರೀಕ್ಷೆಗಳ ವಿಚಾರದಲ್ಲಿ ಡಾ.ಅಶ್ವತ್ಥ್ ನಾರಾಯಣ ಬಹಳ ಅನುಭವಸ್ಥರು, ಹಿಂದೆ ನರ್ಸ್‌ಗಳಿಗೆ ಸರ್ಟಿಫಿಕೇಟ್ ಕೊಡಿಸುವ ವಿಚಾರದಲ್ಲಿ ಅವರ ಹೆಸರು ಕೇಳಿಬಂದಿತ್ತು. ಅಶ್ವತ್ಥ್ ನಾರಾಯಣ ಸಾಕಷ್ಟು ಜನರಿಗೆ ರಾಜಕೀಯಕ್ಕೆ ಬರುವ ಮೊದಲೇ ಸರ್ಟಿಫಿಕೇಟ್ ಕೊಡಿಸಿದ್ದಾರೆ. ಕಾಂಗ್ರೆಸ್‌ನವರು ಈ ವಿಚಾರದ ಬಗ್ಗೆಯೂ ಪ್ರಸ್ತಾಪ ಮಾಡಬೇಕಿತ್ತು ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಜನರು ಮುಂದಿನ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳನ್ನು ತಿರಸ್ಕರಿಸಬೇಕು. 2008ರಲ್ಲಿ ಅಂದಿನ ಸರ್ಕಾರದ ವಿರುದ್ಧ ಹೋರಾಟ ಮಾಡಿದ್ದೆವು. ಆಗ ಟನ್‌ಗಟ್ಟಲೆ ಮಾಹಿತಿ ನನ್ನ ಬಳಿ ಇದ್ದವು. ಸರ್ಕಾರ ಎಲ್ಲ ವಿಚಾರದಲ್ಲಿ ಮೌನವಹಿಸಿದೆ. ಮೌನ ವಹಿಸಿರುವುದರ ಅರ್ಥ ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂದಲ್ಲವೇ ಎಂದು ಹೇಳಿದರು.



ಅಶ್ವತ್ಥ್ ಪರೀಕ್ಷೆ ನಡೆಸುವುದರಲ್ಲಿ ಬಹಳ ಅನುಭವಿಗಳು. ಪರೀಕ್ಷೆ ಬರೆಯದ ನರ್ಸ್‌ಗಳಿಗೆ ಸರ್ಟಿಫಿಕೇಟ್ ಕೊಡಿಸಿದ್ದಾರೆ. ಪಿಎಸ್‌ಐ ನೇಮಕಾತಿ ವಿಚಾರದಲ್ಲಿ ಹಲವರಿಂದ ಹಣ ಪಡೆದಿದ್ದಾರೆ. ಹಣ ನೀಡಿದ ಅಭ್ಯರ್ಥಿಗಳು ಈಗ ಜೈಲಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಈ ಹಿಂದೆ ಡ್ರಗ್ಸ್ ಪ್ರಕರಣದಲ್ಲಿ ಮಾಜಿ ಸಿಎಂ ಹೆಸರು ಕೇಳಿಬಂದಿತ್ತಾದರೂ ಅದು ಅರ್ಧಕ್ಕೆ ನಿಂತು ಹೋಯ್ತು. ಇದನ್ನು ಕೂಡ ಇನ್ನು 10–15 ದಿನಗಳಲ್ಲಿ ಮುಚ್ಚಿಹಾಕುತ್ತಾರೆ ನೋಡುತ್ತಿರಿ ಎಂದು ಆರೋಪಿಸಿದರು.

ಸಚಿವ ಅಶ್ವತ್ಥ್ ನಾರಾಯಣ ಭ್ರಷ್ಟಾಚಾರಕ್ಕೇ ವಿಶ್ವಮಾನವ

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣದ ಆರೋಪಿ ರಕ್ಷಣೆಗೆ ಮುಂದಾಗಿರುವ ಸಚಿವ ಅಶ್ವತ್ಥ್ ನಾರಾಯಣ 'ಭ್ರಷ್ಟಾಚಾರಕ್ಕೇ ವಿಶ್ವಮಾನವ' ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ.



ಅಶ್ವಥ್ ನಾರಾಯಣ್ ತಾನು ವಿಶ್ವಮಾನವ, ಒಕ್ಕಲಿಗ ಎಂದು ಹೇಳಿಕೊಂಡಿರುವ ಬಗ್ಗೆ ಪ್ರಸ್ತಾಪಿಸಿದಾಗ ಬೆಂಗಳೂರಲ್ಲಿ ಪ್ರತಿಕ್ರಿಯಿಸಿದ ಡಿಕೆಶಿ, 'ಅವರು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ. ಅವರು ರಾಮನಗರವನ್ನು ಕ್ಲೀನ್ ಮಾಡುತ್ತೇವೆ ಎಂದಿದ್ದರು, ಈ ಹಿಂದೆ ರಾಜೀವ್ ಗಾಂಧಿ ಆರೋಗ್ಯ ವಿವಿ ಕುಲಸಚಿವರ ನೇಮಕ ವಿಚಾರವಾಗಿ ಗೊಂದಲ ಸೃಷ್ಟಿಸಿದ್ದರು. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರದ ಬಗ್ಗೆ ಶಿಕ್ಷಣ ಇಲಾಖೆಯೇ ದೂರು ನೀಡಿದೆ. ಆ ಕುಲಸಚಿವರು ಯಾರ ಮನೆಗೆ ಎಷ್ಟು ಬಾರಿ ಹೋಗಿದ್ದಾರೆ, ಅವರ ಸಚಿವರ ಒಡನಾಟ ಏನು, ಅವರ ನೇತೃತ್ವ ಇರುವ ಸಂಸ್ಥೆಗಳಲ್ಲಿ ಯಾವ ರೀತಿ ಅಕ್ರಮ ನಡೆಯುತ್ತಿದೆ, ಅಲ್ಲೆಲ್ಲ ವಿಶ್ವದ ನಂಟಿದೆ ಎಂದು ಅವರೇ ಹೇಳುವುದಾದರೆ ಎಲ್ಲ ಅಕ್ರಮಗಳಿಗೂ ಅವರೇ ಪಿತಾಮಹ ಅಲ್ಲವೇ, ಎಲ್ಲ ಭ್ರಷ್ಟಾಚಾರಗಳಿಗೆ ವಿಶ್ವಮಾನವ ಅವರೇ ಅಲ್ಲವೇ, ಎನ್‌ಇಪಿ ನಾನೇ ಮೊದಲು ಜಾರಿಗೆ ತರುತ್ತೇನೆ ಎಂದು ಹೇಳಲು ತಟ್ಟಿಕೊಂಡವರು ಈಗೇನು ಮಾಡಿದ್ದಾರೆ,' ಎಂದು ತಿರುಗೇಟು ನೀಡಿದರು.

ಮೈಸೂರು ಮಿತ್ರ

ಶುಕ್ರವಾರ 6 ಮೇ 2022

ಮೈಸೂರಲ್ಲಿ ನಾಳೆ ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ

ಗ್ರಂಥ ಬಿಡುಗಡೆ, 3 ದಿನಗಳ ಕಲೋತ್ಸವ



ಮೈಸೂರು,ಮೇ5(ಆರ್‌ಕೆಬಿ)–ಮೈಸೂರಿನ ಬ್ರಹ್ಮ ವಿದ್ಯಾಸಂಸ್ಥೆ, ರಸಋಷಿ ಸಂಶೋಧನಾ ಕೇಂದ್ರ, ಚನ್ನಪಟ್ಟಣದ ಸ್ವರಾಸಾಧ್ಯಾ, ಅಮೆರಿಕಾದ ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಮೈಸೂರಿನಲ್ಲಿ ಮೇ 9ರಂದು ಸಂಜೆ 7 ಗಂಟೆಗೆ ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ, ಗ್ರಂಥ ಬಿಡುಗಡೆ ಮತ್ತು ಕಲೋತ್ಸವ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ ಎಂದು ಹಿರಿಯ ಸಂಗೀತ ವಿದ್ವಾಂಸ ರಾ.ಸ.ನಂದಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಮೈಸೂರಿನ ಜೆಎಲ್‌ಬಿ ರಸ್ತೆ ವಾಸುದೇವಾಚಾರ್ಯ ಭವನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖದಲ್ಲಿ ಶಾಸಕ ಎಸ್.ಎ.ರಾಮದಾಸ್, ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಸ.ಚಿ.ರಮೇಶ್ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಶ್ರೇಷ್ಠ ವಾಗ್ಗೇಯಕಾರ, ವಾಗ್ಗೇಯಕಾರ ರ.ವಿಶ್ವೇಶ್ವರನ್ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ವಾರಣಾಸಿಯ ಐಜಿಎನ್‌ಸಿಎ ನಿರ್ದೇಶಕ ಡಾ.ವಿಜಯಶಂಕರ್ ಶುಕ್ಲ ಅವರಿಗೆ ಶಾಸ್ತ್ರಸೂರಿ ಪ್ರಶಸ್ತಿ, ವಸಂತ ಮಾಧವಿ (ಕರ್ನಾಟಕ ಸಂಗೀತ), ಡಾ.ಲಲಿತಾ ಶ್ರೀನಿವಾಸನ್ (ಭರತನಾಟ್ಯ), ಡಾ. ಶ್ರೀಕಾಂತಂ ನಾಗೇಂದ್ರಶಾಸ್ತ್ರಿ (ಸಂಗೀತ ಶಾಸ್ತ್ರ), ಡಾ.ಎಸ್.ಆರ್. ನರಸಿಂಹಮೂರ್ತಿ (ಆಗಮ–ಶ್ರೀವಿದ್ಯೆ) ಅವರಿಗೆ ಸಂಸ್ಥಾನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಇದರ ಅಂಗವಾಗಿ ಆಯೋಜಿಸಿರುವ ಮೂರು ದಿನಗಳ ಕಲೋತ್ಸವದಲ್ಲಿ ಮೇ 9ರಂದು ಸಂಜೆ 6 ಗಂಟೆಗೆ ಯುಗಳ ಗಾಯನದಲ್ಲಿ ಕಾಂಚನಾ ಸಹೋದರಿಯರಾದ ಶ್ರೀರಂಜನಿ ಮತ್ತು ಶ್ರುತಿರಂಜನಿ ಅವರಿಂದ ಯುಗಳ ಗಾಯನ, ಮೇ 10ರಂದು ಸಂಜೆ 6ಕ್ಕೆ ಯುವ ಗಾಯಕ ಹರ್ಷ ಮತ್ತು ಸಂಗಡಿಗರಿಂದ ಕರ್ನಾಟಕ ಸಂಗೀತ ಕಛೇರಿ, ಸಂಜೆ 7ಕ್ಕೆ ನಾಟ್ಯ ವಿದುಷಿ ಡಾ.ರಾಧಿಕಾ ನಂದಕುಮಾರ್ ಮತ್ತು ಸಂಗಡಿಗರಿಂದ ಭರತನಾಟ್ಯ, ಮೇ 11ರಂದು ಸಂಜೆ ವಾಗ್ಗೇಯ ವಿಶ್ವೇಶ್ವರೀ ಡಾ.ರಾ.ವಿಶ್ವೇಶ್ವರನ್ ಅವರ ಸಂಗೀತ ಕೃತಿಗಳನ್ನು ಆಧರಿಸಿದ ವಿಶೇಷ ಸಂಗೀತ ಕಾರ್ಯಕ್ರಮ, ಸಂಜೆ 6 ಗಂಟೆಗೆ ಸಂಗೀತ ವಿದ್ವಾನ್ ಡಾ.ಕೆ.ವರದರಂಗನ್ ಮತ್ತು ಸಂಗಡಿಗರಿಂದ ಅದ್ಭುತವಾದ ಗಾಯನ ಕಛೇರಿ, ಸಂಜೆ 7 ಗಂಟೆಗೆ ವಾಗ್ಗೇಯಕಾರ ಡಾ.ರಾ.ವಿಶ್ವೇಶ್ವರನ್ ಅವರಿಂದ ಅದ್ಭುತವಾದ ಅಮೋಘ ಗಾಯನ ಕಛೇರಿ ಇರಲಿದೆ ಎಂದು ಹೇಳಿದರು. ಗೋಷ್ಠಿಯಲ್ಲಿ ಮೋಹನ್‌ದೇಶ್‌ರಾಜ್ ಅರಸು, ಎಂ.ಎಸ್.ಕೌಸ್ತುಭ, ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ನಾಳೆ ಪಿ.ಬಿ.ಶ್ರೀನಿವಾಸ್ ಚಿತ್ರಗೀತೆಗಳ ಗಾಯನ, ಗುರುವಂದನ ಕಾರ್ಯಕ್ರಮ



ಮೈಸೂರು,ಮೇ5(ಆರ್‌ಕೆಬಿ)–ಮೈಸೂರಿನ ಗಾನ ಚಂದನ ಕಲಾ ಬಳಗದಿಂದ ಮೇ 7ರಂದು ಸಂಜೆ 5 ಗಂಟೆಗೆ ನಂಜುಮಳಿಗೆ ವೃತ್ತದ ಬಳಿಯಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಖ್ಯಾತ ಹಿನ್ನೆಲೆ ಗಾಯಕರಾಗಿದ್ದ ಡಾ.ಪಿ.ಬಿ.ಶ್ರೀನಿವಾಸ್ ಅವರ ಹಳೆಯ ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮ ಹಾಗೂ ಗುರುವಂದನೆ ಕಾರ್ಯಕ್ರಮ ಆಯೋಜಿಸಿದೆ.

ಬಳಗದ ವ್ಯವಸ್ಥಾಪಕ ಆರ್.ಸುಧೀಂದ್ರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಡಾ.ಪಿ.ಬಿ.ಶ್ರೀನಿವಾಸ್ ಒಂದು ನೆನಪು' ಕಾರ್ಯಕ್ರಮದಲ್ಲಿ 60–70ರ ದಶಕದಲ್ಲಿ ಅವರು ಹಾಡಿರುವ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ನಡೆಯಲಿದೆ. ಬಳಗದ ಗಾಯಕರು ಚಿತ್ರಗೀತೆಗಳನ್ನು ಹಾಡಲಿದ್ದಾರೆ ಎಂದರು. ನಂತರ ಗುರುವಂದನ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಕೆ.ಎಸ್.ರಂಗರಾಜನ್, ಹೆಚ್.ಎ.ಪ್ರಭಾಮೂರ್ತಿ, ಎಸ್.ಎಸ್. ವಾಗೀಶನ್, ಆರ್.ಜಯಶೇಖರ್, ಸುವರ್ಣ, ವಿ.ನಾಗರಾಜ, ಎಸ್.ಎನ್.ರುಕ್ಮಿಣಿಯಮ್ಮ, ಬಿ.ವಿ.ನಂಜುಂಡಸ್ವಾಮಿ ಹಾಗೂ ಇನ್ನಿತರರನ್ನು ಸನ್ಮಾನಿಸಲಾಗುವುದು ಎಂದರು.

ಸೋಮಾನಿ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಹೆಚ್.ಎಸ್. ಮಲ್ಲಿಕಾರ್ಜುನಶಾಸ್ತ್ರಿ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಬಳಗದ ಸದಸ್ಯರಾದ ರಾಜೇಂದ್ರ, ಆರ್. ನಟರಾಜು, ಹೆಚ್.ಎಸ್.ಗೋಪಾಲಕೃಷ್ಣ, ಅಶ್ವಿನಿ ಪ್ರಶಾಂತ್ ಉಪಸ್ಥಿತರಿದ್ದರು.



ಶ್ರೀ ರಾಮಾನುಜಾಚಾರ್ಯ ಜಯಂತಿ ಅಂಗವಾಗಿ ಮೈಸೂರಿನ ಪುಸ್ತಕಂ ಶ್ರೀ ಸಂತಾನ ಗೋಪಾಲಕೃಷ್ಣ ದೇವಸ್ಥಾನದಲ್ಲಿ ರಾಮಾನುಜಾಚಾರ್ಯರ ಉತ್ಸವ ನಡೆಯಿತು. ಈ ವೇಳೆ ಮುಡಾ ಸದಸ್ಯ ನವೀನ್‌ಕುಮಾರ್, ದೇವಸ್ಥಾನದ ಅರ್ಚಕರಾದ ರಾಮಾನುಜ, ದಿನೇಶ್, ಶೇಷಾದ್ರಿ ಹಾಗೂ ಸುದರ್ಶನ್, ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

ರೈತರ ಮಹತ್ವ ಸಾರುವ ಫ್ಯಾಷನ್ ಶೋ ಸ್ಪರ್ಧೆ ವಿಜೇತರು



ಮೈಸೂರು, ಮೇ 5 (ಆರ್‌ಕೆಬಿ)– ಸಾಮಾನ್ಯವಾಗಿ ಫ್ಯಾಷನ್ ಶೋಗಳಲ್ಲಿ ನೀಡುವ ವಿಷಯಕ್ಕೆ ಭಿನ್ನವಾಗಿ ಈ ಬಾರಿ ತಮ್ಮ ಸಂಸ್ಥೆ ವತಿಯಿಂದ ರೈತರ ಮಹತ್ವ ತಿಳಿಸುವ ಫ್ಯಾಷನ್ ಶೋ ಸ್ಪರ್ಧೆ ಆಯೋಜಿಸಲಾಗಿತ್ತಲ್ಲದೆ, ಅದರಲ್ಲಿ ವಿವಿಧ ವಯೋಮಾನದವರು ಪಾಲ್ಗೊಂಡು ಬಹುಮಾನ ಗಳಿಸಿದರು ಎಂದು ತಿಬ್ಬಾಸ್ ಮಾಡೆಲಿಂಗ್ ಗ್ರೂಪ್‌ನ ಡಿ.ಸಿ.ನಾಗೇಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಉಡುಪಿ, ಮಂಗಳೂರು, ಮೂಡಬಿದರೆ, ಮೈಸೂರು, ಬೆಂಗಳೂರು, ಚಾಮರಾಜನಗರ ಮೊದಲಾದ ಕಡೆಗಳಿಂದ ವಿವಿಧ ವಯೋಮಾನದ ಸ್ಪರ್ಧಿಗಳು ಆಗಮಿಸಿದ್ದರು.

ಪ್ರಿನ್ಸೆಸ್ ವಿಭಾಗದಲ್ಲಿ ಉಡುಪಿಯ ವೃತ್ವ, ಪ್ರಿನ್ಸ್ ವಿಭಾಗದಲ್ಲಿ ಮಂಗಳೂರಿನ ನೀಲ್, ಮಿಸ್ಟರ್ ವಿಭಾಗದಲ್ಲಿ ಮೂಡಬಿದರಿಯ ಅರುಣ್‌ಕುಮಾರ್, ಮಿಸ್ ವಿಭಾಗದಲ್ಲಿ ಮೈಸೂರಿನ ವಿದ್ಯಾ, ಮಿಸ್ಟರ್ ಟೀನ್ ವಿಭಾಗದಲ್ಲಿ ಬೆಂಗಳೂರಿನ ಯಶಸ್, ಮಿಸ್ ಟೀನ್ ವಿಭಾಗದಲ್ಲಿ ಮೈಸೂರಿನ ತೀಕ್ಷಾ, ಮಿಸಸ್ ಮ್ಯಾರಿಡ್ ವುಮೆನ್ ವಿಭಾಗದಲ್ಲಿ ಬೆಂಗಳೂರಿನ ಖುಷಿ, ಮಾಮ್ ವಿಥ್ ಕಿಡ್ ವಿಭಾಗದಲ್ಲಿ ಚಾಮರಾಜನಗರದ ಸುವರ್ಣ ಮತ್ತು ಸುಚಿತ್, ಗ್ರಾಂಡ್ ಮದರ್ ವಿಭಾಗದಲ್ಲಿ ಮೈಸೂರಿನ ಡಾ.ಯದುಗಿರಿ, ಅನ್ ಮ್ಯಾರಿಡ್ ಕಪಲ್ಸ್ ವಿಭಾಗದಲ್ಲಿ ಬೆಂಗಳೂರಿನ ದುರ್ಗೇಶ್ ಮತ್ತು ನೇತ್ರಾ ವಿಜೇತರಾದರು ಎಂದರು.

ಮೈಸೂರಿನ ಕಿಂಗ್ಸ್ ಎಲೈಟ್ ರೆಸಾರ್ಟ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 16 ವಿಭಾಗಗಳನ್ನು ಪರಿಚಯಿಸಲಾಯಿತು. ಫ್ಯಾಷನ್ ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟು ವಿಭಾಗಗಳನ್ನು ಪರಿಚಯಿಸಿದ ಸ್ಪರ್ಧೆ ಇದಾಗಿತ್ತು. ಈ ವೇಳೆ ತಮ್ಮ ಪ್ರದೇಶಗಳಲ್ಲಿನ ರೈತರ ವೇಷಭೂಷಣ ಮತ್ತು ರೈತರ ಮಹತ್ವ ತಿಳಿಸುವ ಮಾತನ್ನಾಡಲು ಅವಕಾಶ ನೀಡಲಾಗಿತ್ತು ಎಂದರು. ಗೋಷ್ಠಿಯಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ವಿಜೇತರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 5– ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ವೀರಶೈವ ಸಜ್ಜನ ಸಂಘದ ವತಿಯಿಂದ ಜೆಎಸ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಮತ್ತು ಯೋಗ ಪ್ರಾಣ ವಿದ್ಯಾಕೇಂದ್ರದ ಸಹಯೋಗದಲ್ಲಿ ಮೇ 10ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 1.30ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮಂಡಿ ಮೊಹಲ್ಲಾದಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿರುವ ಈ ಶಿಬಿರದಲ್ಲಿ ಹೃದಯ ಮತ್ತು ಚರ್ಮ ತಪಾಸಣೆ, ಕಣ್ಣಿನ ಶಸ್ತ್ರ ಚಿಕಿತ್ಸೆ, ಅವಶ್ಯವಿದ್ದಲ್ಲಿ ಓದಲು ಉಪಯೋಗಿಸುವ ಕನ್ನಡವನ್ನು ಉಚಿತವಾಗಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೇ 25ರಂದು ನಂಜನಗೂಡು ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ

'ಸಪ್ತಪದಿ' ಸಾಮೂಹಿಕ ವಿವಾಹ





ಮೈಸೂರು ಡಿಸಿ ಕಚೇರಿ ಸಭಾಂಗಣದಲ್ಲಿ 'ಸಪ್ತಪದಿ' ಸಾಮೂಹಿಕ ವಿವಾಹ ಕುರಿತು ಎಡಿಸಿ ಡಾ.ಮಂಜುನಾಥಸ್ವಾಮಿ ಪೂರ್ವಭಾವಿ ಸಭೆ ನಡೆಸಿದರು.



ವಿವಾಹವಾಗಲಿಚ್ಛಿಸುವವರು ಮೇ 13ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬೇಕು. ಮೇ 16ರಂದು ಅರ್ಜಿ ಪರಿಶೀಲಿಸಿ ಅರ್ಹ ವಧು–ವರರ ಪಟ್ಟಿ ತಯಾರಿಸಿ ಪ್ರಕ್ರಿಯೆ ನಡೆಸಿ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.
–ಡಾ.ಮಂಜುನಾಥಸ್ವಾಮಿ

ಮೈಸೂರು, ಮೇ 5(ಆರ್‌ಕೆ)– ಮೇ 25 ರಂದು ನಂಜನಗೂಡಿನ ಶ್ರೀನಂಜುಂಡೇಶ್ವರ ದೇವಸ್ಥಾನದಲ್ಲಿ 'ಸಪ್ತಪದಿ' ಸಾಮೂಹಿಕ ಸರಳ ವಿವಾಹ ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ 'ಸಪ್ತಪದಿ' ಯೋಜನೆಯಡಿ ಜಿಲ್ಲಾಡಳಿತ ಹಾಗೂ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಆಯೋಜಿಸಿರುವ ಸಾಮೂಹಿಕ ವಿವಾಹ ಕಾರ್ಯಕ್ರಮ ಕುರಿತು ಪೂರ್ವಭಾವಿ ಸಭೆ ನಡೆಸಿದ ಅಡಿಷನಲ್ ಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಮೇ 25ರಂದು ಬೆಳಗ್ಗೆ 10.55ರಿಂದ 11.40 ಗಂಟೆವರೆಗೆ ಕಟಕ ಶುಭ ಲಗ್ನದಲ್ಲಿ ವಿವಾಹ ನಡೆಸಲು ಅಗತ್ಯ ತಯಾರಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದುಂದುವೆಚ್ಚದಲ್ಲಿ ಮದುವೆ ಮಾಡಿ ಸಾಲದ ಸುಳಿಯಲ್ಲಿ ಸಿಲುಕುವ ಬಡ ಹಾಗೂ ಮಧ್ಯಮ ಕುಟುಂಬಗಳು ಜೀವನ ಪೂರ್ತಿ ಆರ್ಥಿಕ ಸಂಕಷ್ಟ ಎದುರಿಸುವುದನ್ನು ತಪ್ಪಿಸಲು ಸರ್ಕಾರ ಜಾರಿಗೆ ತಂದಿರುವ 'ಸಪ್ತಪದಿ' ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದರು.

ವಿವಾಹ ಮಾಡಿಕೊಳ್ಳುವ ವಧು–ವರನಿಗೆ ಪಂಚೆ, ಶರ್ಟ್, ಶಲ್ಯ, ಸೀರೆ, ರವಿಕೆ ಖರೀದಿಸಲು ಪ್ರೋತ್ಸಾಹ ಧನ, ಚಿನ್ನದ ತಾಳಿ, ಗುಂಡು, ಹೂವಿನ ಹಾರ ನೀಡಲಾಗುವುದು ಹಾಗೂ ವಧು–ವರನ ಕಡೆಯ ಬಂಧುಗಳಿಗೆ ಊಟೋಪಚಾರವನ್ನು ದೇವಸ್ಥಾನದ ವತಿಯಿಂದ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವಿವಾಹದಲ್ಲಿ ವಧು–ವರನ ತಂದೆ–ತಾಯಿ, ಸಾಕ್ಷಿದಾರರು ಉಪಸ್ಥಿತರಿರಬೇಕು. ತಂದೆ–ತಾಯಿ ನಿಧನರಾಗಿದ್ದಲ್ಲಿ ವಾರಸುದಾರರು ಕಡ್ಡಾಯವಾಗಿ ಹಾಜರಿದ್ದು ಮದುವೆಗೆ ಒಪ್ಪಿಗೆ ನೀಡಬೇಕು. ನಿಯಮದಂತೆ ವಧುವಿಗೆ 18 ವರ್ಷ, ವರನಿಗೆ 21 ವರ್ಷ ತುಂಬಿರಬೇಕು. ಅದಕ್ಕೆ ಸೂಕ್ತ ದಾಖಲೆ ಸಲ್ಲಿಸಬೇಕು. ಮೊದಲ ವಿವಾಹಕ್ಕೆ ಮಾತ್ರ ಅವಕಾಶವಿದ್ದು, ಸುಳ್ಳು ದಾಖಲೆ ಸಲ್ಲಿಸಿ ವಿವಾಹವಾಗಲು ಯತ್ನಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಶ್ರೀ ನಂಜುಂಡೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ರವೀಂದ್ರ, ಮುಜರಾಯಿ ತಹಸೀಲ್ದಾರ್ ಕೃಷ್ಣ, ಅರಮನೆ ಮುಜರಾಯಿ ಕಚೇರಿ ವ್ಯವಸ್ಥಾಪಕಿ ಎನ್.ಎಸ್.ಶೀಲಾ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಜಿಲ್ಲಾ ಅಧಿಕಾರಿ ಹೆಚ್‌ಎಸ್.ಬಿಂದಿಯಾ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಸಮಾಜ ಕಲ್ಯಾಣ ಇಲಾಖೆ ಲೆಕ್ಕಾಧಿಕಾರಿ ರಾಜ್ ನಾಯಕ್ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.

ಇಂದು ಅತಿರುದ್ರ ಮಹಾಯಾಗ ಸಂಪನ್ನ

ಮೈಸೂರು, ಮೇ 5–ಮೈಸೂರಿನ ವಿಷ್ಣು ಪಾರಾಯಣ ಟ್ರಸ್ಟ್ ಮತ್ತು ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕಾ ಸೇವಾ ಟ್ರಸ್ಟ್ ಆಶ್ರಯದಲ್ಲಿ ನಗರದ ಖಿಲ್ಲೆ ಮೊಹಲ್ಲಾದಲ್ಲಿರುವ ಶಂಕರ ಮಠ (ಗನ್ ಹೌಸ್ ಎದುರು)ದಲ್ಲಿ ಕಳೆದ ಸೋಮವಾರ (ಮೇ 2)ದಿಂದ ಲೋಕ ಕಲ್ಯಾಣಕ್ಕಾಗಿ ನಡೆಯುತ್ತಿರುವ ಅತಿರುದ್ರ ಮಹಾಯಾಗ ನಾಳೆ (ಮೇ 6) ಸಂಪನ್ನಗೊಳ್ಳಲಿದೆ. ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀಸುಬುದೇಂದ್ರ ತೀರ್ಥ ಶ್ರೀಪಾದಂಗಳವರು, ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಅರ್ಜುನ ಅವಧೂತರ ಆಶೀರ್ವಾದದೊಂದಿಗೆ ಈ ಅತಿರುದ್ರ ಮಹಾಯಾಗ ನಡೆಯುತ್ತಿದೆ.

ಪ್ರತಿನಿತ್ಯ ಮಹಾಗಣಪತಿ ಹೋಮ, ನಕ್ಷತ್ರ ಹೋಮ ಸೇರಿದಂತೆ ಹಲವಾರು ಹೋಮಗಳು, ಅಭಿಷೇಕಗಳು ನಡೆಯುತ್ತಿದ್ದು, ಕೊನೆಯ ದಿನವಾದ ಶುಕ್ರವಾರ 11 ವಿವಿಧ ಹೋಮಗಳೊಂದಿಗೆ ಮಹಾಯಾಗವು ಸಂಪನ್ನಗೊಳ್ಳಲಿದೆ.

4 ದಿನಗಳ ಕಾಲ ನಡೆದ ಮಹಾಯಾಗದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಕಾರ್ಪೊರೇಟರ್‌ಗಳು, ಮಾಜಿ ಕಾರ್ಪೊರೇಟರ್‌ಗಳು, ಚಲನ ಚಿತ್ರ ನಟರು, ಕಿರುತೆರೆ ನಟರು, ಗಾಯಕರು, ಗಣ್ಯರು ಭಾಗವಹಿಸಿದ್ದರು.



ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರು ಗುರುವಾರ ಮಾಜಿ ಮುಖ್ಯಮಂತ್ರಿ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಮೈಸೂರಿನ ರಾಮಕೃಷ್ಣನಗರದ ಅವರ ನಿವಾಸದಲ್ಲಿ ಭೇಟಿಯಾಗಿ ಸಮಾಲೋಚನೆ ನಡೆಸಿದರು. ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಸದಸ್ಯರಾದ ರಾಜೀವ್ ಅಣ್ಣೂರು, ಶಿವರಾಮು, ಯೂತ್ ಕಾಂಗ್ರೆಸ್ ಅಧ್ಯಕ್ಷ ಬೊಮ್ಮನಹಳ್ಳಿ ವೆಂಕಟೇಶ್, ಮುಖಂಡರಾದ ವೀರೇಂದ್ರ, ರಾಜೇಶ್, ನಂದೀಶ್, ಮಧು, ಚೇತನ್, ಶಂಕರ್, ರಾಜೇಂದ್ರ, ಡಾ.ಸುರೇಶ್, ವೇದಮೂರ್ತಿ, ಮಹೇಶ್, ಕಾಂತರಾಜ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ನಿವೃತ್ತ ನ್ಯಾಯಮೂರ್ತಿ ಚಂದ್ರು ಭೇಟಿ

ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ಕಾನೂನು ಮತ್ತು ಮಾನವ ಹಕ್ಕುಗಳ ನಿಯಮ ಕುರಿತು ಉಪನ್ಯಾಸ




ಮೈಸೂರು,ಮೇ 5– ಜೆಎಸ್‌ಎಸ್ ಕಾನೂನು ಕಾಲೇಜು ಮತ್ತು ನೀತಿ ಫೋರಂ ಆಫ್ ಜೆಎಸ್‌ಎಸ್‌ಎಲ್‌ಸಿ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ಸಿಲ್ವರ್ ಜ್ಯೂಬಿಲಿ ಸಭಾಂಗಣದಲ್ಲಿ ನಾಳೆ (ಮೇ 6) ಬೆಳಗ್ಗೆ 10.30 ಗಂಟೆಗೆ ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು 'ಕಾನೂನು ಮತ್ತು ಮಾನವ ಹಕ್ಕುಗಳ ನಿಯಮ' ಕುರಿತು ಉಪನ್ಯಾಸ ನೀಡಲಿದ್ದಾರೆ. ಜೆಎಸ್‌ಎಸ್ ಕಾನೂನು ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ.ಕೆ.ಎಸ್.ಸುರೇಶ್, ಪ್ರಿನ್ಸಿಪಾಲ್ ಡಾ.ಎಸ್.ನಟರಾಜು ಈ ವೇಳೆ ಉಪಸ್ಥಿತರಿರುವರು.

ಸಾಮಾಜಿಕ ಅಂತರಕ್ಕಾಗಿ ಮೂಷಿಕನ ದೂರ ಮಾಡಿದ ಗಣೇಶ!

ವ್ಯಂಗ್ಯಚಿತ್ರ ಪ್ರದರ್ಶನದಲ್ಲಿ ಕೋವಿಡ್ ಕಾಲದ ಅನೇಕ ವೈಚಿತ್ರ್ಯಗಳ ಅನಾವರಣ

ಮೈಸೂರು,ಮೇ 5(ಪಿಎಂ)– ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಉದ್ದೇಶದಿಂದಲೇ ಗಣೇಶ ತನ್ನ ವಾಹನ ಮೂಷಿಕನನ್ನೇ ತೊರೆದು, ಅದರ ಹಿಂದೆ ಹಿಂದೆ ನಡೆದು ಸಾಗುತ್ತಾನೆ. ಇಂತಹ ವ್ಯಂಗ್ಯಚಿತ್ರ ಸೇರಿದಂತೆ ಕೋವಿಡ್‌ನಿಂದ ಉಂಟಾದ ಅನೇಕ ವೈಚಿತ್ರ್ಯಗಳನ್ನು ಅನಾವರಣಗೊಳಿಸುವ 25ಕ್ಕೂ ಹೆಚ್ಚು ವ್ಯಂಗ್ಯಚಿತ್ರಗಳು ಅಲ್ಲಿ ಗಮನ ಸೆಳೆದವು.

ರಂಗಾಯಣದ ಭೂಮಿಗೀತ ಸಭಾಂಗಣದ ಅಂಗಳದಲ್ಲಿ ಇಂತಹ ವ್ಯಂಗ್ಯಚಿತ್ರಗಳು ನೋಡುಗರಲ್ಲಿ ಕೌತುಕ ಮೂಡಿಸಿದವು. ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಮತ್ತು ರಂಗಾಯಣದ ಜಂಟಿ ಆಶ್ರಯದಲ್ಲಿ 'ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ' ಅಂಗವಾಗಿ 'ಕಾರ್ಟೂನ್ ಕುಂಚದಲ್ಲಿ ಕೊರೊನಾ' ಶೀರ್ಷಿಕೆಯಡಿ ಇಲ್ಲಿ ಹಮ್ಮಿಕೊಂಡಿರುವ ವ್ಯಂಗ್ಯಚಿತ್ರಕಾರ ಎಂ.ವಿ. ನಾಗೇಂದ್ರಬಾಬು (ಬ್ಯಾಂಟರ್‌ಬಾಬು) ಅವರ ವ್ಯಂಗ್ಯಚಿತ್ರಗಳ ಪ್ರದರ್ಶನದಲ್ಲಿ ಇಂತಹ ಕುತೂಹಲ ನೋಡುಗರಲ್ಲಿ ಮೂಡಿತ್ತು.




ಅತಿಥಿ–ಗಣ್ಯರಿಗೆ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರಬಾಬು ಮಾಹಿತಿ ನೀಡಿದರು.

ಉದ್ಘಾಟನೆ: ಗುರುವಾರ ಬೆಳಗ್ಗೆ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಬೃಹತ್ ಕೃತಿಯೊಂದು ಹೇಳುವುದನ್ನು ಕೇವಲ ಒಂದು ವ್ಯಂಗ್ಯಚಿತ್ರ ಹೇಳಬಲ್ಲದು. ಹಾಗಾಗಿಯೇ ಅದಕ್ಕೊಂದು ಮಹತ್ವದ ಸ್ಥಾನವಿದೆ. ವಸ್ತುಸ್ಥಿತಿ ಅನಾವರಣಗೊಳಿಸಿ, ಸಮಾಜದ ಓರೆಕೋರೆ ತಿದ್ದುವುದರಲ್ಲಿಯೂ ವ್ಯಂಗ್ಯಚಿತ್ರ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಕಲಾ ಮಾಧ್ಯಮಗಳು ನಿರಂತರ ತಿದ್ದುವ ಪ್ರಕ್ರಿಯೆ ಮೂಲಕ ಸಮಾಜ ಬೆಳೆಸಲು ನೆರವಾಗುತ್ತಿವೆ ಎಂದು ತಿಳಿಸಿದರು.

ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಸಮಾಜದ ಜೀವನಶೈಲಿಯಲ್ಲಿ ಉಂಟಾದ ಹಲವು ಪಲ್ಲಟಗಳು ಇಲ್ಲಿನ ವ್ಯಂಗ್ಯಚಿತ್ರಗಳಲ್ಲಿ ಅನಾವರಣಗೊಂಡು ನೋಡುಗರನ್ನು ಚಿಂತನೆಗೆ ಹಚ್ಚಿದ್ದವು. ಮೇ 7ರವರೆಗೆ ಬೆಳಗ್ಗೆ 10.30ರಿಂದ ಸಂಜೆ 5ರವರೆಗೆ ಪ್ರದರ್ಶನ ವೀಕ್ಷಿಸಲು ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಕಲಾ ಪೋಷಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಚಿತ್ರ ಪ್ರಕಾರಗಳಲ್ಲಿ ವ್ಯಂಗ್ಯಚಿತ್ರ ಮುದ ನೀಡುವ ಜೊತೆಗೆ ವಸ್ತುಸ್ಥಿತಿ ಮೇಲೆ ಬೆಳಕು ಚೆಲ್ಲುತ್ತದೆ. 'ವ್ಯಂಗ್ಯಚಿತ್ರ' ಮುದ್ರಣ ಮಾಧ್ಯಮದಲ್ಲಿ ಪ್ರಭಾವಶಾಲಿಯಾಗಿದೆ. ಸಮಾಜದ ವಿದ್ಯಮಾನಗಳನ್ನು ವ್ಯಂಗ್ಯದ ಮೂಲಕ ಅನಾವರಣಗೊಳಿಸಿ, ಸಮಾಜ ಎಚ್ಚರಿಸುವ ಕೆಲಸ ಮಾಡುತ್ತದೆ. ಇಂತಹ ಕ್ಷೇತ್ರದಲ್ಲಿ ನಾಗೇಂದ್ರಬಾಬು ಸಾಕಷ್ಟು ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಭೂನ್ಯಾಯ ಮಂಡಳಿ ಸದಸ್ಯ ಶ್ರೀಕಂಠಸ್ವಾಮಿ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.05.2022 ಶುಕ್ರವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಪಂಚಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ – ಡಾ. ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎನ್. ಹೇಮಾ, ವ್ಯಾಖ್ಯಾನ– ಡಾ. ಲತಾ ಮೈಸೂರು, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಚಿಟ್ಟಿ ಬಾಬು – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ, ಪ್ರಸ್ತುತಿ–ಉಮೇಶ್ ಎಸ್.ಎಸ್., 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 3.00 ವಿ. ಮಾಲಿನಿ–ಕಥಾ, 4.00 ಮಹಿಳಾರಂಗ–ಜೀವನ್ಮುಖಿ, ಪ್ರಸ್ತುತಿ– ಕೆ.ಬಿ. ಮೀನಾ, 6.50ಕೃಷಿರಂಗ–ಕಿಸಾನ್‌ವಾಣಿ, ಕೋಳಿ ಸಾಕಾಣಿಕೆಯಲ್ಲಿನ ಅನುಭವ ಕುರಿತು ಎನ್.ಭಾಸ್ಕರ್ ಹಾಗೂ ಎನ್. ಜನಾರ್ಧನ್ ಅವರೊಂದಿಗೆ ಸಂದರ್ಶನ, 9.00 ವಿಜ್ಞಾನ ಭಾರತಿ–ವನ್ಯಜೀವಿ ಛಾಯಾಗ್ರಾಹಕ ಹಾಗೂ ಪರಿಸರ ತಜ್ಞ ಡಾ. ಸಂಜಯ್ ಅವರೊಂದಿಗೆ ಮಾತುಕತೆ. ಸಂದರ್ಶಕರು– ಅಬ್ದುಲ್ ರಶೀದ್, 10.30 ಸವಿನೆನಪು

- **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.
- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 98ನೇ ವರ್ಷದ ಮೈಸೂರು ಕರಗ ಮಹೋತ್ಸವ, ಸ್ಥಳ: ಟ್ರಸ್ಟ್, ಇಟ್ಟಿಗೆಗೂಡು, ಬೆಳಗ್ಗೆ 7 ಗಂಟೆಗೆ
- **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ರಂಗಾಯಣ :** ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್ ಬ್ರೈಟರ್ ಎಂ.ವಿ. ನಾಗೇಂದ್ರ ಬಾಬು (ಬ್ಯಾಂಟರ್‌ಬಾಬು) ಅವರ 'ಕಾರ್ಟೂನ್ ಕುಂಚದಲ್ಲಿ ಕೊರೊನಾ' ವ್ಯಂಗ್ಯಚಿತ್ರಗಳ ಪ್ರದರ್ಶನ, ಸ್ಥಳ: ರಂಗಾಯಣ, ಬೆಳಗ್ಗೆ 10.30ಕ್ಕೆ.
- **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ, ಬೆಳಗ್ಗೆ9.30 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರನಾಮಾರ್ಚನೆ, ಬೆಳಗ್ಗೆ 11.30 ರಿಂದ ಮಹಾಮಂಗಳಾರತಿ, ರಾಜಾಶೀರ್ವಾದ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ಶಂಕರ ಭಜನಾ ಮಂಡಳಿಯಿಂದ ಭಕ್ತಿಗೀತೆಗಳು, ಸಂಜೆ 5.45 ರಿಂದ ವಿದ್ವಾನ್ ಸಿ.ಎನ್.ತ್ಯಾಗರಾಜು ಹಾಗೂ ಅಚ್ಯುತ ತ್ಯಾಗರಾಜು ಅವರಿಂದ ದ್ವಂದ್ವ ವೇಣುವಾದನ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ, 2ನೇ ಮುಖ್ಯ ರಸ್ತೆ, ಸರಸ್ವತಿಪುರಂ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ಶಂಕರ ಜಯಂತಿ, ಬೆಳಗ್ಗೆ 8 ಗಂಟೆಗೆ ಶ್ರೀ ಶಂಕರ ಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಪೇಟೆ ಬೀದಿಗಳಲ್ಲಿ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ:ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ.
- **ಜೆಎಸ್‌ಎಸ್ ಕಾನೂನು ಕಾಲೇಜು:** ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಕೆ.ಚಂದ್ರು ಅವರಿಂದ ಕಾನೂನು ಮತ್ತು ಮಾನವ ಹಕ್ಕುಗಳ ನಿಯಮ ಕುರಿತು ಉಪನ್ಯಾಸ, ಉಪಸ್ಥಿತರು: ಜೆಎಸ್‌ಎಸ್ ಕಾನೂನು ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ.ಕೆ.ಎಸ್.ಸುರೇಶ್, ಜೆಎಸ್‌ಎಸ್ ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ.ನಟರಾಜು, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಶಂಕರಾಚಾರ್ಯ ಜಯಂತ್ಯೋತ್ಸವ ಸಮಿತಿ:** ಶ್ರೀ ಶಂಕರಾಚಾರ್ಯ ಜಯಂತಿ, ಉದ್ಘಾಟನೆ: ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಎಸ್.ಎ.ರಾಮದಾಸ್, ಮುಖ್ಯ ಅತಿಥಿಗಳು: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್‌ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ:ಶೃಂಗೇರಿ ಶಂಕರ ಮಠ, ಫೋರ್ಟ್ ಮೊಹಲ್ಲಾ, ಬೆಳಗ್ಗೆ 11ಕ್ಕೆ.
- **ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ:** ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಡಾ. ಬಿ.ಆರ್. ಅಂಬೇಡ್ಕರ್ ಅವರ ಅರ್ಥಶಾಸ್ತ್ರ ಆಲೋಚನೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ ಕುಮಾರ್, ಭಾಷಣಕಾರರು: ಸಿ.ಎನ್.ಮುನಿಯಪ್ಪ, ಪ್ರೊ. ಆರ್.ಎಸ್. ದೇಶಪಾಂಡೆ, ಪ್ರೊ. ಎಸ್. ಮಾದೇಶ್ವರನ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಜಿಲ್ಲಾ ಬ್ರಾಹ್ಮಣ ಮಹಾಸಭಾ:** ಶ್ರೀ ಶಂಕರ ಭಗವತ್ ಪಾದಚಾರ್ಯರ ತತ್ವಜ್ಞಾನಿಗಳ ಅಂಗವಾಗಿ ಪ್ರೊ ಭಾಷ್ಯಂ ಸ್ವಾಮೀಜಿ ಅವರಿಗೆ ಶ್ರೇಷ್ಠ ತತ್ವಜ್ಞಾನಿ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು: ಸಭಾ ಅಧ್ಯಕ್ಷ ಡಾ.ನಟರಾಜ್ ಜೋಯಿಸ್, ಸ್ಥಳ: ಸಂಧ್ಯಾ ಚೇತನ ಸಭಾ ಭವನ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಬ್ರಾಹ್ಮಣ ಧರ್ಮ ಸಹಾಯ ಸಭಾ:** ಶ್ರೀ ಶಂಕರ ಜಯಂತಿ ಪ್ರಯುಕ್ತ ಸಾಮೂಹಿಕ ಉಪನಯನ, ಅಧ್ಯಕ್ಷತೆ : ಸಭಾ ಅಧ್ಯಕ್ಷ ಎನ್. ಶ್ರೀನಿವಾಸ್, ಉಪಸ್ಥಿತರು : ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿ, ಸ್ಥಳ: ಸಭಾ ಆವರಣ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.
- **ಸಪ್ತಸ್ವರ ಸಿಂಚನ ಟ್ರಸ್ಟ್, ಅಮ್ಮ ವಸುಂಧರೆ ಟ್ರಸ್ಟ್:** ಜನಪದ ಗಾರುಡಿಗ ಡಾ.ಎಂ.ಮಳವಳ್ಳಿ ಮಹದೇವಸ್ವಾಮಿ ಅವರಿಗೆ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಅಧ್ಯಕ್ಷತೆ: ಪಾಲಿಕೆ ವಲಯ ಆಯುಕ್ತ ಎಂ.ನಂಜುಂಡಯ್ಯ. ಸ್ಥಳ: ನಾದಬ್ರಹ್ಮ ಸಭಾಂಗಣ, ನಂಜುಮಳಿಗೆ, ಸಂಜೆ 4ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ :** ಭಾರತೀಯ ಸಂಸ್ಕೃತಿಯಲ್ಲಿ ಕಲಿಕೆ, ಬೋಧನೆ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಗ್ರಂಥಪಾಲಕ ಡಾ. ಸಿ.ಪಿ. ರಾಮಶೇಷ್ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎನ್.ಎಸ್. ಹರಿನಾರಾಯಣ್, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಹಾಲ್, ಮಾನಸಗಂಗೋತ್ರಿ, ಸಂಜೆ 4ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದುಷಿ ಅನಂತರಾಜ್ ಮಿಸ್ತ್ರಿ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ
- **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ಕು. ಚೇತನ ಕೆ.ಎನ್. ಅವರ ಭರತನಾಟ್ಯ ರಂಗಪ್ರವೇಶ, ಅಧ್ಯಕ್ಷತೆ : ಭರತಾಂಜಲಿ ನೃತ್ಯಶಾಲೆ ನಿರ್ದೇಶಕ ಡಾ. ಶೀಲಾ ಶ್ರೀಧರ್, ಮುಖ್ಯ ಅತಿಥಿಗಳು: ಜೆಎಸ್‌ಎಸ್‌ಎಸ್ ಆಡಳಿತ ಅಧಿಕಾರಿ ಅನುಪಮ ಪಂಡಿತ್, ವಿವಿಎಸ್ ಬಿಎಂಶ್ರೀ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಎನ್. ರಮೇಶ್, ಗುರುವಂದನೆ : ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ನಿರ್ದೇಶಕಿ ವಿದುಷಿ ಡಾ. ಕೃಪಾ ಫಡ್ಕೆ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.
- **ಗಾನಭಾರತೀ :** ವಿದ್ವಾನ್ ಸಿ.ಎ. ಶ್ರೀಧರ್ ಮತ್ತು ವಿದ್ವಾನ್ ಕೇಶವ ಚಂದ್ರ ಅವರಿಂದ ದ್ವಂದ್ವ ಕೊಳಲು ವಾದನ, ವಿದ್ವಾನ್ ಪ್ರಾದೇಶ್ ಆಚಾರ್–ಪಿಟೀಲು, ವಿದ್ವಾನ್ ಈಶ್ವರ ಭಟ್–ಮೃದಂಗ, ವಿದ್ವಾನ್ ಶಮಿತ್ ಗೌಡ–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಒಂದನೇ ಪುಟದಿಂದ

ಅಕ್ರಮ ನಿರ್ಮಾಣ ಸಕ್ರಮ

ಈ ಸಂಬಂಧ ನಿಯಮಾವಳಿಗಳನ್ನು ರಚಿಸಿದ್ದು, ಒಂದೆರಡು ತಿಂಗಳಲ್ಲಿ ಆದೇಶ ಹೊರಡಿಸಿ, ಅಕ್ರಮ ಮನೆಗಳನ್ನು ಸಕ್ರಮಗೊಳಿಸಲಾಗುವುದು. ಬೆಂಗಳೂರು ಪ್ರಕರಣದಲ್ಲಿ ಈ ವಿಷಯ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರೂ, ಅದನ್ನು ಸೌಹಾರ್ದಯುತವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಮೈಸೂರು, ದಾವಣಗೆರೆ ಸೇರಿದಂತೆ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಹೊಸ ಬಡಾವಣೆಗಳಿಗೆ ನಗರ ವಿಕಾಸ್ ಯೋಜನೆಯಡಿ ತಲಾ ನೂರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಇದೇ ಯೋಜನೆಯಡಿ ಪ್ರತಿ ಪಾಲಿಕೆಯಲ್ಲೂ 150 ಕೋಟಿ ರೂ. ವೆಚ್ಚದಲ್ಲಿ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು. ಸ್ಮಾರ್ಟ್ ಸಿಟಿ ಯೋಜನೆಯಡಿ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ತುಮಕೂರು, ಮಂಗಳೂರು ಸೇರಿದಂತೆ ಆರು ಕಡೆ ಕಾಮಗಾರಿಗಳು ಭರದಿಂದ ನಡೆದಿದ್ದು ಶೇ.80 ರಷ್ಟು ಕಾಮಗಾರಿಗಳು ಪೂರ್ಣವಾಗಿವೆ.ಉಳಿದಂತೆ ಕಟ್ಟಡ ನಿರ್ಮಾಣದಂತಹ ಕೆಲಸಗಳು ಬಾಕಿ ಇದ್ದು, ಇನ್ನೊಂದು ವರ್ಷದ ಒಳಗೆ ಅದನ್ನು ಪೂರ್ಣಗೊಳಿಸುವುದಾಗಿ ನುಡಿದರು.

ಕೊರೊನಾ ಕಾರಣದಿಂದ ಸ್ಮಾರ್ಟ್ ಸಿಟಿ ಕಾಮಗಾರಿಗಳಿಗೆ ಅಡಚಣೆಯಾಯಿತು. ಹೀಗಾಗಿ ನಮಗೆ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ಕಾಲಾವಕಾಶ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ವಿನಂತಿಸಿಕೊಂಡಿದ್ದೆವು ಎಂದು ನುಡಿದರು.

ಬೆಳಗಾವಿ,ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಒದಗಿಸಲು 280 ಕೋಟಿ ರೂಪಾಯಿಗಳ ಯೋಜನೆ ಸಿದ್ಧವಾಗಿದ್ದು, ಮುಂದಿನ ಐದು ವರ್ಷಗಳಲ್ಲಿ ಇದು ಕಾರ್ಯಗತವಾಗಲಿದೆ ಎಂದರು.

ಪಿರಿಯಾಪಟ್ಟಣಕ್ಕೆ ಕುಡಿಯುವ ನೀರು: ಪಿರಿಯಾಪಟ್ಟಣ, ರಾಯಭಾಗ, ಹಿರೇಕೆರೂರ್, ಶಿಗ್ಗಾವಿ, ಯಲ್ಲಾಪುರ ಸೇರಿದಂತೆ 24 ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸಲು 1500 ಕೋಟಿ ರೂ.ವೆಚ್ಚದ ಯೋಜನೆಯನ್ನು ರೂಪಿಸಲಾಗಿದ್ದು,ನದಿ ಮೂಲಗಳಿಂದ ಈ ಪಟ್ಟಣಗಳಿಗೆ ನೀರು ಒದಗಿಸಲಾಗುವುದು ಎಂದರು. ಧರ್ಮಸ್ಥಳದಲ್ಲಿ ಭಕ್ತಾದಿಗಳಿಗೆ ಅನುಕೂಲ ಒದಗಿಸಿಕೊಡುವ ದೃಷ್ಟಿಯಿಂದ 27 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ ಎಂದು ನುಡಿದರು.

ಭವಿಷ್ಯ ನಿರ್ಧರಿಸಲಿರುವ ಪ್ರಧಾನಿ ಮೋದಿ

ಕಾರ್ಯವೈಖರಿ, ಪಕ್ಷ ಸಂಘಟನೆಯಲ್ಲೂ ವಿಫಲವಾಗಿದೆ. ಸರ್ಕಾರಕ್ಕೆ ವರ್ಚಸ್ಸು ಇದ್ದರೆ ಪಕ್ಷಕ್ಕೂ ತಾನಾಗಿಯೇ ವರ್ಚಸ್ಸು ವೃದ್ಧಿಸುತ್ತದೆ. ಆದರೆ ಇಲ್ಲಿ ಸರ್ಕಾರಕ್ಕೆ ವರ್ಚಸ್ಸು ಇಲ್ಲ ಎಂಬ ಅಸಮಾಧಾನ ಅಂದಿನ ಸಭೆಯಲ್ಲಿ ವ್ಯಕ್ತಗೊಂಡಿತ್ತು. ಆದರೆ ನಾಯಕತ್ವದ ಬಗ್ಗೆ ಪ್ರಧಾನಿಯವರೇ ತೀರ್ಮಾನ ಕೈಗೊಳ್ಳಲಿ ಎಂದು ಅಂದಿನ ಸಭೆಯು ಚೆಂಡನ್ನು ಅವರ ಅಂಗಳಕ್ಕೆ ಹಾಕಿದೆ. ಇದಾದ ನಂತರ ಗೃಹ ಸಚಿವರೇ ಎರಡು ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಂಡು ಹಿಂತಿರುಗಿದ್ದಾರೆ. ಆದರೆ ಯಾವುದೇ ರಾಜಕೀಯ ನಿರ್ಧಾರಗಳನ್ನು ಪ್ರಕಟಿಸಿಲ್ಲ. ಹೀಗಾಗಿ ಎಲ್ಲರ ದೃಷ್ಟಿ ಈಗ ಪ್ರಧಾನಿಯವರ ಕಡೆಗೆ ನೆಟ್ಟಿದೆ.

ನಾನು ಹೇಳುವುದಷ್ಟನ್ನೇ ನಂಬಿ: ಸಚಿವ ಸಂಪುಟ ವಿಚಾರದಲ್ಲಿ ವಿಷಯಗಳನ್ನು ನೀವೇ ಸೃಷ್ಟಿ ಮಾಡುತ್ತೀರಿ. ಬಳಿಕ ನೀವೇ ಸ್ಪಷ್ಟನೆ ಕೇಳುತ್ತೀರಿ ಎಂದು ಸಿಎಂ ಬಸವ ರಾಜ ಬೊಮ್ಮಾಯಿ ಮಾಧ್ಯಮಗಳ ಮುಂದೆ ಹೇಳಿದ್ದಾರೆ. ವಿಧಾನಸೌಧದಲ್ಲಿ ದಿ. ಕೆ.ಸಿ.ರೆಡ್ಡಿಯವರ 120ನೇ ಜನ್ಮದಿನೋತ್ಸವ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಹೈಕಮಾಂಡ್ ಸೂಚನೆ ನೀಡುತ್ತಿದ್ದಂತೆಯೇ ದೆಹಲಿಗೆ ತೆರಳಿ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸುತ್ತೇನೆ ಎಂದು ಹೇಳಿದರು.

ಸಂಪುಟ ಪುನಾರಚನೆ ಅಥವಾ ವಿಸ್ತರಣೆ ವಿಚಾರದಲ್ಲಿ ಕೆಲವು ಕಟ್ಟು ಕತೆಗಳು ಹರಿದಾಡುತ್ತಿವೆ. ಈ ವಿಚಾರದಲ್ಲಿ ನಾನು ಹೇಳಿದ ವಿಚಾರಗಳನ್ನು ಮಾತ್ರ ನೀವು ಅಧಿಕೃತ ಎಂದು ಪ್ರಕಟಿಸಬೇಕು. ದೆಹಲಿಗೆ ತೆರಳಿ ಪಕ್ಷದ ವರಿಷ್ಠರ ಜೊತೆಯಲ್ಲಿ ಚರ್ಚಿಸಿದ ಬಳಿಕ ಮುಂದಿನ ನಡೆಯನ್ನು ನಿಮಗೆ ನಾನೇ ತಿಳಿಸುತ್ತೇನೆ ಎಂದು ಹೇಳಿದರು.

ಅತೀ ಶೀಘ್ರದಲ್ಲಿಯೇ ಒಂದೊಳ್ಳೆ ಸುದ್ದಿ ಬರುತ್ತೆ!

ಬೆಳಗಾವಿ: ಸಂಪುಟ ವಿಸ್ತರಣೆ, ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಮುಂಚೂಣಿ ಯಲ್ಲಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅಥಣಿಯಲ್ಲಿ ನಾಯಕರ ಸಭೆ ನಡೆಸಿದ್ದು, ಶೀಘ್ರದಲ್ಲಿಯೇ ಒಂದೊಳ್ಳೆ ಸುದ್ದಿ ಬರಲಿದೆ ಎಂದಿದ್ದಾರೆ. ಅಥಣಿಯಲ್ಲಿ ಶಾಸಕ ರಮೇಶ್ ಜಾರಕಿಹೊಳಿ ಹಾಗೂ ಶ್ರೀಮಂತ ಪಾಟೀಲ್ ಮಹತ್ವದ ಸಭೆ ನಡೆಸಿದ್ದು, ಮಂತ್ರಿ ಸ್ಥಾನಕ್ಕಿಂತ ಕ್ಷೇತ್ರ ಅಭಿವೃದ್ಧಿಯಾಗಬೇಕು ಎಂದು ಶ್ರೀಮಂತ ಪಾಟೀಲ್ ಹೇಳಿದ್ದಾರೆ. ಕ್ಷೇತ್ರಕ್ಕೆ ನೀರಾವರಿ ಯೋಜನೆ ಜಾರಿಯಾಗಬೇಕು ಎಂದಿದ್ದಾರೆ. ನಾನು ಪಕ್ಷ ತೆಗೆದುಕೊಳ್ಳುವ ಯಾವುದೇ ನಿರ್ಣಯಕ್ಕೆ ಬದ್ಧನಿದ್ದೇನೆ ಎಂದರು. ಈ ಬಾರಿ ಸಂಪುಟದಲ್ಲಿ ಮರಾಠ ಸಮುದಾಯಕ್ಕೆ ಸಚಿವ ಸ್ಥಾನ ಸಿಗಬೇಕು. ಈ ಬಗ್ಗೆ ಪಕ್ಷದ ವೇದಿಕೆಯಲ್ಲಿಯೂ ಮಾತನಾಡಿದ್ದೇನೆ. ಹಾಗಾಗಿ ಅತೀ ಶೀಘ್ರದಲ್ಲಿ ಒಂದೊಳ್ಳೆ ಸುದ್ದಿ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಆಕ್ಷೇಪಾರ್ಹ ಪ್ರಸ್ತಾಪ: ಪ್ರಕರಣ ದಾಖಲು

ಐಪಿಸಿ 1860(ಯು/ಎಸ್-153ಎ, 153ಬಿ, 505(2), 34) ಅಡಿಯಲ್ಲಿ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಸಮಾಜದಲ್ಲಿ ಶಾಂತಿ ಭಂಗ ಮಾಡಿ, ಅಶಾಂತಿ ವಾತಾವರಣ ಸೃಷ್ಟಿಸುವುದು, ಕೋಮುಗಳ ವಿಚಾರವಾಗಿ ತಪ್ಪು ಮಾಹಿತಿ ನೀಡುವುದು, ದೇಶದ ಬಗ್ಗೆ ಆಕ್ಷೇಪಾರ್ಹವಾಗಿ ಮಾತನಾಡುವುದು, ಈ ರೀತಿಯ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವುದು, ಹೀಗೆ ದುಷ್ಕೃತ್ಯ ಎಸಗುವವರ ವಿರುದ್ಧ ಖಂಡಿತವಾಗಿ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಈ ಕೃತ್ಯ ಎಸಗಿದವರು ಯಾರು? ಅವರಿಗೆ ಪ್ರೇರಣೆ ಏನು? ಹೀಗೆ ಎಲ್ಲದರ ಬಗ್ಗೆಯೂ ತನಿಖೆ ಮಾಡಿ, ಸಮರ್ಪಕ ಸಾಕ್ಷ್ಯಾಧಾರಗಳನ್ನು ಕಲೆಹಾಕಿ ಮುಂದಿನ ಕ್ರಮ ವಹಿಸಲಾಗುವುದು ಎಂದರು.

ಈಗಾಗಲೇ ತನಿಖೆ ಆರಂಭಿಸಿದ್ದು, ವೈರಲ್ ಆಗಿರುವ ವಿಡಿಯೋದಲ್ಲಿ ಕಾಣುವ ವ್ಯಕ್ತಿಗಳ ವಿಚಾರಣೆ ನಡೆಸಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆ ಸಂದರ್ಭದಲ್ಲಿ ಚಿತ್ರೀಕರಿಸಿರುವ ಬೇರೆ ಬೇರೆ ವಿಡಿಯೋಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ತನಿಖೆಯಿಂದ ಕೃತ್ಯ ಎಸಗಿರುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಜೆಪಿ ದೂರು: ಕೌಲಂದೆ ಗ್ರಾಮದಲ್ಲಿ ದೇಶಕ್ಕೆ ಅಪಮಾನವಾಗುವ ಕೃತ್ಯ ನಡೆದಿರುವುದು ತಿಳಿಯುತ್ತಿದ್ದಂತೆ ಬಿಜೆಪಿಯ ತಾಲೂಕು ಮುಖಂಡರು ಕವಲಂದೆ ಪೊಲೀಸ್ ಠಾಣೆ ಹಾಗೂ ನಂಜನಗೂಡು ವೃತ್ತ ನಿರೀಕ್ಷಕರಿಗೆ ದೂರು ನೀಡಿದ್ದಾರೆ. ಈ ವೇಳೆ ನಂಜನಗೂಡು ನಗರಸಭಾ ಸದಸ್ಯ ಇ.ಎಸ್.ಕಪಿಲೇಶ್ ಪ್ರತಿಕ್ರಿಯಿಸಿ, ಕೌಲಂದೆ ಗ್ರಾಮವನ್ನು ಛೋಟಾ ಪಾಕಿಸ್ತಾನ್ ಎಂದು ಕೂಗಿರುವುದು ದೇಶದ್ರೋಹ ಕೃತ್ಯ. ಭಾರತಕ್ಕೆ ಸದಾ ಕೇಡು ಬಯಸುವ ಪಾಕಿಸ್ತಾನಿ ಮನಃಸ್ಥಿತಿಯವರು ನಮ್ಮೊಡನಿರುವುದು ನಿಜಕ್ಕೂ ಆತಂಕದ ಸಂಗತಿ. ದೇಶಕ್ಕೆ ಅಪಮಾನ ಮಾಡಿರುವ ದುಷ್ಕರ್ಮಿಗಳನ್ನು ತಕ್ಷಣ ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಕವಲಂದೆ ಚಲೋ ಎಚ್ಚರಿಕೆ: ಭಾರತದಲ್ಲಿದ್ದುಕೊಂಡು ಶತ್ರು ರಾಷ್ಟ್ರದ ಬಗ್ಗೆ ವ್ಯಾಮೋಹ ಪ್ರದರ್ಶಿಸಿರುವುದನ್ನು ಜನ ಖಂಡಿಸಿದ್ದಾರೆ. ದೇಶ ವಿರೋಧಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಹಲವು ಹಿಂದೂಪರ ಸಂಘಟನೆಗಳು ಪಟ್ಟು ಹಿಡಿದಿವೆ. ಘಟನೆ ಬಗ್ಗೆ ಬೆಳಗಾವಿಯಲ್ಲಿ ಪ್ರತಿಕ್ರಿಯೆ ನೀಡಿರುವ ಶ್ರೀರಾಮ ಸೇನಾ ಸಂಸ್ಥಾಪಕ ಪ್ರಮೋದ್ ಮುತಾಲಿಕ್, ನೀಚರು, ನಿರ್ಲಜ್ಜರು ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ. ಇವೆಲ್ಲಾ ದೇಶ ದ್ರೋಹಿಗಳು. ಪಾಕಿಸ್ತಾನದ ಮೇಲೆ ಪ್ರೀತಿ ಇದ್ದರೆ ಅಲ್ಲಿಗೆ ಹೋಗಲಿ. ಕೂಡಲೇ ಆರೋಪಿಗಳನ್ನು ಬಂಧಿಸಬೇಕು. ಇಲ್ಲವಾದರೆ ಶ್ರೀರಾಮ ಸೇನೆಯಿಂದ ಕವಲಂದೆ ಚಲೋ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಮುಸ್ಲಿಂ ಮುಖಂಡರ ವಿಷಾದ: ಘಟನೆ ಬಗ್ಗೆ ಗ್ರಾಮದ ಮುಸ್ಲಿಂ ಮುಖಂಡರು ತೀವ್ರ ವಿಷಾಧ ವ್ಯಕ್ತಪಡಿಸಿದ್ದಾರೆ. ಯಾರು ತಪ್ಪು ಮಾಡಿದ್ದರೂ ಅವರನ್ನು ಬಂಧಿಸಿ ಶಿಕ್ಷೆ ನೀಡಿ ಎಂದು ಹೇಳಿರುವುದಾಗಿ ಎಂದು ಪೊಲೀಸರು ತಿಳಿಸಿದ್ದಾರೆ.

ಆಕ್ಷೇಪಾರ್ಹ ಪ್ರಸ್ತಾಪ: ಕೌಲಂದೆಯಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆ ನಂತರ ಮುಸ್ಲಿಂ ಬಾಂಧವರು ಮನೆಗಳಿಗೆ ಹಿಂದಿರುಗುವ ವೇಳೆ ಮೊಬೈಲ್ ವಿಡಿಯೋಗೆ ಪೋಸ್ ನೀಡಿದ್ದಾರೆ. ಈ ವೇಳೆ ವಿಡಿಯೋ ಚಿತ್ರೀಕರಿಸುವವನು ಅಥವಾ ಅಕ್ಕಪಕ್ಕದಲ್ಲಿದ್ದವರು 'ಕೌಲಂದೆ ಬೋಲೇ ತೋ ಛೋಟಾ ಪಾಕಿಸ್ತಾನ್ ಠೀಕ್ ಹೈ' ಎಂದು ಕೂಗಿರುವುದು ವೈರಲ್ ಆಗಿರುವ ವಿಡಿಯೋದಲ್ಲಿ ದಾಖಲಾಗಿದೆ.

ಬಾಲಕ ದುರ್ಮರಣ, ಎತ್ತು ಸಾವು

ಏಕಾಏಕಿ ಎತ್ತುಗಳು ಬೆದರಿ, ದಿಕ್ಕಾಪಾಲಾಗಿ ಓಡಿವೆ. ಕರುವಿನ ಕಳೇಬರ ಕೆಳಗಿಳಿಸಿ ಓಡುತ್ತಿದ್ದ ಎತ್ತುಗಳನ್ನು ಹಿಡಿಯಲು ಬಸವರಾಜು ಪ್ರಯತ್ನಿಸಿದರಾದರೂ ಅಷ್ಟರಲ್ಲಿ ಗಾಡಿ ಸಮೇತ ಕಾವೇರಿ ನದಿಗೆ ಹಾರಿವೆ. ಈ ವೇಳೆ ಬಾಲಕ ಜಲ ಸಮಾಧಿಯಾಗಿದ್ದಾನೆ. ಒಂದು ಎತ್ತು ಗಾಡಿಯಿಂದ ಬೇರ್ಪಟ್ಟು ಹೊರಬಂದರೆ, ಮತ್ತೊಂದು ಎತ್ತು ಸಹ ನೀರಿನಲ್ಲೇ ಮುಳುಗಿ ಸಾವಿಗೀಡಾಗಿದೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಚೇತನ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಇಂದು ಸಂಜೆ ನದಿಯಿಂದ ಬಾಲಕನ ದೇಹ, ಎತ್ತಿನ ಕಳೇಬರವನ್ನು ಹೊರ ತೆಗೆದಿದ್ದಾರೆ.

ಕೆಲವರ ವಿಚಾರಣೆ ನಡೆಸಿದ್ದೇವೆ

ಆದರೆ ಈವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ತಿಳಿಸಿದರು. ಮೇ 3ರಂದು ಸಂಜೆ 5.30ರ ಸುಮಾರಿನಲ್ಲಿ ಬಂಡಿಪಾಳ್ಯ ಎಪಿಎಂಸಿ ತರಕಾರಿ ಮಾರುಕಟ್ಟೆಯ ಸ್ಟಾಲ್ ನಂ.8ರ ತನ್ನ ಕಚೇರಿಯಲ್ಲಿ ರವಿ ಅಲಿಯಾಸ್ ಕ್ಯಾಪ್ಸಿಕಮ್ ರವಿ ಇದ್ದಾಗ,

ಕೈಲಾಸಪುರಂನ ಗೌತಮ್ ಅಲಿಯಾಸ್ ಅಪಿಕಾ, ಲೋಹಿತ್ ಕುಮಾರ್ ಮತ್ತು ಗಾಂಧಿನಗರ ಮಹೇಶ್ ಎಂಬುವರು 2 ಸ್ಕೂಟರ್‌ಗಳಲ್ಲಿ ಬಂದು ಸ್ಟಾಲ್‌ಗೆ ನುಗ್ಗಿದ್ದಾರೆ. ಗೌತಮ್ ಮತ್ತು ಮಹೇಶ ಲಾಂಗ್‌ಗಳಿಂದ ರವಿ ಮೇಲೆ ಹಲ್ಲೆ ನಡೆಸಿ, ಹತ್ಯೆಗೈದಿದ್ದಾರೆ. ಆ ವೇಳೆ ಲೋಹಿತ್‌ಕುಮಾರ್ ಸ್ಟಾಲ್‌ನ ಬಾಗಿಲಲ್ಲಿ ನಿಂತು ಯಾರಾದರೂ ಹತ್ತಿರ ಬಂದರೆ ಕೊಲೆ ಮಾಡುತ್ತೇನೆ ಎಂದು ಬೆದರಿಸುತ್ತಿದ್ದ. ಕೊಲೆಯ ನಂತರ ಈ ಮೂವರೂ ಸ್ಟಾಲ್‌ನ ಸಿಸಿಟಿವಿ ಕ್ಯಾಮರಾ ಹಾಗೂ ಡಿವಿಆರ್ ಅನ್ನು ಕಿತ್ತುಕೊಂಡು ಪರಾರಿಯಾದರು ಎಂದು ಹತ್ಯೆಗೀಡಾದ ರವಿ ಸಹೋದರ ಪ್ರದೀಪ್, ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು.

ಮುಂಗಾರು ಪೂರ್ವ ಮಳೆಯಿಂದ ರೈತರು ಸಂತಸ

ತೊಗರಿ, ಹುರುಳಿ, ಉದ್ದು, ಹೆಸರು, ಅಲಸಂದೆ, ಅವರೆ, ಮುಸುಕಿನ ಜೋಳ, ರಾಗಿ ಬಿತ್ತನೆ ಕಾರ್ಯ ಆರಂಭ

- ಬಿತ್ತನೆ ಬೀಜಕ್ಕೆ ಬೇಡಿಕೆ; ಎಲ್ಲಾ ಬೆಳೆಗೆ ಅಗತ್ಯ ಬಿತ್ತನೆ ಬೀಜ ಪೂರೈಕೆಗೆ ಕೃಷಿ ಇಲಾಖೆ ಸನ್ನದ್ಧ
- ಅಧಿಕ ರಸಗೊಬ್ಬರ ಒಳ್ಳೆಯದಲ್ಲ: ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಮಹಂತೇಶಪ್ಪ ಕಿವಿಮಾತು



ಮೈಸೂರು, ಮೇ 5(ಎಂಕೆ)- ಕಳೆದೊಂದು ವಾರದಿಂದ ಸುರಿಯುತ್ತಿರುವ ಭರಣಿ ಮಳೆ ರೈತರ ಮೊಗದಲ್ಲಿ ಸಂತಸ ತಂದಿದ್ದು, ಮುಂಗಾರಿನಲ್ಲೇ ಎರಡು ಬೆಳೆಗಳನ್ನು ಬೆಳೆಯುವ ಸದವಕಾಶ ನೀಡಿದೆ.

ಮೈಸೂರು ಹಾಗೂ ಚಾಮರಾಜನಗರ ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಬಿದ್ದಿದ್ದು, ಕೃಷಿ ಚಟುವಟಿಕೆಗಳು ಭರದಿಂದ ಸಾಗಿವೆ. ತೊಗರಿ, ಹುರುಳಿ, ಉದ್ದು, ಹೆಸರು, ಅಲಸಂದೆ, ಅವರೆ(ದ್ವಿದಳ ಧಾನ್ಯಗಳು) ಹಾಗೂ ರಾಗಿ, ಮುಸುಕಿನ ಜೋಳ (ಏಕದಳ ಧಾನ್ಯ)ದ ಬಿತ್ತನೆ ಕಾರ್ಯ ಚುರುಕಾಗಿದೆ. ಅಲ್ಲದೆ ಹೈಬ್ರೀಡ್ ಹತ್ತಿ, ಸೂರ್ಯಕಾಂತಿ ಬಿತ್ತನೆ ಬೀಜಕ್ಕೆ ಬೇಡಿಕೆ ಹೆಚ್ಚಾಗಿದೆ. ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಭಾಗದಲ್ಲಿ ತಂಬಾಕು(ಹೊಗೆಸೊಪ್ಪು) ನರ್ಸರಿ ನಡೆಯುತ್ತಿದ್ದು, ನಿರಂತರ ಮಳೆಯಾಗುತ್ತಿರುವ ಹಿನ್ನೆಲೆ ಕೆಲವೆಡೆ ನಾಟಿ ಕಾರ್ಯವೂ ನಡೆಯುತ್ತಿದೆ.

ವಾಡಿಕೆಗಿಂತ ಹೆಚ್ಚು ಮಳೆ: ಈ ವರ್ಷ ಪೂರ್ವ ಮುಂಗಾರಿನಲ್ಲಿ(ಮೇ 4ರವರೆಗೆ) ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳು ಸೇರಿ 244 ಮಿ.ಮೀ(ಮಿಲಿ ಮೀಟರ್) ಮಳೆಯಾಗಿದ್ದು, ವಾಡಿಕೆ ಮಳೆ(183.5 ಮಿ.ಮೀ)ಗಿಂತ ಶೇ.39 ರಷ್ಟು ಹೆಚ್ಚಾಗಿದೆ. ಕಳೆದ ವರ್ಷಕ್ಕೆ (100.3 ಮಿ.ಮೀ)ಹೋಲಿಸಿದರೆ ಈ ವರ್ಷ ಎರಡು ಪಟ್ಟು ಹೆಚ್ಚಾಗಿದೆ. ಬಿಸಿಲಿನ ಧಗೆಯಲ್ಲಿ ಕಾದಿದ್ದ ಭೂಮಿ ಈಗ ತಂಪೆರೆದಿದ್ದು, ಮಣ್ಣಿನ ತೇವಾಂಶದ ಪ್ರಮಾಣ ಹೆಚ್ಚಾಗುತ್ತಿದೆ. ದ್ವಿದಳ ಧಾನ್ಯಗಳ ಬಿತ್ತನೆಗೆ ಸೂಕ್ತ ಸಮಯ ಇದಾಗಿದೆ ಎಂದು ಮೈಸೂರು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಎಂ.ಮಹಂತೇಶಪ್ಪ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಜೋಳ ಬಿತ್ತನೆಗೆ ಸ್ವಲ್ಪ ಕಾಯಬೇಕು: ತೊಗರಿ, ಹುರುಳಿ, ಉದ್ದು, ಹೆಸರು, ಅಲಸಂದೆ ಅವರೆ ಬಿತ್ತನೆಗೆ ಸೂಕ್ತ ಸಮಯ ಇದಾಗಿದ್ದು, ಮುಸುಕಿನ ಜೋಳ ಬಿತ್ತನೆ ಸ್ವಲ್ಪ ದಿನ ಕಳೆದರೆ ಒಳ್ಳೆಯದು. ಮಾರ್ಚ್ ತಿಂಗಳಿನಲ್ಲಿ 30 ಮಿ.ಮೀ, ಏಪ್ರಿಲ್‌ನಲ್ಲಿ 71 ಮಿ.ಮೀ ಹಾಗೂ ಮೇ ತಿಂಗಳಿನಲ್ಲಿ (ಮೇ.4 ರವರೆಗೆ) 140 ಮಿ.ಮೀ ಮಳೆಯಾಗಿದೆ. ಮೈಸೂರು ಹಾಗೂ ಚಾ.ನಗರ ಜಿಲ್ಲೆಯ ಹಲವೆಡೆ ಮಾರ್ಚ್‌ನಿಂದಲೇ ದ್ವಿದಳ ಧಾನ್ಯಗಳ ಬಿತ್ತನೆ ಆರಂಭವಾಗಿರುವುದರಿಂದ ಮುಂಗಾರಿನಲ್ಲಿಯೇ ಎರಡನೇ ಬೆಳೆಯಾಗಿ ಮುಸುಕಿನ ಜೋಳ ಬಿತ್ತನೆ ಮಾಡುವ ಮೂಲಕ ಎರಡು ಬೆಳೆಗಳನ್ನು ಬೆಳೆಯಬಹುದಾಗಿದೆ ಎಂದು ಹೇಳಿದರು.

ಬೇಡಿಕೆ: ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೈಬ್ರೀಡ್(ಬಿಟಿ) ಹತ್ತಿ ಹಾಗೂ ಸೂರ್ಯಕಾಂತಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ ನಂಜನಗೂಡು, ಟಿ.ನರಸೀಪುರ, ಚಾ.ನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಸೂರ್ಯಕಾಂತಿ ಬೆಳೆಯುವವರ ಸಂಖ್ಯೆ ಹೆಚ್ಚು. ಅಲ್ಲದೆ ಹತ್ತಿ ಹಾಗೂ ಸೂರ್ಯಕಾಂತಿಗೆ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿರುವುದರಿಂದ ಬೇಡಿಕೆಯೂ ಹೆಚ್ಚಾಗಿದೆ. ರೈತರು ಮನೆಯಲ್ಲೇ ಬಿತ್ತನೆ ಬೀಜ ಮಾಡುವುದರ ಬದಲು ಬೀಜೋಪಾರಗೊಂಡ ಬಿತ್ತನೆ ಬೀಜವನ್ನು ಜಮೀನಿನಲ್ಲಿ ಹಾಕುವುದರಿಂದ ಇಳುವರಿ ಹೆಚ್ಚಾಗುವುದರ ಜೊತೆಗೆ ಬೆಳೆಗೆ ತಗಲುವ ಕೀಟ-ಬಾಧೆಗಳು ಕಡಿಮೆಯಾಗುತ್ತದೆ ಎಂದು ಕಿವಿಮಾತು ಹೇಳಿದರು.

ರಸಗೊಬ್ಬರಕ್ಕೆ ಕೊರತೆ ಇಲ್ಲ: ರೈತರ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ನೀಡಲಾಗುತ್ತಿದ್ದು, ಯಾವುದೇ ಕೊರತೆ ಉಂಟಾಗಿಲ್ಲ. ಯೂರಿಯಾ, ಡಿಎಪಿ, ಎಂಓಪಿ, ಎಸ್‌ಎಸ್‌ಪಿ, ಎನ್‌ಪಿಕೆ ಕಾಂಪ್ಲೆಕ್ಸ್, ಅಮೋನಿಯಂ ಸಲ್ಫೇಟ್ ಹಾಗೂ ಎಸ್‌ಓಪಿ ರಸಗೊಬ್ಬರಕ್ಕೆ ಕೊರತೆ ಇಲ್ಲ. ಈಗಾಗಲೇ 18,106.7 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದ್ದು, ಇನ್ನೂ 12,764 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯತೆ ಇದೆ. ಹಾಗೆಯೇ ಏಕದಳ ಧಾನ್ಯಗಳು 246.0 ಕ್ವಿಂಟಾಲ್, ದ್ವಿದಳ ಧಾನ್ಯಗಳು 461.1 ಕ್ವಿಂಟಾಲ್ ಹಾಗೂ ಎಣ್ಣೆಕಾಳುಗಳು 86.9 ಕ್ವಿಂಟಾಲ್ ಬಿತ್ತನೆ ಬೀಜ ಲಭ್ಯವಿದೆ ಎಂದು ತಿಳಿಸಿದರು.

ಬಿಟಿ ಹತ್ತಿ ಬೀಜಗಳನ್ನು ರೈತರ ಬೇಡಿಕೆಗೆ ಅನುಸಾರ ವಿತರಣೆ ಮಾಡಲಾಗುತ್ತಿದೆ. ಇಲ್ಲಿಯವರೆಗೆ 2,04,594 ಪ್ಯಾಕೆಟ್ (ಒಂದು ಪ್ಯಾಕೆಟ್ ತೂಕ-450 ಗ್ರಾಂ) ಬಿಟಿ ಹತ್ತಿ ಬೀಜಗಳನ್ನು ವಿವಿಧ ತಯಾರಿಕಾ ಸಂಸ್ಥೆಗಳ ಮೂಲಕ ಮಾರಾಟ ಮಾಡಲಾಗಿದ್ದು, ಇನ್ನೂ 2,335 ಪ್ಯಾಕೆಟ್ ಬಿಟಿ ಹತ್ತಿ ಬೀಜಗಳ ಲಭ್ಯತೆ ಇದೆ ಎಂದು ತಿಳಿಸಿದರು.

ಮಣ್ಣನ್ನು ಹದಗೊಳಿಸಿ: ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಳೆಯಾಗುತ್ತಿದ್ದು, ತರಕಾರಿ ಬೆಳೆಯುವ ರೈತರು ಮಣ್ಣನ್ನು ಹದಗೊಳಿಸಲು ಸಹಕಾರಿಯಾಗಿದೆ. ಬಾಳೆ-ತರಕಾರಿಯನ್ನು ಪಂಪ್‌ಸೆಟ್ ಇಟ್ಟುಕೊಂಡವರು ಯಾವಾಗಬೇಕಾದರು ಬೆಳೆಯಬಹುದು. ಆದರೆ ಮಳೆ ಉತ್ತಮವಾಗಿ ಬೀಳುತ್ತಿರುವುದರಿಂದ ಮಣ್ಣನ್ನು ಹದಗೊಳಿಸಿ, ಮಳೆ ನೀರನ್ನು ಸಂಗ್ರಹಿಸಿ ತಮ್ಮ ಜಮೀನಿನಲ್ಲಿ ಇಂಗಿಸಿದರೆ ಒಳ್ಳೆಯದು ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೆ.ರುದ್ರೇಶ್ ಮಾಹಿತಿ ನೀಡಿದರು.

> **ಹೆಚ್ಚು ರಸಗೊಬ್ಬರ ಬಳಕೆ ಒಳ್ಳೆಯದಲ್ಲ...**
>
> 
>
> ಈ ವರ್ಷ ಪೂರ್ವ ಮುಂಗಾರಿನಲ್ಲಿ ಉತ್ತಮ ಮಳೆಯಾಗಿದ್ದು, ಬಿತ್ತನೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಿದೆ. ರೈತರು ಹೆಚ್ಚಾಗಿ ರಸಗೊಬ್ಬರ ಬಳಕೆ ಮಾಡುವುದನ್ನು ನಿಲ್ಲಿಸಬೇಕು. ರಸಗೊಬ್ಬರದ ಜೊತೆಗೆ ಕೊಟ್ಟಿಗೆ ಗೊಬ್ಬರ, ಹಸಿರು ಗೊಬ್ಬರ ಬಳಕೆ ಮಾಡುವುದರಿಂದ ಉತ್ತಮ ಇಳುವರಿ ಜೊತೆಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಬೆಳೆಯಲು ಸಹಾಯವಾಗುತ್ತದೆ. ಮೈಸೂರು ಜಿಲ್ಲೆಯ ಕೆಲವೆಡೆ ತಂಬಾಕಿಗೆ ಪರ್ಯಾಯವಾಗಿ ಶುಂಠಿ ಬೆಳೆಯಲಾಗುತ್ತಿದೆ. ಶುಂಠಿಗೆ ಹೆಚ್ಚು ರಸಗೊಬ್ಬರ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತದೆ.
>
> - **ಡಾ.ಎಂ.ಮಹಂತೇಶಪ್ಪ,** ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಕುಕ್ಕರಹಳ್ಳಿ ಕೆರೆ ಮುಖ್ಯದ್ವಾರದ ಬಳಿಯ

ಮಳಿಗೆ ತೆರವಿಗೆ ಆಗ್ರಹಿಸಿ ಏಕಾಂಗಿ ಪ್ರತಿಭಟನೆ



ಮೈಸೂರು,ಮೇ 5(ಪಿಎಂ)- ಕುಕ್ಕರಹಳ್ಳಿ ಕೆರೆಯ ಮುಖ್ಯದ್ವಾರದ (ರೈಲ್ವೆ ಗೇಟ್ ಬಳಿ) ಬಳಿ ರಸ್ತೆಬದಿ ನಿರ್ಮಿಸಿರುವ ಮಳಿಗೆ ತೆರವುಗೊಳಿಸಲು ಆಗ್ರಹಿಸಿ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷೆ ಭಾನು ಮೋಹನ್ ಗುರುವಾರ ಏಕಾಂಗಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಮೈಸೂರು ವಿವಿ ಕ್ರಾಫರ್ಡ್ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಿ, ಕಾನೂನುಬಾಹಿರವಾಗಿ ಮಳಿಗೆ ನಿರ್ಮಿಸಿದ್ದು, ತೆರವಿಗೆ ಆಗ್ರಹಿಸಿ, ಈಗಾಗಲೇ ಪ್ರತಿಭಟನೆ ನಡೆಸಿದರೂ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಭಾನುಮೋಹನ್, ಮೈಸೂರು ವಿವಿ ಅಧೀನದ ಕುಕ್ಕರಹಳ್ಳಿ ಕೆರೆ ಮುಂಭಾಗದಲ್ಲಿ ನಂದಿನಿ ಹಾಲಿನ ಮಳಿಗೆ ತಲೆ ಎತ್ತಿದ್ದು, ಇದು ಕಾನೂನುಬಾಹಿರ ಎಂದು ವಿವಿ ಕುಲಪತಿಗಳಿಗೆ ದೂರು ಸಲ್ಲಿಸಿದ್ದರೂ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಸದರಿ ಮಳಿಗೆ ಎದುರೇ ರೈತರ ಜೊತೆಗೂಡಿ ಸಮಿತಿ ವತಿಯಿಂದ ಒಮ್ಮೆ ಪ್ರತಿಭಟನೆ ಸಹ ನಡೆಸಲಾಯಿತು. ಆದರೂ ಮಳಿಗೆ ಕಾರ್ಯಾರಂಭಕ್ಕೆ ಅವಕಾಶ ನೀಡಲಾಗಿದೆ ಎಂದು ಕಿಡಿಕಾರಿದರು.

ಕುಕ್ಕರಹಳ್ಳಿಕೆರೆ ದಡದ ಸುತ್ತಲು ಮಳಿಗೆ ತೆರೆಯಲು ಅವಕಾಶವಿಲ್ಲ. ಆದರೂ ಈಗಾಗಲೇ ಮೀನು ಮಾಂಸ ಮಳಿಗೆ ತೆರೆಯಲಾಗಿದೆ ಈ ಮಳಿಗೆ ನಿರ್ಮಿಸುವಾಗಲೂ ಹೋರಾಟ ನಡೆಸಲಾಯಿತು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಈಗ ನಂದಿನಿ ಹಾಲಿನ ಮಳಿಗೆಗೆ ಅವಕಾಶ ಕಲ್ಪಿಸಿದ್ದು, ಹೀಗೆ ದಿನದಿಂದ ದಿನಕ್ಕೆ ವಾಣಿಜ್ಯ ಉದ್ದೇಶದ ಮಳಿಗೆಗಳು ಇಲ್ಲಿ ಹೆಚ್ಚಾಗುತ್ತಿವೆ. ಈ ರೀತಿಯಾದರೆ ಕೆರೆಯ ಸುತ್ತಲು ಆಶ್ರಯ ಪಡೆದಿರುವ ಪ್ರಾಣಿ-ಪಕ್ಷಿಗಳಿಗೆ ತೊಂದರೆಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಮಳಿಗೆ ಸ್ಥಾಪಿಸಲು ಟೆಂಡರ್ ಮತ್ತು ಪತ್ರಿಕಾ ಪ್ರಕಟಣೆ ಸೇರಿದಂತೆ ಯಾವುದೇ ನಿಯಮಾವಳಿ ಪಾಲನೆಯಾಗಿಲ್ಲ. ಖುದ್ದು ಕುಲಪತಿಗಳೊಂದಿಗೆ ಈ ಬಗ್ಗೆ ಮಾತನಾಡಲು ಅವರು ಕೈಗೇ ಸಿಗುತ್ತಿಲ್ಲ. 'ಕೆರೆ ಸುತ್ತಮುತ್ತ ಮಳಿಗೆಗಳ ನಿರ್ಮಾಣಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದ ಹಿನ್ನೆಲೆಯಲ್ಲಿ ತೆರವುಗೊಳಿಸಲು ಕ್ರಮ ವಹಿಸದಿದ್ದರೆ ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಗುತ್ತದೆ' ಎಂದು ವಕೀಲರ ಮೂಲಕ ಮೈಸೂರು ವಿವಿ ಕುಲಸಚಿವರು ಸೇರಿದಂತೆ ಸಂಬಂಧಿಸಿದವರಿಗೆ ನೋಟಿಸ್ ಸಹ ನೀಡಲಾಗಿದೆ ಆದರೂ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ನಾಳೆ ಬೆಳಗ್ಗೆ 10.30ಕ್ಕೆ ತಮ್ಮ ಕಚೇರಿಯಲ್ಲಿ ಕುಲಪತಿಗಳು ಭೇಟಿಗೆ ಲಭ್ಯವಿರುವುದಾಗಿ ಮಾಹಿತಿ ಬಂದ ಮೇರೆಗೆ ಭಾನು ಮೋಹನ್ ತಾತ್ಕಾಲಿಕವಾಗಿ ತಮ್ಮ ಪ್ರತಿಭಟನೆ ಕೈಬಿಟ್ಟರು.

ಮದ್ಯ ಖರೀದಿ 'ವೆಬ್ ಇಂಡೆಂಟ್' ತಂತ್ರಾಂಶ ಗೊಂದಲ: ಮೇ 12ರಂದು ಪ್ರತಿಭಟನೆ

ಮೈಸೂರು, ಮೇ 5(ಎಂಕೆ)- ಕರ್ನಾಟಕ ಪಾನೀಯ ನಿಗಮ(ಕೆಎಸ್‌ಬಿಸಿಎಲ್) ಮದ್ಯ ಖರೀದಿಗಾಗಿ ಜಾರಿಗೆ ತಂದಿರುವ 'ವೆಬ್-ಇಂಡೆಂಟ್' ತಂತ್ರಾಂಶ ಸಮರ್ಪಕವಾಗಿ ಅರ್ಥವಾಗದ ಹಿನ್ನೆಲೆಯಲ್ಲಿ ಹಳೇ ವ್ಯವಸ್ಥೆಯನ್ನೇ ಜಾರಿಗೊಳಿಸುವಂತೆ ಒತ್ತಾಯಿಸಿ ಮೈಸೂರು ಹಾಗೂ ಮಂಗಳೂರು ವಿಭಾಗದಲ್ಲಿ ಮೇ 12 ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್‌ನ ರಾಜ್ಯಾಧ್ಯಕ್ಷ ಎಸ್.ಗುರುಸ್ವಾಮಿ ತಿಳಿಸಿದರು.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಹೊಸದಾಗಿ ಜಾರಿಗೆ ತಂದಿರುವ ವೆಬ್-ಇಂಡೆಂಟ್ ಸರಿಯಾಗಿ ಅರ್ಥವಾಗುತ್ತಿಲ್ಲ. ಆರ್ಡರ್ ಮಾಡಿದರೂ ಸರಿಯಾದ ಸಮಯಕ್ಕೆ ಸ್ಟಾಕ್ ಬರುತ್ತಿಲ್ಲ. ರಾತ್ರಿ 11 ಗಂಟೆವರೆಗೂ ಕೆಲವರು ಮದ್ಯದಂಗಡಿ ನಡೆಸುವವರು ಇದ್ದಾರೆ. ವ್ಯಾಪಾರ ಮುಗಿದ ಬಳಿಕ ಕಂಪ್ಯೂಟರ್ ಎದುರು ಕುಳಿತು ಆರ್ಡರ್ ಮಾಡಬೇಕು. ನಮ್ಮ ಖಾತೆಯಲ್ಲಿ ಹಣವಿಲ್ಲದಿದ್ದರೆ ಮದ್ಯ ಖರೀದಿ ಸಾಧ್ಯವಿಲ್ಲ. ಆದ್ದರಿಂದ ಹಳೇ ವ್ಯವಸ್ಥೆಯನ್ನು ಮುಂದುವರೆಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಅಪ್ರಾಪ್ತ ಬಾಲಕಿ ಅಪಹರಿಸಿ ವಿವಾಹ : ಆರೋಪಿ ಬಂಧನ

ಮೈಸೂರು,ಮೇ5- ಕಲ್ಯಾಣ ಮಂಟಪದಿಂದ ಬಾಲಕಿಯನ್ನು ಅಪಹರಿಸಿ ವಿವಾಹವಾದ ಪ್ರಕರಣವನ್ನು ಕೆಲವೇ ಗಂಟೆಯಲ್ಲಿ ಭೇದಿಸಿದ ಮೈಸೂರಿನ ವಿವಿ ಪುರಂ ಠಾಣೆ ಪೊಲೀಸರು ಯುವಕನನ್ನು ಬಂಧಿಸಿ ಅಪಹರಣಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ವಿವರ: ಮಂಡ್ಯ ಜಿಲ್ಲೆ ಕೊತ್ತತ್ತಿ ಹೋಬಳಿ ಬೇಲೂರು ಗ್ರಾಮದ ನಿವಾಸಿಯೊಬ್ಬರು ಕುಟುಂಬ ಸಮೇತರಾಗಿ ಮೈಸೂರಿನ ಗೋಕುಲಂನಲ್ಲಿರುವ ಶಿವಮ್ಮ ಮಹದೇವಪ್ಪ ಕಲ್ಯಾಣ ಮಂಟಪಕ್ಕೆ ಸಂಬಂಧಿಕರ ಮದುವೆಗಾಗಿ ಮೇ.4ರಂದು ಸಂಜೆ ಆಗಮಿಸಿದ್ದರು. ಈ ಕುಟುಂಬವು ಅಂದು ರಾತ್ರಿ ಕಲ್ಯಾಣ ಮಂಟಪದಲ್ಲೇ ವಾಸ್ತವ್ಯ ಹೂಡಿತ್ತು ಮರುದಿನ ಅಂದರೆ ಇಂದು(ಮೇ.5) ಬೆಳಗ್ಗೆ 10.30ರ ಸುಮಾರಿನಲ್ಲಿ ಬಾಲಕಿಯನ್ನು ಕಾಣಲಿಲ್ಲವೆಂದು ಬೇಲೂರು ನಿವಾಸಿ ಹುಡುಕುತ್ತಿದ್ದಾಗ ಅವರ ಸಂಬಂಧಿಕರು ಬೇಲೂರು ಗ್ರಾಮದವನೇ ಆದ ಪ್ರತಾಪ್ ಎಂಬಾತ ಬಾಲಕಿಯನ್ನು ಹುಂಡೈ ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾನೆ ಎಂದು ತಿಳಿಸಿದ್ದಾರೆ. ಬಾಲಕಿ ತಂದೆ ಮತ್ತು ಸಂಬಂಧಿಕರು ಪ್ರತಾಪ್ ಮತ್ತು ಬಾಲಕಿಗಾಗಿ ಹುಡುಕಾಡುತ್ತಿದ್ದಾಗ ಅವರಿಬ್ಬರು ಮಂಡ್ಯ ಸಬ್‌ರಿಜಿಸ್ಟರ್ ಕಚೇರಿಯಲ್ಲಿ ವಿವಾಹವಾಗಿದ್ದಾರೆ ಎಂಬ ಮಾಹಿತಿ ಮಧ್ಯಾಹ್ನ ದೊರೆಯುತ್ತದೆ. ಸಬ್‌ರಿಜಿಸ್ಟರ್ ಕಚೇರಿಯಲ್ಲಿ ಇವರಿಬ್ಬರು ವಿವಾಹವಾಗಿರುವ ಬಗ್ಗೆ ಖಚಿತ ಪಡಿಸಿಕೊಂಡ ನಂತರ ಬಾಲಕಿ ತಂದೆ ಸಂಜೆ 6.45ರಲ್ಲಿ ನೀಡಿದ ದೂರಿನ್ವಯ ಅಪ್ರಾಪ್ತ ಬಾಲಕಿಯ ಅಪಹರಣ ಮತ್ತು ಬಾಲ್ಯವಿವಾಹ ಪ್ರಕರಣ ದಾಖಲಿಸಿಕೊಂಡ ವಿವಿ ಪುರಂ ಠಾಣೆ ಪೊಲೀಸರು ಕೆಲವೇ ಗಂಟೆಗಳಲ್ಲಿ ಅರೋಪಿಯನ್ನು ಬಂಧಿಸಿ, ಅಪಹರಣಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಂಡು ಬಾಲಕಿಯನ್ನು ಬಾಲಕಿಯರ ಬಾಲಮಂದಿರಕ್ಕೆ ರವಾನಿಸಿದ್ದಾರೆ.

ಹೈದರಾಬಾದ್‌ನಲ್ಲಿ ಚಾಕುವಿನಿಂದ ಇರಿದು ಯುವಕನ ಕಗ್ಗೊಲೆ; ಮರ್ಯಾದಾ ಹತ್ಯೆ ಶಂಕೆ



ಹೈದರಾಬಾದ್, ಮೇ 5-ಬೈಕ್‌ನಲ್ಲಿ ಬಂದ ದುಷ್ಕರ್ಮಿಯೊಬ್ಬ ಯುವಕನೊಬ್ಬನನ್ನು ಚಾಕುವಿನಿಂದ ಇರಿದು ಕೊಂದು ಪರಾರಿಯಾಗಿರುವ ಘಟನೆ ಹೈದರಾಬಾದ್‌ನ ಸರೂರ್ ನಗರ ತಹಸೀಲ್ದಾರ್ ಕಚೇರಿ ಬಳಿ ನಡೆದಿದೆ. ಇದನ್ನು ಮರ್ಯಾದಾ ಹತ್ಯೆ ಎಂದು ಶಂಕಿಸಲಾಗಿದೆ. ಮೃತನನ್ನು ಬಿಲ್ಲಪುರಂ ನಾಗರಾಜ್ ಎಂದು ಗುರುತಿಸಲಾಗಿದೆ. ಈತ ಸಿಕಂದರಾಬಾದಿನ ಮರೆಡ್ಪಲ್ಲಿ ನಿವಾಸಿ. ಓಲ್ಡ್ ಸಿಟಿಯ ಮಲಕ್‌ಪೇಟೆಯಲ್ಲಿರುವ ಜನಪ್ರಿಯ ಕಾರ್ ಶೋ ರೂಂನಲ್ಲಿ ಸೇಲ್ಸ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ. ಕೆಲ ಶಂಕಿತರನ್ನು ಬಂಧಿಸಲಾಗಿತ್ತು. ಅವರೆಲ್ಲರೂ ಈತ ಮದುವೆಯಾಗಿದ್ದ ಹುಡುಗಿಯ ಕುಟುಂಬಕ್ಕೆ ಸೇರಿದವರು ಎಂದು ಪೊಲೀಸರು ಖಚಿತಪಡಿಸಿದ್ದಾರೆ.

ನಾಗರಾಜ್ ಜನವರಿ ತಿಂಗಳಿನಲ್ಲಿ ಸೈಯದ್ ಅಶ್ರಿನ್ ಸುಲ್ತಾನಾ ಎಂಬ ಹುಡುಗಿಯನ್ನು ಹಳೆ ನಗರದ ಆರ್ಯ ಸಮಾಜ ಮಂದಿರದಲ್ಲಿ ವಿವಾಹವಾಗಿದ್ದರು. ಕಾಲೇಜು ದಿನಗಳಿಂದಲೂ ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರು. ಬೇರೆ ಬೇರೆ ಧರ್ಮದವರಾಗಿದ್ದರಿಂದ ಆಕೆಯ ಮನೆಯವರು ಕೊಂದಿದ್ದಾರೆ ಎಂದು ನಾಗರಾಜನ ಸಂಬಂಧಿಕರೊಬ್ಬರು ಆರೋಪಿಸಿದ್ದಾರೆ. ನಾಗರಾಜ್ ಅವರ ಸಂಬಂಧಿಕರು ಪ್ರತಿಭಟನೆ ನಡೆಸಿದ್ದು, ಘಟನೆಯ ಪ್ರದೇಶದಲ್ಲಿ ಉದ್ವಿಗ್ನತೆಯ ವಾತಾವರಣ ಸೃಷ್ಟಿಯಾಗಿತ್ತು. ಕೊಲೆ ಹಿಂದೆ ಅವರ ಪತ್ನಿಯ ಕುಟುಂಬದ ಕೈವಾಡವಿದೆ ಎಂದು ಆರೋಪಿಸಲಾಗಿದೆ. ಹತ್ಯೆಯಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರನ್ನು ಬಂಧಿಸಬೇಕು ಮತ್ತು ಈ ಹತ್ಯೆಯ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ತೆಲಂಗಾಣ ಬಿಜೆಪಿ ಶಾಸಕ ರಾಜಾ ಸಿಂಗ್ ಒತ್ತಾಯಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ಏನಯ್ಯ ನೀನು ಕೊಟ್ಟ ಚೆಕ್ ಬೌನ್ಸಾಗಿ ಬಂದಿದೆ"
ರೋಗಿ : "ಅದರಲ್ಲೇನಿದೆ ವಿಶೇಷ, ನೀವು ಗುಣಪಡಿಸಿದ ಜ್ವರವೂ ಮರಳಿ ಬಂದಿದೆಯಲ್ಲಾ"

ಮೈಸೂರು ಮಿತ್ರ

ಶುಕ್ರವಾರ, 6 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೀವು ಕಣಿವೆಂಯೊಂದರ ಆಳಕ್ಕೆ ಇಳಿದಾಗ ಮಾತ್ರ ಎತ್ತರದ ಶಿಖರ ಅದೆಷ್ಟು ಅಮೋಘ ಎಂಬುದು ನಿಮಗೆ ತಿಳಿಯಲು ಸಾಧ್ಯ. –ರಿಚರ್ಡ್ ಎಂ.ನಿಕ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮನದಲ್ಲಿ ನೆನೆಯುವವನಿಗೆ, ಮನೆಯೇನು ಮಠವೇನು?

ನಿಮ್ಮ ಪತ್ರಗಳು

ಮೈಸೂರಿಂದ ಕೆಂಗೇರಿ ಬೇಗ ತಲುಪುವ ರೈಲು ಬೆಂಗಳೂರು ಕೇಂದ್ರ ನಿಲ್ದಾಣ ತಲುಪುವುದು ಮಾತ್ರ ತಡ!

ಮಾನ್ಯರೆ,

ನಿತ್ಯವೂ ಮೈಸೂರು ಮತ್ತು ಕೆಎಸ್‌ಆರ್ (ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ–ಬೆಂಗಳೂರು ಕೇಂದ್ರ ರೈಲು ನಿಲ್ದಾಣ) ಬೆಂಗಳೂರು ನಡುವೆ ಹಲವಾರು ರೈಲುಗಳು ಸಂಚರಿಸುತ್ತವೆ. ರೈಲ್ವೆ ವಿದ್ಯುದ್ದೀಕರಣ ಮತ್ತು ಡಬಲ್ ಟ್ರ್ಯಾಕಿಂಗ್ ಕಾಮಗಾರಿ ಪೂರ್ಣಗೊಂಡ ನಂತರವೂ ರೈಲುಗಳ ಮುಖ್ಯ ಸಮಸ್ಯೆ ಎಂದರೆ, ಮೈಸೂರಿನಿಂದ ಹೊರಟ ಎಲ್ಲಾ ರೈಲುಗಳು ಕೆಂಗೇರಿಗೆ ಬೇಗ ತಲುಪುತ್ತವೆ. ಆದರೆ ಕೆಂಗೇರಿಯಿಂದ ಕೆಎಸ್‌ಆರ್ ಬೆಂಗಳೂರಿಗೆ ತಲುಪಬೇಕಾದರೆ ತುಂಬಾ ಸಮಯ ತೆಗೆದುಕೊಳ್ಳುತ್ತವೆ.

ಮೈಸೂರಿನಿಂದ ಹೊರಟ ರೈಲುಗಳು ಕೆಂಗೇರಿಯಲ್ಲಿ ಸುಮಾರು ಸಮಯ ನಿಲುಗಡೆಯಾಗುತ್ತವೆ. ಮತ್ತೆ ನಾಯಂಡನಹಳ್ಳಿ ರೈಲ್ವೆ ನಿಲ್ದಾಣದಲ್ಲೂ ಸುಮಾರು ಕಾಲ ನಿಲುಗಡೆಯಾಗುತ್ತವೆ. ನಾಯಂಡನಹಳ್ಳಿಯಿಂದ ಮತ್ತೆ ಕೆಎಸ್‌ಆರ್ ಬೆಂಗಳೂರಿನ ಹೊರ ಸಿಗ್ನಲ್‌ನಲ್ಲೂ ಸಹ ಕೆಲ ಸಮಯ ನಿಲ್ಲಿಸುತ್ತವೆ. ಕೊನೆ ಪಕ್ಷ ಮೆಟ್ರೋ ಸ್ಟೇಷನ್‌ಗಳು ಕೆಂಗೇರಿ ಮತ್ತು ನಾಯಂಡನಹಳ್ಳಿ ರೈಲ್ವೆ ನಿಲ್ದಾಣಗಳ ಸಮೀಪದಲ್ಲಿದ್ದರೆ ಪ್ರಯಾಣಿಕರು ಮೆಟ್ರೋ ರೈಲುಗಳನ್ನು ಹತ್ತಿ ಬೆಂಗಳೂರಿನಲ್ಲಿ ತಮ್ಮ ಗಮ್ಯಸ್ಥಾನಗಳನ್ನು ತಲುಪುತ್ತಿದ್ದರು.

ಉದಾಹರಣೆಗೆ, ಚಾಮುಂಡಿ ಎಕ್ಸ್‌ಪ್ರೆಸ್ ರೈಲು ಬೆಳಗ್ಗೆ 6.45ಕ್ಕೆ ಮೈಸೂರಿನಿಂದ ಹೊರಟು, ಸುಮಾರು 2 ಗಂಟೆಗಳ ಪ್ರಯಾಣದ ಅವಧಿಯೊಂದಿಗೆ ಬೆಳಿಗ್ಗೆ 8.50ರ ಸುಮಾರಿಗೆ ಕೆಂಗೇರಿ ತಲುಪುತ್ತದೆ. ಕೆಂಗೇರಿಯಿಂದ ಕೆಎಸ್‌ಆರ್ ಬೆಂಗಳೂರು ತಲುಪಲು ಬೆಳಗ್ಗೆ 9.30 ಅಥವಾ 9.50ಕ್ಕೆ ಸುಮಾರು 45 ನಿಮಿಷ ಅಥವಾ 1 ಗಂಟೆ ಸಮಯ ತೆಗೆದುಕೊಳ್ಳುತ್ತದೆ. ಇದರಿಂದ ಪ್ರಯಾಣಿಕರ ಸಮಯ ರೈಲಿನಲ್ಲಿ ವ್ಯರ್ಥವಾಗುತ್ತದೆ. ಬೆಳಗಿನ ವೇಳೆ ಮೈಸೂರಿನಿಂದ ಬೆಂಗಳೂರಿಗೆ ಸಾರ್ವಜನಿಕರು ಬೇಗ ತಲುಪಿದರೆ ವಿವಿಧ ಸರ್ಕಾರಿ ಕಚೇರಿಗಳು, ನ್ಯಾಯಾಲಯಗಳು ಮತ್ತು ಇತರ ಸ್ಥಳಗಳಿಗೆ ತೆರಳಿ ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿ ಹಿಂತಿರುಗಲು ಅನುಕೂಲವಾಗುತ್ತದೆ.

ಮೈಸೂರಿನಿಂದ ಹೊರಟ ರೈಲುಗಳು ಫ್ಲಾಟ್‌ಫಾರಂ ದಟ್ಟಣೆಯಿಂದಾಗಿ ಕೆಎಸ್‌ಆರ್ ಬೆಂಗಳೂರನ್ನು ಬೇಗ ತಲುಪಲು ಸಾಧ್ಯವಾಗದಿದ್ದರೆ, ಕೆಂಗೇರಿ ಮತ್ತು ನಾಯಂಡನಹಳ್ಳಿ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆ ಮಾಡಿ ಪ್ರಯಾಣಿಕರ ಸಮಯ ವ್ಯರ್ಥ ಮಾಡುವ ಬದಲು ಮೈಸೂರಿನಿಂದಲೇ ತಡವಾಗಿ ಹೊರಡಬಹುದಲ್ಲವೇ? ಜ್ಞಾನಭಾರತಿ ರೈಲ್ವೆ ನಿಲ್ದಾಣ ಮೆಟ್ರೋ ರೈಲು ನಿಲ್ದಾಣಕ್ಕೆ ಸಮೀಪವಿರುವುದರಿಂದ ಎಲ್ಲಾ ರೈಲುಗಳನ್ನು ಈ ನಿಲ್ದಾಣದಲ್ಲಿ ನಿಲುಗಡೆ ಮಾಡುವುದು ಒಳ್ಳೆಯದು.

ಆದ್ದರಿಂದ ಎಲ್ಲಾ ರೈಲುಗಳನ್ನು ಜ್ಞಾನಭಾರತಿ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆ ಮಾಡಿ ಪ್ರಯಾಣಿಕರ ಸಮಯ ವ್ಯರ್ಥವಾಗದಂತೆ ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳಿಗೆ ಮನವಿ ಮಾಡುತ್ತೇನೆ. **–ಎಂ.ವಿ. ಶ್ರೀನಿವಾಸ, ಮೈಸೂರು.**

ಮರದ ಕೊಂಬೆಗಳನ್ನು ಕತ್ತರಿಸಲು ಮನವಿ

ಮಾನ್ಯರೆ,

ಮೈಸೂರಿನ ವಿಶ್ವಮಾನವ ಜೋಡಿ ರಸ್ತೆ ಹಾಗೂ ವರ್ತುಲ ರಿಂಗ್ ರಸ್ತೆ ಸೇರಿದಂತೆ ನಗರದ ವಿವಿಧ ಬಡಾವಣೆಗಳ ರಸ್ತೆಗಳ ಬದಿಯಲ್ಲಿನ ಮರಗಳ ಕೊಂಬೆಗಳು ರಸ್ತೆ ಮಧ್ಯೆ ಹಾಗೂ ರಸ್ತೆ ಬದಿ ಎರಡೂ ಕಡೆಗಳಲ್ಲಿ ಚಾಚಿಕೊಂಡಿದ್ದು, ದ್ವಿಚಕ್ರ ವಾಹನ ಸವಾರರು ಮತ್ತು ಕಾರು ಚಾಲಕರಿಗೆ ತುಂಬಾ ತೊಂದರೆಯಾಗಿದೆ.

ಈ ಮರದ ಕೊಂಬೆಗಳು ಚಾಚಿಕೊಂಡಿರುವುದರಿಂದ ಅವುಗಳು ತಾಗಿ ವಾಹನ ಸವಾರರು ಸಂಚರಿಸುವಾಗ ಸಣ್ಣಪುಟ್ಟ ಗಾಯಗಳಾಗುವುದಲ್ಲದೆ, ರಸ್ತೆ ಅಪಘಾತಗಳು ಸಂಭವಿಸುವುದುಂಟು.

ಮರದ ಕೊಂಬೆಗಳು ರಸ್ತೆಗೆ ಚಾಚಿಕೊಂಡಿರುವುದರಿಂದ ನಾಲ್ಕು ಚಕ್ರ ವಾಹನಗಳಿಗೆ ಗೀರುಗಳಾಗುತ್ತವೆ (scratches). ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ತಕ್ಷಣ ಮರದ ಕೊಂಬೆಗಳನ್ನು ಕತ್ತರಿಸಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿ ಮನವಿ.

–ಮಹದೇವ ಶಂಕರ, ಮೈಸೂರು.

ನಾಚಿಕೆ ಆಗಬೇಕು ಸರ್ಕಾರಕ್ಕೆ

ಮಾನ್ಯರೆ,

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಜೀವನದಲ್ಲಿ ಬದುಕು ಮತ್ತು ಆರೋಗ್ಯ ಎಷ್ಟೋ ಮುಖ್ಯನೋ ಹಾಗೆಯೇ ಶಿಕ್ಷಣದ ವ್ಯವಸ್ಥೆ ಅಷ್ಟೇ ಮುಖ್ಯ. ಇಂತಹ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡುತ್ತಿರುವ ರಾಜ್ಯ ಸರ್ಕಾರಕ್ಕೆ ಧಿಕ್ಕಾರ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸರಿಸಮನಾಗಿ ಬದುಕಬೇಕಾದರೆ ಶಿಕ್ಷಣ ಕ್ಷೇತ್ರವೇ ಮೂಲ ಅಡಿಪಾಯ. ಅಂತಹ ಶಿಕ್ಷಣವನ್ನು ಪಡೆದ ಅದೆಷ್ಟೋ ವಿದ್ಯಾರ್ಥಿಗಳ ಜೀವನದ ಜೊತೆಗೆ ಇವತ್ತಿನ ಸರ್ಕಾರ ಚೆಲ್ಲಾಟವಾಡುತ್ತಿರುವುದು ನಾಚಿಕೆಯ ಸಂಗತಿ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ದುರ್ಬಳಕೆ ಮಾಡಿಕೊಂಡು ಅಧಿಕಾರವನ್ನು ಅನುಭವಿಸುತ್ತಿರುವ ನಾಯಕರಿಗೆ ಧಿಕ್ಕಾರ.

2021 ರಲ್ಲಿ 545 ಪಿಎಸ್‌ಐ ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗಿತ್ತು. ಅದರಲ್ಲಿ ಕೆಲವು ವಿದ್ಯಾರ್ಥಿಗಳು ಅಕ್ರಮ ಎಸಗಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಅವರೆಲ್ಲರೂ 50 ಲಕ್ಷ ಮತ್ತು 80 ಲಕ್ಷ ರೂ. ಕೊಟ್ಟು ಹುದ್ದೆಯನ್ನು ಕೊಂಡು ಕೊಂಡಿದ್ದಾರೆ. ಇದರ ಹಿಂದೆ ರಾಜ್ಯ ಸರ್ಕಾರ ಮತ್ತು ಕೆಲವು ಸಚಿವರ ಹೆಸರು ಮತ್ತು ವಿರೋಧ ಪಕ್ಷಗಳ ಮುಖಂಡರ ಹೆಸರು ಬಹಳ ಸದ್ದುಮಾಡುತ್ತಿದೆ. ಇದು ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತಹ ವಿಷಯವಾಗಿದೆ. ಹಲವಾರು ಬಡ ಯುವ ಮನಸ್ಸುಗಳು ಬಹಳ ಕಷ್ಟಪಟ್ಟು ವಿದ್ಯಾಭ್ಯಾಸವನ್ನು ಮಾಡಿ ಒಂದು ಒಳ್ಳೆಯ ಕನಸನ್ನು ಕಟ್ಟಿಕೊಂಡಿರುತ್ತಾರೆ. ನಾನು ಓದಿ, ಒಂದು ಉನ್ನತ ಹುದ್ದೆಯನ್ನು ಪಡೆದು ಬದುಕಬೇಕು ಎಂಬ ದೊಡ್ಡ ದೊಡ್ಡ ಕನಸನ್ನು ಹೊಂದಿರುತ್ತಾರೆ. ಆದರೆ ಇದರ ನಡುವೆ ಕೆಲವು ಕಿಡಿಗೇಡಿಗಳಿಂದ ಮತ್ತು ದೊಡ್ಡ ದೊಡ್ಡ ಶ್ರೀಮಂತರ ಮಕ್ಕಳಿಗಾಗಿ ಒಂದೊಂದು ಹುದ್ದೆಗೆ 50 ರಿಂದ 80 ಲಕ್ಷ ರೂ. ಕೊಟ್ಟು ಹುದ್ದೆಯನ್ನು ಖರೀದಿಸಿದರೆ ಬಡವರ ಪಾಡೇನು ಸರ್ಕಾರ ಇದರ ಬಗ್ಗೆ ಯೋಚಿಸಿದೆಯೇ?

ಈ ಪರೀಕ್ಷೆಯಲ್ಲಿ ಅಕ್ರಮ ನಡೆಸಿರುವವರು ಎಷ್ಟೇ ದೊಡ್ಡ ಶ್ರೀಮಂತರಿರಲಿ, ಯಾವುದೇ ರಾಜಕೀಯ (ಕಾಂಗ್ರೆಸ್– ಬಿಜೆಪಿ–ಜೆಡಿಎಸ್) ಪಕ್ಷದ ಶಾಸಕ, ಸಚಿವ, ಮುಖಂಡ ಯಾರೇ ಇರಲಿ ಇವರಿಗೆ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆ ಆಗಬೇಕು. ಪ್ರಾಮಾಣಿಕವಾಗಿ ಓದಿ ಪಿಎಸ್‌ಐ ಪರೀಕ್ಷೆ ಪಾಸು ಮಾಡಿದ ಯುವ ಶಕ್ತಿಗಳಿಗೆ ರಾಜ್ಯ ಸರ್ಕಾರ ಕೆಲಸವನ್ನು ಕೊಟ್ಟು ತಪ್ಪು ಮಾಡಿದ ಅವಿವೇಕಿಗಳಿಗೆ ತಕ್ಕ ಶಿಕ್ಷೆಯ ಜೊತೆಗೆ ಹೆಚ್ಚುವರಿ ತನಿಖೆಗೆ ಇದನ್ನೂ ಸಿಬಿಐಗೆ ವಹಿಸಬೇಕಾಗಿ ಮನವಿ.

–ತಿಮ್ಮರಾಜು (ಕೋಟೆರಾಜ್), ಹೆಚ್.ಡಿ.ಕೋಟೆ ತಾ.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಭಾರತದ ವಿರುದ್ಧ ಚೀನಾದ ಸೈಬರ್ ಯುದ್ಧ

> ಚೀನೀಯರು ಈ ವಿಷಯದಲ್ಲಿ ರಹಸ್ಯಗಳನ್ನು ರಕ್ಷಿಸುವುದರಲ್ಲಿ ಪರಿಣಿತರಾಗಿದ್ದಾರೆ. ಹೀಗಾಗಿ ಚೀನೀಯರು ಯಾವುದೇ ಹಿಂಜರಿಕೆ ಇಲ್ಲದೇ ಯುದ್ಧ ನೀತಿಯ ಭಾಗವಾಗಿ ಇದನ್ನು ಬಳಸುತ್ತಿದ್ದಾರೆ. ಜಗತ್ತಿನ ಹೆಚ್ಚಿನೆಲ್ಲ ಪ್ರಜಾಸತ್ತಾತ್ಮಕ ದೇಶಗಳು ಚೀನಾ ತಮ್ಮ ದೇಶದ ವ್ಯವಸ್ಥೆಗಳನ್ನು ಸ್ಥಗಿತಗೊಳಿಸಬಹುದೆಂಬ ಭೀತಿಯಲ್ಲಿವೆ. ಚೀನಾ ಹ್ಯಾಕಿಂಗ್‌ಗಾಗಿಯೇ ಜನಸಾಮಾನ್ಯರ ಗುಂಪುಗಳನ್ನು ರಚಿಸಿದ್ದು, ಹ್ಯಾಕಿಂಗ್ ಮಾಡಿರುವುದು ಬಹಿರಂಗಗೊಂಡ ಸಂದರ್ಭದಲ್ಲೆಲ್ಲ, ಈ ಗುಂಪುಗಳಿಗೂ ಚೀನಾ ಸರಕಾರಕ್ಕೂ ಯಾವುದೇ ಸಂಬಂಧವಿಲ್ಲವೆಂಬ ಹೇಳಿಕೆ ನೀಡಿ ಬಚಾವಾಗುತ್ತದೆ. ಎಲ್ಲಕ್ಕಿಂತ ಪ್ರಮುಖವಾಗಿ ಸೈಬರ್ ಆಕ್ರಮಣಗಳಲ್ಲಿ ನಿರಾಕರಣೆಗೆ ಅವಕಾಶವಿದೆ. ಕಪಟ, ಮೋಸ, ರಹಸ್ಯ ಕಾರ್ಯಾಚರಣೆ, ಧೂರ್ತತೆ ಹಾಗೂ ನೇರ ಯುದ್ಧದಿಂದ ತಪ್ಪಿಸಿಕೊಳ್ಳಲು ಚೀನಿ ಯುದ್ಧದ ಪ್ರಮುಖ ಅಸ್ತ್ರಗಳಾಗಿವೆ.

ಯುದ್ಧ ಅಥವಾ ಶಾಂತಿಯಿರಲಿ ಚೀನಾ ತನ್ನ ಶತ್ರು ರಾಷ್ಟ್ರಗಳ ಮೇಲೆ ನಿರಂತರವಾಗಿ ವಿಭಿನ್ನ ರೀತಿಯ ಆಕ್ರಮಣಗಳನ್ನು ಮಾಡುತ್ತಾ ಇರುತ್ತದೆ. ಗಲ್ವಾನ್ ಘಾಟಿಯಲ್ಲಿ ಭಾರತೀಯ ಸೈನಿಕರು ನೀಡಿದ ಹೊಡೆತದಿಂದ ಚೀನಾಕ್ಕೆ ತೀವ್ರ ಮುಖಭಂಗವಾಗಿತ್ತು. ಚೀನಾ ಸೃಷ್ಟಿಸಿದ ಕೊರೊನಾ ಮಹಾಮಾರಿಗೆ ತಾನೇ ಲಸಿಕೆ ತಯಾರಿಸಿ ದುಬಾರಿ ಬೆಲೆಯಲ್ಲಿ ನೀಡುವ ಮೂಲಕ ಜಗತ್ತನ್ನೇ ಲೂಟಿ ಹೊಡೆಯುವ ಹುನ್ನಾರದಲ್ಲಿತ್ತು. ಆದರೆ ಭಾರತ ಲಸಿಕೆ ತಯಾರಿಸಿ ಕೆಲವು ದೇಶಗಳಿಗೆ ರಿಯಾಯಿತಿ ಬೆಲೆಯಲ್ಲಿ, ಬಡ ದೇಶಗಳಿಗೆ ಉಚಿತವಾಗಿ ನೀಡುವ ಮೂಲಕ ಚೀನಾಕ್ಕೆ ಬಲವಾದ ಆರ್ಥಿಕ ಹೊಡೆತ ನೀಡಿತು. ಇದರಿಂದಾಗಿ ಪೆಟ್ಟುತಿಂದ ಸರ್ಪದಂತಾಗಿರುವ ಚೀನಾ, ಭಾರತ ಮಣಿಸಲು ಎಲ್ಲ ಕ್ಷೇತ್ರಗಳಲ್ಲಿ ಸಕ್ರಿಯವಾಗಿದೆ.

ಇದಕ್ಕನುಸಾರವಾಗಿ ಇತ್ತೀಚೆಗೆ ಭಾರತದ ಲಡ್ಡಾಕ್‌ನಂತಹ ಸೂಕ್ಷ್ಮ ಪ್ರದೇಶಗಳಲ್ಲಿರುವ ಪವರ್ ಗ್ರಿಡ್ ಮೇಲೆ ಸೈಬರ್ ದಾಳಿ ನಡೆಸಿ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸುವ ಯತ್ನ ನಡೆಸಿತು. ಈ ಪ್ರದೇಶದಲ್ಲಿ ಕಳೆದೆರಡು ವರ್ಷಗಳಿಂದ ಭಾರತ–ಚೀನಿ ಸೇನೆ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ನಿಂತಿವೆ. ಈ ವರ್ಷಾರಂಭದಲ್ಲಿ ಚೀನಿ ಸರ್ಕಾರ ಪೋಷಿತ ಹ್ಯಾಕರ್‌ಗಳು ಭಾರತದ ಪವರ್ ಗ್ರಿಡ್‌ಗಳನ್ನು ಗುರಿ ಮಾಡಿದ ರಹಸ್ಯವನ್ನು ಭಾರತೀಯ ಅಧಿಕಾರಿಗಳು ಭೇದಿಸಿದ್ದರು. ಇತ್ತೀಚೆಗೆ ಭಾರತವು ಮಾಡಿದ ಸೈಬರ್ ಸುರಕ್ಷೆಯಿಂದ ಚೀನಿ ಪ್ರಯಾಸ ವಿಫಲವಾಯಿತು.

ಚೀನಿ ಸೈಬರ್ ಹಲ್ಲೆ: ಭಾರತದ ಮೇಲೆ ಚೀನಾ ನಿರಂತರವಾಗಿ ದಾಳಿ ಮುಂದುವರಿಸಿದೆ. ಕೆಲವೊಮ್ಮೆ ಯಶಸ್ವಿಯೂ ಆಗಿದೆ. 2020ರ ಅಕ್ಟೋಬರ್‌ನಲ್ಲಿ ಮುಂಬೈನಲ್ಲಿ ಹಠಾತ್ ವಿದ್ಯುತ್ ನಿಂತ ಕಾರಣ ಮುಂಬೈ ಷೇರುಪೇಟೆ ಬಂದ್ ಆಗಿ ಹೂಡಿಕೆದಾರರಿಗೆ ಕೋಟ್ಯಾಂತರ ರೂ.ಗಳ ನಷ್ಟ ಉಂಟಾಯಿತು. ರೈಲ್ವೆ, ವಿಮಾನಯಾನ ಸ್ಥಗಿತಗೊಂಡು ಲಕ್ಷಾಂತರ ಪ್ರಯಾಣಿಕರು ಪರದಾಡುವಂತಾಯಿತು. ಆಸ್ಪತ್ರೆಗಳಲ್ಲಿ ತುಂಬಿದ್ದ ಕೋವಿಡ್ ಪೀಡಿತರ ಪ್ರಾಣ ಉಳಿಸಲು ತುರ್ತಾಗಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಬೇಕಾಯಿತು. ಈ ಘಟನೆ ಸೈಬರ್ ಹಲ್ಲೆಯಿಂದಾಗಿದೆ ಎಂದು ಭಾರತೀಯ ಅಧಿಕಾರಿಗಳು 2021ರಲ್ಲಿ ಪತ್ತೆ ಹಚ್ಚಿದರು. ಈ ಸೈಬರ್ ಅಪರಾಧಿಗಳು ಕೆಲವು ಸಮಯದಿಂದ ಮುಂಬೈಗೆ ವಿದ್ಯುತ್ ಪೂರೈಸುವ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ನಿರಂತರವಾಗಿ ಯತ್ನಿಸಿ, ಯಶಸ್ಸು ಸಾಧಿಸಿದ್ದರು. ಅಧಿಕಾರಿಗಳು ಯಾವುದೇ ದೇಶದ ಹೆಸರು ಹೇಳದಿದ್ದರೂ, ಅದು ಸಾರ್ವಜನಿಕ ರಹಸ್ಯವಾಗಿತ್ತು. ಗಡಿ ಉದ್ವಿಗ್ನತೆಯ ಮಧ್ಯೆ ಭಾರತದ ಮೇಲೆ ಒತ್ತಡ ಹೇರಲು ತನ್ನ ಬಳಿ ಅನೇಕ ವಿಕಲ್ಪಗಳಿವೆ ಎಂದು ಚೀನಾ ಸಂಕೇತ ನೀಡಿತ್ತು.



ಈ ರೀತಿ ಶತ್ರು ದೇಶಗಳಲ್ಲಿ ರಹಸ್ಯವಾಗಿ ಆತಂಕ, ಅಶಾಂತಿ ಹರಡುವುದು, ವಿಧ್ವಂಸಕ ಕೃತ್ಯಗಳನ್ನು ನಡೆಸುವುದು, ಸರಕಾರಗಳನ್ನು ಅಸ್ಥಿರಗೊಳಿಸುವಂತಹ ಅಸಾಂಪ್ರದಾಯಿಕ, ಯುದ್ಧ ಮಾದರಿಗಳಿಗೆ ಛಾಯಾ ಯುದ್ಧವೆನ್ನುತ್ತಾರೆ. ಚೀನಾದ ಇಬ್ಬರು ನಿವೃತ್ತ ಸೇನಾಧಿಕಾರಿಗಳಾದ ಮೆ.ಜ.ಕ್ವಿಯಾವೋ ಲಿಯಾಂಗ್ ಮತ್ತು Col ವಾಂಗ್ ಕ್ಸಿಯಾಂಗ್ ಬರೆದ ಪುಸ್ತಕದಲ್ಲಿ 'ಅಮೆರಿಕದ ಜೊತೆ ನೇರ ಸಂಘರ್ಷ ನಡೆಸದೇ ಅಮೆರಿಕವನ್ನು ಮಣಿಸಲು ಅಸಾಂಪ್ರದಾಯಿಕ ವಿಕಲ್ಪಗಳನ್ನು ಹುಡುಕಬೇಕೆಂದು ತಿಳಿಸಿದ್ದರು' ನಿಶ್ಚಿತವಾಗಿ ಇತ್ತೀಚಿನ ವರ್ಷಗಳಲ್ಲಿ ಈ ಸಲಹೆಗಳು ಚೀನಿ ಯುದ್ಧ ನೀತಿಯ ವಿಭಿನ್ನ ಅಂಗಗಳಾಗಿವೆ. ಕೇವಲ ಅಮೆರಿಕ ಮಾತ್ರವಲ್ಲ ಅದರ **ಯೂರೋಪಿಯನ್ ಮಿತ್ರ** ಪಡೆಗಳು, ಭಾರತದ ವಿರುದ್ಧ ಚೀನಾ ಛಾಯಾ ಯುದ್ಧ ಜಾರಿಯಲ್ಲಿದೆ.

ಚೀನಿ ಯುದ್ಧ ನೀತಿಯಲ್ಲಿ ಹ್ಯಾಕಿಂಗ್‌ಗೆ ಪ್ರಾಧಾನ್ಯ: 1997ರಲ್ಲಿ ಚೀನಾದ ಕೇಂದ್ರೀಯ ಆಯೋಗವು (**CMC**) ಅಮೆರಿಕ ಮತ್ತು ಯುರೋಪಿಯನ್ ದೇಶಗಳ ಕಂಪ್ಯೂಟರ್ ವ್ಯವಸ್ಥೆಯೊಳಗೆ ನುಸುಳಿ ಹ್ಯಾಕ್ ಮಾಡುವ ತಂತ್ರಗಳನ್ನು ತಿಳಿಯಲು 100 ಪರಿಣಿತ ಎಲೈಟ್ ಕಾರ್ಪ್ಸ್ ತಂಡ ಸ್ಥಾಪಿಸುವುದರೊಂದಿಗೆ ಕಂಪ್ಯೂಟರ್ ಹ್ಯಾಕಿಂಗ್ ತಂತ್ರ ವೇಗ ಪಡೆಯಿತು. ಆ ನಂತರ 2003 ರಲ್ಲಿ ಚೀನಿ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರೀಯ ಸಮಿತಿ ಮತ್ತು ಸೇನಾ ಆಯೋಗವು ಮನೋವೈಜ್ಞಾನಿಕ ಯುದ್ಧ, ಮಾಧ್ಯಮಗಳ ದುರ್ಬಳಕೆ ಹಾಗೂ ಕಾನೂನುಬದ್ಧ ರೀತಿಯಲ್ಲಿ ಮೋಸ, ವಂಚನೆ ಮಾಡುವಂತಹ ತ್ರಿವಿಧ ರಣನೀತಿಗೆ ಅನುಮೋದನೆ ನೀಡಿತು. ಇವುಗಳಲ್ಲಿ ಸೈಬರ್ ಯುದ್ಧ ಎಲ್ಲಕ್ಕಿಂತ ಹೆಚ್ಚು ಅಪಾಯಕಾರಿಯಾಗಿದ್ದು, ಚೀನಾ ಮಾದರಿಯ ಮೇಲೆ ಹೆಚ್ಚು ವಿಶ್ವಾಸ ಹೊಂದಿದೆ. ಇದಕ್ಕೆ ಅನೇಕ ಕಾರಣಗಳಿವೆ. ಸೈಬರ್ ಆಕ್ರಮಣಗಳ ಬಗ್ಗೆ ಸಾಕ್ಷ್ಯ ಸಂಗ್ರಹ ಅತ್ಯಂತ ಕಠಿಣವಾಗಿದೆ. ಕೆಲವೊಮ್ಮೆ ಸೈಬರ್ ಆಕ್ರಮಣಗಳ ಪತ್ತೆಗೆ ಅನೇಕ ತಿಂಗಳುಗಳು ಬೇಕಾಗುತ್ತವೆ. ಪತ್ತೆಯಾದರೂ ಅದರ ಮೂಲ ಎಲ್ಲಿ, ಯಾರು, ಎಲ್ಲಿಂದ, ಯಾವಾಗ, ಯಾವ ಕಂಪ್ಯೂಟರ್‌ನಿಂದ ಮಾಡಿದ್ದೆಂದು ತಿಳಿಯುವುದು ಕಠಿಣವಾಗಿದೆ. ಚೀನೀಯರು ಈ ವಿಷಯದಲ್ಲಿ ರಹಸ್ಯಗಳನ್ನು ರಕ್ಷಿಸುವುದರಲ್ಲಿ ಪರಿಣಿತರಾಗಿದ್ದಾರೆ. ಹೀಗಾಗಿ ಚೀನೀಯರು ಯಾವುದೇ ಹಿಂಜರಿಕೆ ಇಲ್ಲದೇ ಯುದ್ಧ ನೀತಿಯ ಭಾಗವಾಗಿ ಇದನ್ನು ಬಳಸುತ್ತಿದ್ದಾರೆ. ಜಗತ್ತಿನ ಹೆಚ್ಚಿನೆಲ್ಲ ಪ್ರಜಾಸತ್ತಾತ್ಮಕ ದೇಶಗಳು ಚೀನಾ ತಮ್ಮ ದೇಶದ ವ್ಯವಸ್ಥೆಗಳನ್ನು ಸ್ಥಗಿತಗೊಳಿಸಬಹುದೆಂಬ ಭೀತಿಯಲ್ಲಿವೆ. ಚೀನಾ ಹ್ಯಾಕಿಂಗ್‌ಗಾಗಿಯೇ ಜನಸಾಮಾನ್ಯರ ಗುಂಪುಗಳನ್ನು ರಚಿಸಿದ್ದು, ಹ್ಯಾಕಿಂಗ್ ಮಾಡಿರುವುದು ಬಹಿರಂಗಗೊಂಡ ಸಂದರ್ಭದಲ್ಲೆಲ್ಲ, ಈ ಗುಂಪುಗಳಿಗೂ ಚೀನಾ ಸರಕಾರಕ್ಕೂ ಯಾವುದೇ ಸಂಬಂಧವಿಲ್ಲವೆಂಬ ಹೇಳಿಕೆ ನೀಡಿ ಬಚಾವಾಗುತ್ತದೆ. ಎಲ್ಲಕ್ಕಿಂತ ಪ್ರಮುಖವಾಗಿ ಸೈಬರ್ ಆಕ್ರಮಣಗಳಲ್ಲಿ ನಿರಾಕರಣೆಗೆ ಅವಕಾಶವಿದೆ. ಕಪಟ, ಮೋಸ, ರಹಸ್ಯ ಕಾರ್ಯಾಚರಣೆ, ಧೂರ್ತತೆ ಹಾಗೂ ನೇರ ಯುದ್ಧದಿಂದ ತಪ್ಪಿಸಿಕೊಳ್ಳಲು ಚೀನಿ ಯುದ್ಧದ ಪ್ರಮುಖ ಅಸ್ತ್ರಗಳಾಗಿವೆ.

ಚೀನಾ ಸರಕಾರವು ಸೈಬರ್ ಸುರಕ್ಷೆ ಹಾಗೂ ಇತರ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಂ.ಗಳನ್ನು ಪೀಪಲ್ಸ್ ಲಿಬರೇಷನ್ ಆರ್ಮಿ (**PLA**) ಸೇನಾ ತುಕಡಿಗಳೊಂದಿಗೆ ಏಕೀಕರಣಗೊಳಿಸಿ ಒಂದು ಸೈಬರ್ ಬೆಟಾಲಿಯನ್ ರಚಿಸಿದೆ. ಕೆಲವು ವರ್ಷಗಳ ಹಿಂದೆ ದೊರೆತ ಮಾಹಿತಿಯಂತೆ ಚೆಂಗ್ಡು ಪ್ರದೇಶದಲ್ಲಿ ಚೀನಾದ ಐವತ್ತು ಸಾವಿರದಷ್ಟು ಸೈಬರ್ ವಿಶ್ಲೇಷಕ ಪರಿಣಿತರಿದ್ದಾರೆ. ಭಾರತದ ಸೈಬರ್ ಸುರಕ್ಷೆಗಳ ಮಾಹಿತಿ ಸಂಗ್ರಹಿಸಿ ಭಾರತದ ವ್ಯವಸ್ಥೆಗಳಲ್ಲಿ ನುಸುಳುವ ಉಪಾಯಗಳನ್ನು ಹುಡುಕುವುದು ಇವರ ಸಿಂಗಲ್ ಅಜೆಂಡಾ ಕೆಲಸವಾಗಿದೆ.

ಚೀನಾದ ಮೇಲೆ ಪ್ರತ್ಯಾಕ್ರಮಣದ ಅವಶ್ಯಕತೆ: ನಿಶ್ಚಿತವಾಗಿ ಪರಿಸ್ಥಿತಿ ಸೂಕ್ಷ್ಮ ಮತ್ತು ಅಪಾಯಕಾರಿಯಾಗಿದೆ. ಸೈಬರ್ ಸಮರದಲ್ಲಿ ಚೀನಾ ಎದುರು ಯಾವುದೇ ದೇಶ ಮಂಡಿಯೂರಿ ನಿಲ್ಲುವಂತಹ ಪರಿಸ್ಥಿತಿ ಇದೆ. ಪ್ರತಿಯೊಂದು ದೇಶ ಸೈಬರ್ ಯುದ್ಧದಿಂದ ತನ್ನನ್ನು ರಕ್ಷಿಸಿಕೊಳ್ಳುವ ತಯಾರಿಯಲ್ಲಿದೆ. ಚೀನಾ ತನ್ನ ಶತ್ರು ದೇಶಗಳಲ್ಲಿರುವ ಬೃಹತ್ ಕಂಪನಿಗಳ ಕಂಪ್ಯೂಟರ್ ವ್ಯವಸ್ಥೆಯಲ್ಲಿ ನುಸುಳಿ ಅಮೂಲ್ಯ ತಂತ್ರಾಂಶಗಳನ್ನು ಕದಿಯುವ ಸಾಧ್ಯತೆಗಳು ಅಧಿಕವಾಗುತ್ತಿವೆ.

ಬೌದ್ಧಿಕ ಸಂಪತ್ತಿನ ಕಳ್ಳತನದಲ್ಲಿ ಚೀನಾ ವಿಶ್ವದಲ್ಲಿಂದು ಮುಂಚೂಣಿಯಲ್ಲಿದೆ ಭಾರತದಲ್ಲಿ ಕೊರೊನಾ ಲಸಿಕೆ ತಯಾರಿಸಿದ ಕಂಪನಿಗಳ ಸಹಿತ ಹೆಚ್ಚಿನ ಫಾರ್ಮಾ ಕಂಪನಿಗಳ ಮೇಲೆ ನಿರಂತರವಾಗಿ ಚೀನಾ ಸೈಬರ್ ಹಲ್ಲೆ ಮುಂದುವರಿಸಿದೆ. ಗಡಿಯಲ್ಲಿ ಉದ್ವಿಗ್ನತೆ ಸಂದರ್ಭದಲ್ಲಿ ಐದು ದಿನಗಳ ಕಾಲ ಭಾರತದ ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್ ವ್ಯವಸ್ಥೆಗಳ ಮೇಲೆ ಚೀನಾದ ಸೈಬರ್ ಹಲ್ಲೆ ಭಾರೀ ಪ್ರಮಾಣದಲ್ಲಿ ವೃದ್ಧಿಯಾಗಿತ್ತು. ಚೀನೀ ಹ್ಯಾಕರ್‌ಗಳು ಭಾರತದ ಕಂಪ್ಯೂಟರ್‌ಗಳಲ್ಲಿ ವೈರಸ್ ಕಳಿಸಲು 40 ಸಾವಿರಕ್ಕೂ ಹೆಚ್ಚು ಸೈಬರ್ ಹಲ್ಲೆ ಮಾಡಿದ್ದರು. ಭಾರತದ ಪವರ್ ಗ್ರಿಡ್‌ಗಳು ಹಾಗೂ ಇತರ ವ್ಯವಸ್ಥೆಗಳು ಸೈಬರ್ ಹಲ್ಲೆಗೆ ಗುರಿಯಾಗಿದ್ದವು. ಚೀನಾದ ಸೈಬರ್ ಹಲ್ಲೆ ತಡೆಯಲು ಪ್ರಬಲ ಸೈಬರ್ ಪ್ರತ್ಯಾಕ್ರಮಣದ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ನಾವು ದೇಶದ ಸೈಬರ್ ವ್ಯವಸ್ಥೆಯನ್ನು ಚೀನಾಕ್ಕಿಂತ ಬಲಿಷ್ಠಗೊಳಿಸಬೇಕು. ಭಾರತೀಯ ಪರಿಣಿತರಿಗೆ ಇದು ಅಸಾಧ್ಯವೇನಲ್ಲ. ಆದರೆ ಚೀನಿ ಮಾಹಿತಿಗಳು ಮ್ಯಾಂಡರಿನ್ ಭಾಷೆಯಲ್ಲಿರುವುದು ಸಮಸ್ಯೆಯಾಗಿದೆ. ಭಾರತದಲ್ಲಿ ಮ್ಯಾಂಡರಿನ್ ಭಾಷೆ ಕಲಿಸುವ ವ್ಯವಸ್ಥೆ ಅಲ್ಪ ಪ್ರಮಾಣದಲ್ಲಿದೆ. ದೇಶದಲ್ಲಿ ಭಾಷೆ ಕಲಿಸುವ ಎರಡು ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಈ ಭಾಷಾ ವಿಭಾಗದಲ್ಲಿ ಕೇವಲ ಎಡಪಂಥೀಯರೇ ತುಂಬಿದ್ದಾರೆ. ಎಡಪಂಥೀಯರು ತಿಳಿದಿರುವಂತೆ ಇವರ ದೇಹ ಭಾರತದಲ್ಲಿದ್ದರೆ ಆತ್ಮ ಚೀನಾದಲ್ಲಿರುತ್ತದೆ. ಇವರು ಚೀನಾದಲ್ಲಿ ಮಳೆ ಬಂದಾಗ ಮಾತ್ರ ಭಾರತದಲ್ಲಿ ಕೊಡೆ ಹಿಡಿಯುತ್ತಾರೆ ಎಂಬ ವ್ಯಂಗ್ಯೋಕ್ತಿಯೂ ಚಾಲ್ತಿಯಲ್ಲಿದೆ.

ಹಲಸು
ಆರೋಗ್ಯದ ಸೊಗಸು



ಭಾರತದಲ್ಲಿ ಹಣ್ಣುಗಳ ರಾಜ ಮಾವಿನ ಹಣ್ಣು ಎಂದರೆ, ಹಣ್ಣುಗಳ ಮಹಾರಾಜ, ಬಡವರ ಹಣ್ಣು, ಬಡವರ ಕಲ್ಪವೃಕ್ಷ ಎಂದೆಲ್ಲ ಕರೆಯಲ್ಪಡುವ ಹಣ್ಣು 'ಹಲಸು' ಎಂದರೆ ತಪ್ಪಾಗದು. ಬಾಂಗ್ಲಾದೇಶದ ರಾಷ್ಟ್ರೀಯ ಫಲ ಹಲಸು. ಲೆಕ್ಕವಿಲ್ಲದಷ್ಟು ರೀತಿಯ ತಿಂಡಿ, ತಿನಿಸು, ದೋಸೆ, ಹಪ್ಪಳ, ಇಡ್ಲಿ, ಮುಳಕ, ಐಸ್‌ಕ್ರೀಂ, ಹಲಸಿನ ಕಾಯಿಯ ಸಾಂಬಾರ್, ಬೀಜದ ಸಾಂಬಾರ್, ಅಬ್ಬಾ ಒಂದೇ ಎರಡೇ ಬಾಯಲ್ಲಿ ನೀರೂರಿಸುವ ಖಾದ್ಯಗಳು ? ಮರದ ಕಟ್ಟಿಗೆ ಹೋಮ ಹವನಾದಿಗಳಲ್ಲಿ ಶ್ರೇಷ್ಠ ಮನೆಯ ಪೀಠೋಪಕರಣಗಳು, ದೇವಸ್ಥಾನದ ಬಾಗಿಲು ಎಲ್ಲೆಲ್ಲಿಯೂ ಹಲಸಿನ ಮರದ ಉಪಯೋಗವನ್ನು ಎಲ್ಲರೂ ಬಲ್ಲರು. ಹೀಗೆ ಹಲಸಿನ ಹಣ್ಣು ಹಲಸಿನ ಕಾಯಿ ಬೀಜ, ಆಹಾರವಾಗಿ ಉಪಯೋಗಿಸಲ್ಪಟ್ಟರೆ, ಮರದ ತೊಗಟೆ, ಎಲೆ, ಬೇರು ಎಲ್ಲವೂ ಔಷಧಿಯಾಗಿ ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ.

ಪನಸಂ ಶೀತಲಂ ಪಕ್ವಂ ಸ್ನಿಗ್ಧಂ ಪಿತ್ತ ಅನಿಲಾಪಹಂ ।
ತರ್ಪಣಂ ಬೃಂಹಣಂ ಸ್ವಾದು ಮಾಂಸಲಾ
ಶ್ಲೇಷ್ಮಲಂ ಭೃಶಮ್ ॥
ಬಲ್ಯಂ ಶುಕ್ರಪ್ರದಂ ಹಂತಿ ರಕ್ತಪಿತ್ತ ಕ್ಷತ ವ್ರಣಾನ್ ।

ಹೀಗೆ ಆಯುರ್ವೇದೋಕ್ತಿ ಹಲಸಿನ ಔಷಧೀಯ ಗುಣಗಳ ವರ್ಣನೆಯಿದೆ. ಅಂದರೆ– ನಮ್ಮ ಶರೀರಕ್ಕೆ ಬೇಕಾದ ಎಲ್ಲ ಪೋಷಕಾಂಶಗಳನ್ನು ಹಲಸು ಹೊಂದಿದೆ ವಿಟಮಿನ್ ಎ, ಸಿ, ಪೊಟ್ಯಾಷಿಯಂ, ಕ್ಯಾಲ್ಸಿಯಂ, ಫೈಬರ್ ಎಲ್ಲಾ ಅಂಶಗಳನ್ನೂ ಹೊಂದಿದೆ.

ಬಲ್ಯ, ಬೃಂಹಣೀಯ, ಮಾಂಸಖಂಡಗಳಿಗೆ ಶಕ್ತಿ ನೀಡುತ್ತದೆ. ಇದರಲ್ಲಿರುವ ಪೊಟ್ಯಾಷಿಯಂ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ ವಿಟಮಿನ್ 'ಸಿ' ಹೊಂದಿರುವುದರಿಂದ ವೈರಸ್ ಬ್ಯಾಕ್ಟೀರಿಯಾ ಸೋಂಕಿನಿಂದ ರಕ್ಷಿಸುತ್ತದೆ. ಬಿಳಿರಕ್ತ ಕೋಶಗಳ ರಚನೆಯನ್ನು ಬೆಂಬಲಿಸುತ್ತ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಲಿಗಾನ್ಸ್ (ligans), ಐಸೋಫ್ಲೇವನ್ಸ್ (isoflavans) ಸಪೋನಿನ್ಸ್ (Saponins) ನಂತಹ ಫೈಟೋ ನ್ಯೂಟ್ರಿಯೆಂಟ್ಸ್ ಅನ್ನು ದೇಹಕ್ಕೆ ಪೂರೈಸುವುದರಿಂದ ಕ್ಯಾನ್ಸರ್ ವಿರುದ್ಧ ಮತ್ತು ಮುಪ್ಪಿನ ಲಕ್ಷಣಗಳನ್ನು ವರ್ಧಿಸುವುದರ ವಿರುದ್ಧ ಹೋರಾಡುತ್ತದೆ. ಜೀರ್ಣಕ್ರಿಯೆಗೆ ಸಹಕಾರಿಯಾದ ಅತ್ಯಧಿಕ ನಾರಿನ ಅಂಶವು (ಫೈಬರ್) ಮೃದುವಾದ ಕರುಳಿನ ಚಲನೆಗೆ ಸಹಕಾರಿಯಾಗಿದ್ದು, ಅಲ್ಸರ್, ಮಲಬದ್ಧತೆಯಂತಹ ತೊಂದರೆಗಳನ್ನು ನಿವಾರಿಸುತ್ತದೆ. ವಿಟಮಿನ್ 'ಎ' ಕಣ್ಣಿನ ತೊಂದರೆಗಳು, ಆರೋಗ್ಯಕರ ತ್ವಚೆಗೆ ನರ ದೌರ್ಬಲ್ಯಕ್ಕೆ ಉತ್ತಮ.

ಹಲಸಿನ ಮರದ ಚಕ್ಕೆ ಕಷಾಯ, ಬಾಯಿ ಹುಣ್ಣು ಅತಿಸಾರ, ಭೇದಿಯಲ್ಲಿ ಉಪಯುಕ್ತ. ಬೇರನ್ನು ಕುದಿಸಿದ ನೀರನ್ನು ನಿಯಮಿತವಾಗಿ ಸೇವಿಸುವುದರಿಂದ ಅಸ್ತಮಾ, ಅತಿಸಾರ ನಿವಾರಣೆಯಾಗುತ್ತದೆ. ವಾತರೋಗಗಳಾದ ಪಾರ್ಶ್ವ ವಾತ, ಆರ್ದಿಕ ವಾತದಲ್ಲಿ (facial palsy) 'ಪನಸ ಪತ್ರ ಸ್ವೇದ' ಎಂಬ ಆಯುರ್ವೇದ ಚಿಕಿತ್ಸೆಯು ಬಲು ಉಪಯುಕ್ತ. ಇಷ್ಟೆಲ್ಲಾ ಹಣ್ಣು, ತೊಗಟೆ, ಬೇರು, ಎಲೆಯ ಉಪಯೋಗವಾದರೆ, ಹಲಸಿನ ಕಾಯಿ ಕಡಿಮೆ ಗ್ಲೈಸೆಮಿಕ್ ಇಂಡೆಕ್ಸ್ ಮತ್ತು ಅಧಿಕ ನಾರಿನಂಶ ಹೊಂದಿರುವುದರಿಂದ ಟೈಪ್–2 ಡಯಾಬಿಟಿಸ್, ಬೊಜ್ಜು, ಕೊಲೆಸ್ಟರಾಲ್ ತೊಂದರೆಗಳಲ್ಲಿ ಸಹಾ ಉತ್ತಮ ಆಹಾರವೆಂದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಹಲಸಿನ ಹಣ್ಣಿನ ಮತ್ತು ಬೀಜದ ಹೋಳಿಗೆ, ಹಲಸಿನ ಬೀಜದ ಜಾಮೂನು, ಗುಜ್ಜೆಯ ಮಂಚೂರಿ, ಐಸ್‌ಕ್ರೀಂ, ಬೀಜದ ಬರ್ಫಿ, ಹಣ್ಣಿನ ಬನ್ಸ್, ಪೋಡಿ(ಬಜ್ಜಿ), ಹಲ್ವ, ಚಿಪ್ಸ್, ದೋಸೆ, ಇಡ್ಲಿ ಹೀಗೆ ಒಂದೇ... ಎರಡೇ.... ಹಲಸಿನ ಖಾದ್ಯಗಳು ? ಹಲಸಿನಿಂದ ಮಾಡಬಹುದಾದಷ್ಟು ಆಹಾರ ವೈವಿಧ್ಯ ಜಗತ್ತಿನಲ್ಲಿ ಬೇರೆ ಇಲ್ಲ, ಅಲ್ಲವೇ? ಈ ಬೇಸಿಗೆಯಲ್ಲಿ ಮಳೆಗಾಲದವರೆಗೆ ವಿವಿಧ ತಳಿಗಳ ವೈವಿಧ್ಯಮಯ ರುಚಿಯ ಹಲಸನ್ನು ವಿವಿಧ ಖಾದ್ಯ ರೂಪದಲ್ಲಿ ಸವಿದು ಆರೋಗ್ಯ ಗಳಿಸೋಣ ಅಲ್ಲವೇ ?



ಡಾ. ಸುಧಾ. ಎಂ.ಎನ್.
ಮೈಸೂರು.
ದೂ: 9448071933
e-mail: drsudhamn@yahoo.com



ಮೇ 8ರಂದು ಮೈಸೂರಿಗೆ ಶೃಂಗೇರಿ ಪೀಠಾಧಿಪತಿಗಳಾದ

ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಭೇಟಿ

ಮೈಸೂರು, ಮೇ 5– ಶೃಂಗೇರಿ ಪೀಠದ 37ನೇ ಪೀಠಾಧಿಪತಿಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಮೈಸೂರಿಗೆ ಆಗಮಿಸಲಿದ್ದಾರೆ. ಮೇ 8ರಿಂದ 11ರವರೆಗೆ ಮೈಸೂರಿನ ಶಂಕರ ಮಠದಲ್ಲಿ ವಾಸ್ತವ್ಯ ಹೂಡಿ, ಶ್ರೀ ಚಂದ್ರಮೌಳೇಶ್ವರ ಪೂಜೆ, ಭಿಕ್ಷಾವಂದನೆ, ಪಾದಪೂಜೆ, ಆಶೀರ್ವಚನ, ಗುರುವಂದನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.



ಭಾನುವಾರ ಮೇ 8ರಂದು ಸಂಜೆ 4 ಗಂಟೆಗೆ ಮೈಸೂರಿಗೆ ಆಗಮಿಸಲಿರುವ ಶ್ರೀಗಳು ಮಹಾರಾಜ ಕಾಲೇಜು ಮೈದಾನದಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಅಲಂಕೃತ ತೆರೆದ ಜೀಪಿನಲ್ಲಿ ಶೋಭಾಯಾತ್ರೆಯೊಂದಿಗೆ ಸ್ವಾಗತ ಸಮಿತಿ ಸ್ವಾಮೀಜಿಯವರನ್ನು ಶ್ರೀ ಶಂಕರ ಮಠಕ್ಕೆ ಬರಮಾಡಿಕೊಳ್ಳಲಿದೆ.

ಮೇ 9ರಂದು ಬೆಳಗ್ಗೆ ಶಂಕರ ಮಠದಲ್ಲಿ ಶ್ರೀ ಶಾರದಾಂಬ ಹಾಗೂ ಮಹಾಗಣಪತಿಗೆ ವಿಶೇಷ ಪೂಜೆ, ಹವನದೊಂದಿಗೆ ಬೆಳ್ಳಿ ಕವಚ ಸಮರ್ಪಣೆ ಮಾಡಲಿದ್ದಾರೆ. ಶ್ರೀಗಳು ಮಂಗಳವಾರ ಮೇ 10ರಂದು ಶಂಕರ ಮಠದಲ್ಲಿ ಬೆಳಿಗ್ಗೆ ಪಾದಪೂಜೆ, ಭಿಕ್ಷಾವಂದನೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ವಿಶೇಷವಾಗಿ ಸಂಜೆ 5 ಗಂಟೆಗೆ ಶಂಕರ ಮಠದ ವಿದ್ಯಾಶಂಕರ ಕಲ್ಯಾಣಮಂಟಪದಲ್ಲಿ ಗುರುವಂದನಾ ಕಾರ್ಯಕ್ರಮ ಜರುಗಲಿದೆ. ಅಂದಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅರಮನೆ ರಾಜವಂಶಸ್ಥರಾದ ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಮೈಸೂರು ಮಹಾನಗರಪಾಲಿಕೆ ಮಹಾಪೌರರಾದ ಶ್ರೀಮತಿ ಸುನಂದಾ ಪಾಲನೇತ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಕೃಷ್ಣರಾಜ ಕ್ಷೇತ್ರದ ಶಾಸಕರು ಹಾಗೂ ಶ್ರೀ ಶೃಂಗೇರಿ ಜಗದ್ಗುರು ಸ್ವಾಗತ ಸಮಿತಿಯ ಅಧ್ಯಕ್ಷ ಎಸ್.ಎ.ರಾಮದಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಶೃಂಗೇರಿ ಮಠದ ಆಡಳಿತಾಧಿಕಾರಿ ಪದ್ಮಶ್ರೀ ಡಾ.ವಿ.ಆರ್.ಗೌರಿಶಂಕರ್, ಮೈಸೂರಿನ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಹೆಚ್.ರಾಮಚಂದ್ರ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಸ್ವಾಮೀಜಿಯವರ ಕಿರು ಪರಿಚಯ: ಜಗದ್ಗುರು ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮೀಜಿಯವರು 1993, ಜುಲೈ 24ರಂದು ಆಂಧ್ರಪ್ರದೇಶದ ತಿರುಪತಿಯಲ್ಲಿ ಜನಿಸಿದರು. ಅವಧಾನಿ ಶ್ರೀ ಕುಪ್ಪ ಶಿವಸುಬ್ರಹ್ಮಣ್ಯಂ ಹಾಗೂ ಶ್ರೀಮತಿ ಸೀತಾ ನಾಗಲಕ್ಷ್ಮಿ ಅವರ ಎರಡನೇ ಪುತ್ರರಾಗಿ ಜನಿಸಿದ ಇವರು ಶೃಂಗೇರಿ ಶಾರದಾ ಪೀಠದ 37ನೇ ಉತ್ತರಾಧಿಕಾರಿಯಾಗಿ ಜನವರಿ 23, 2015ರಂದು ನೇಮಕಗೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶದ ಜನ ಒಂದಾಗಿ ಬಾಳಲು ಬಿಜೆಪಿಯವರು ಬಿಡುತ್ತಿಲ್ಲ...

● ಮಾಜಿ ಸಚಿವ, ಚಿಂತಕ ಪ್ರೊ. ಬಿ.ಕೆ.ಚಂದ್ರಶೇಖರ್ ವಿಷಾದ ● ಸರ್ಕಾರದ ಮೇಲೆ ಸಂಘ ಪರಿವಾರದ ಸವಾರಿ ಬಗ್ಗೆ ಬೇಸರ ● ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರಿಸುವ ಪ್ರಸ್ತಾಪ: ಸೌಹಾರ್ದ ಚರ್ಚೆಗೆ ಆಹ್ವಾನ

ಮೈಸೂರು, ಮೇ 5(ಆರ್‌ಕೆ)–ಶಾಲಾ ಪಠ್ಯ ಪುಸ್ತಕದಲ್ಲಿ ಭಗವದ್ಗೀತೆ ಸೇರಿಸುವ ಪ್ರಸ್ತಾಪ ಸಂಬಂಧ ಸೌಹಾರ್ದ, ಸ್ನೇಹಪರ ಚರ್ಚೆಗೆ ಮಾಜಿ ಸಚಿವರೂ ಆದ ಕಾಂಗ್ರೆಸ್ ಹಿರಿಯ ಮುಖಂಡ ಪ್ರೊ. ಬಿ.ಕೆ.ಚಂದ್ರಶೇಖರ ಆಹ್ವಾನ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಕೇವಲ ಹಿಂದುತ್ವ, ಹಿಂದೂ ಧರ್ಮವನ್ನೇ ತಮ್ಮ ಅಜೆಂಡಾವಾಗಿರಿಸಿಕೊಂಡಿರುವ ಬಿಜೆಪಿಯವರು ಇದೀಗ ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರವನ್ನು ಅದರಲ್ಲಿ ಸೇರಿಸಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟದ ಪಠ್ಯಕ್ರಮದಲ್ಲಿ ಭಗವದ್ಗೀತೆಯನ್ನು ಪರಿಚಯಿಸಿ ಯುವ ಪೀಳಿಗೆಯನ್ನು ಒಂದು ಧರ್ಮಕ್ಕೆ ಸಂಬಂಧಿಸಿದಂತೆ ಪ್ರೇರೇಪಿಸುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಿರುವುದರಿಂದ ಸೌಹಾರ್ದ ಚರ್ಚೆಗೆ ಬನ್ನಿ, ಸಮಾಜದ ಎಲ್ಲಾ ವರ್ಗದ ಸಮಾನಮನಸ್ಕರನ್ನು ಆಹ್ವಾನಿಸಿ, ಅಲ್ಲಿ ಈ ವಿಷಯದ ಬಗ್ಗೆ ಸ್ಥೂಲವಾಗಿ ಸಮಾಲೋಚನೆ ಮಾಡೋಣ ಎಂದು ಪ್ರೊ. ಬಿ.ಕೆ.ಚಂದ್ರಶೇಖರ್ ನುಡಿದರು.

ಸಮಾಜಕ್ಕೆ ಉತ್ತಮ ಸಂದೇಶ ಸಾರುವಂತಹ ಹಲವು ಗ್ರಂಥಗಳು ನಮ್ಮಲ್ಲಿವೆ. ವೈಚಾರಿಕ, ಧಾರ್ಮಿಕ, ಆಧ್ಯಾತ್ಮಿಕ ವಿಚಾರಗಳಿರುವ ನೈತಿಕತೆ, ಬದ್ಧತೆ, ಸಾದರಪಡಿಸುವ ಮಹನೀಯರು ರಚಿಸಿರುವ ಸಾಹಿತ್ಯಗಳನ್ನು ಇಂದಿನ ಮಕ್ಕಳಿಗೆ ಪರಿಚಯಿಸಬಹುದಾಗಿದೆ.


ಪತ್ರಕರ್ತರೊಂದಿಗೆ ಮಾತನಾಡಿದ ಪ್ರೊ. ಬಿ.ಕೆ.ಚಂದ್ರಶೇಖರ್

ಶೈಕ್ಷಣಿಕ ಚಿಂತನೆ ಇರುವ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ವಿಚಾರ, ಜ್ಞಾನ ಧಾರೆಯನ್ನು ಪಠ್ಯದಲ್ಲಿ ಅಳವಡಿಸಲು ಸೂಕ್ತವೆನಿಸಿರುವಾಗ ಕೇವಲ ಒಂದು ಧರ್ಮಕ್ಕೆ ಸೀಮಿತವಾದ ವಿಚಾರವನ್ನು ಮಕ್ಕಳಿಗೆ ಹೇರಲು ಮುಂದಾಗಿರುವುದು ಆತಂಕಕಾರಿ ವಿಷಯ ಎಂದರು.

ರಾಷ್ಟ್ರಕವಿ ಕುವೆಂಪು ಅವರ ಆಲೋಚನೆಯು ಇಂದಿಗೂ ಪ್ರಸ್ತುತವೆನಿಸುತ್ತದೆ. ಅದೇ ರೀತಿ ಹಲವು ಸಾಹಿತಿ, ಕವಿಗಳು, ಚಿಂತಕರು, ಉತ್ತಮವಾದ ಸಾಹಿತ್ಯವನ್ನು ಕೊಟ್ಟಿದ್ದಾರೆ. ಅವುಗಳಿಂದ ಸಮಾಜದಲ್ಲಿ ವೈಚಾರಿಕ ಜ್ಞಾನ ವೃದ್ಧಿಯಾಗುತ್ತದೆ ಎಂದ ಅವರು, ನಾನು ಸಾರಾಸಗಟಾಗಿ ಭಗವದ್ಗೀತೆಯನ್ನು ತಳ್ಳಿ ಹಾಕುತ್ತಿಲ್ಲ. ಆದರೆ, ಶಾಲಾ ಪಠ್ಯಕ್ರಮದಲ್ಲಿ ಸೇರಿಸುವಾಗ ವಿಸ್ತೃತ ಚರ್ಚೆಯಾಗಬೇಕು. ಅದಕ್ಕಾಗಿಯೇ ಸೌಹಾರ್ದ, ಸ್ನೇಹಪರ ಸಮಾಲೋಚನೆಗೆ (Friendly Discussion) ಬನ್ನಿ ಎಂದು ಆಹ್ವಾನಿಸಿದರು.

ಈ ವಿಚಾರದಲ್ಲಿ ನೀವೇ ಕರೆದರೂ ಸಾರ್ವಜನಿಕವಾಗಿ ನಾನು ಚರ್ಚೆಗೆ ಬರಲು ಸಿದ್ಧನಿದ್ದೇನೆ ಇದು ನನ್ನ ಸವಾಲು. ಪಂಥಾಹ್ವಾನ ಎಂದು ಭಾವಿಸುವುದೂ ಬೇಡ, ವಿನಮ್ರ ಆಹ್ವಾನವಷ್ಟೇ. ಅಲ್ಲಿ ಸಮಾಲೋಚನೆ ಮಾಡೋಣ. ಸಂವಾದ ನಡೆಸಿದಾಗ ವಿವಿಧ ಅನುಭವದ ಮಜಲುಗಳು ಬರುತ್ತವೆ. ಅವೆಲ್ಲವನ್ನೂ ಕ್ರೋಢೀಕರಿಸಿ ಸಮಾಜಕ್ಕೆ ಅನುಕೂಲವಾಗುವಂತಹ ನಿರ್ಧಾರಕ್ಕೆ ಬರಬಹುದೇ ಹೊರತು, ಮನಸ್ಸಲ್ಲಿ ಏನನ್ನೋ ಇರಿಸಿಕೊಂಡು ಮಕ್ಕಳಿಗೆ ಬಲವಂತವಾಗಿ ಭಗವದ್ಗೀತೆ ಹೇರುವುದು ಬಲು ಅಪಾಯಕಾರಿ ಎಂದು ಪ್ರೊ ಬಿಕೆಸಿ ಆತಂಕ ವ್ಯಕ್ತಪಡಿಸಿದರು.

ಯೂರೋಪ್‌ಗೆ ಹೋಗಿ ಪ್ರಧಾನ ಮಂತ್ರಿಗಳು ಯೂನಿಟಿ ಮತ್ತು ಡೈವರ್ಸಿಟಿ ಬಗ್ಗೆ ಭಾಷಣ ಮಾಡುತ್ತಾರೆ. ಆದರೆ ನಮ್ಮ ದೇಶದ ಜನರನ್ನು ಒಂದಾಗೋಕೆ ಬಿಡುತ್ತಿಲ್ಲ. ಹಿಂದುತ್ವವೇ ಸರ್ವಸ್ವ, ಅದೇ ತಮ್ಮ ಅಜೆಂಡಾ ಎಂಬಂತೆ ಪ್ರತಿಪಾದಿಸುತ್ತಿರುವ ಕೇಂದ್ರದ ಬಿಜೆಪಿ ಸರ್ಕಾರ, ಆರ್‌ಎಸ್‌ಎಸ್ ಭಜರಂಗ ದಳ, ವಿಶ್ವಹಿಂದೂ ಪರಿಷತ್‌ಗಳಂತಹ ಸಂಘ ಪರಿವಾರದ ಮನಸ್ಥಿತಿಯನ್ನು ಜನರ ಮೇಲೆ ಹೇರುತ್ತಿರುವುದು ಸರಿಯಲ್ಲ ಎಂದರು.

ಒಂದು ವೇಳೆ ಬಿಜೆಪಿ ಸುಮ್ಮನಿದ್ದರೂ ಸಂಘ ಪರಿವಾರಗಳು ಬಿಡುವುದಿಲ್ಲ. ಎಲ್ಲೆಲ್ಲಿ ಬಿಜೆಪಿ ಸರ್ಕಾರ ಇದೆಯೋ ಆ ರಾಜ್ಯಗಳಲ್ಲಿ ಹಿಂದುತ್ವದ ಯೋಜನೆಗಳನ್ನು ಅನುಷ್ಠಾನ ಮಾಡಿಸದೇ ಬಿಡುವುದಿಲ್ಲ. ರಾಜ್ಯ ಸರ್ಕಾರಗಳೂ ಕೇಂದ್ರ ಹೇಳಿದ್ದನ್ನು ಚಾಚೂ ತಪ್ಪದೆ ಕೇಳಲೇಬೇಕಾದಂತಹ ಪ್ರಭುತ್ವವನ್ನು ಕೇಂದ್ರ ಸರ್ಕಾರ ಸಾಧಿಸಿದೆ ಎಂದ ಪ್ರೊ, ಬಿಕೆಸಿ, ಬಿಜೆಪಿಯು ಈ ಅಜೆಂಡಾ ಬಿಟ್ಟು ಬೇರೆ ಕೆಲಸ ಮಾಡಲು ಬಿಡುವುದಿಲ್ಲ. ಇಂತಹ ಕೆಟ್ಟ ಹವಾಗುಣ ಈ ದೇಶದಲ್ಲಿ ಯಾವ ಸಂದರ್ಭದಲ್ಲೂ ಕಂಡಿರಲಿಲ್ಲ ಎಂದರು.

ಶಾಲಾ ಸಮವಸ್ತ್ರ ನೆಪದಲ್ಲಿ ಕೋಮು ವಿವಾದ ಸೃಷ್ಟಿಸಿದ ಸರ್ಕಾರ, ಹಿಜಾಬ್ ವಿವಾದ ಎಂದು ಮಾಡಿತು. ಜಾತ್ರೆಗಳು, ಹಬ್ಬಗಳಲ್ಲಿ ಮುಸ್ಲಿಮರು ಅಂಗಡಿ ತೆರೆಯಬಾರದೆಂದು ತಾಕೀತು, ಕಲ್ಲಂಗಡಿ ಹಣ್ಣುಗಳ ರಾಶಿ ನಾಶ ಮಾಡುವುದು, ಗಲಾಟೆಯಾದಾಗ ಭಜರಂಗ ದಳ, ಆರ್‌ಎಸ್‌ಎಸ್, ವಿಹೆಚ್‌ಪಿ ಸಂಘಟನೆಗಳ ವರೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡುವ ಇವರ ಪ್ರವೃತ್ತಿ, ಸರಿಯೇ? ಎಂದು ಪ್ರೊ ಬಿಕೆಸಿ ಪ್ರಶ್ನಿಸಿದರು.

ಅಪಘಾತ ಸಂಬಂಧ ವಾಹನಗಳಿಗೆ ಜಾಗ ಬಿಡುವ ವಿಷಯದಲ್ಲಿ ಜಗಳದಿಂದಾಗಿ ವ್ಯಕ್ತಿಯ ಕೊಲೆಯಾದರೆ ಅದನ್ನು ಕೋಮು ದ್ವೇಷ ಎಂದು ಬಿಂಬಿಸಿದರು. ಕೋಮು ಗಲಭೆಯಲ್ಲ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಅವರೇ ಸ್ಥಳದ ಸಿಸಿ ಟಿವಿ ಕ್ಯಾಮರಾ ಫುಟೇಜ್‌ಗಳ ಸಾಕ್ಷಿ ಸಮೇತ ಹೇಳಿದರು. ಗೃಹ ಸಚಿವರು ಅದನ್ನು ಸುಳ್ಳು ಎಂದರು. ನಿಷ್ಠಾವಂತ ಹಿರಿಯ ಐಪಿಎಸ್ ಅಧಿಕಾರಿಗಳನ್ನು ಕೆಲಸ ಮಾಡಲು ಬಿಡುತ್ತಿಲ್ಲ ಎಂದು ಅವರು ದೂರಿದರು.

ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ವ್ಯಕ್ತಿಯನ್ನು ಮುಖ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸಿದ್ದಾರೆ. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಅವ್ಯವಹಾರ, ಕೆಪಿಎಸ್ಸಿ ಆಯ್ಕೆ ಅಕ್ರಮ. ಹೀಗೆ ಹಲವು ಗೊಂದಲಗಳು ಉಂಟಾದರೂ, ಕೆಲ ಸಚಿವರು ಸಮಸ್ಯೆ ಇತ್ಯರ್ಥಪಡಿಸುವುದನ್ನು ಬಿಟ್ಟು ಸಮರ್ಥಿಸಿಕೊಳ್ಳುತ್ತಿರುವುದು ಆತಂಕಕಾರಿ ಎಂದು ಪ್ರೊ. ಚಂದ್ರಶೇಖರ್, ಇದೇ ವೇಳೆ ಕಳವಳ ವ್ಯಕ್ತಪಡಿಸಿದರು.

ದೇಶದಲ್ಲಿ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ ತೀವ್ರಗೊಳ್ಳುತ್ತಿದೆ. ಕೊರೊನಾ ಪರಿಸ್ಥಿತಿ ನಂತರ ಯುವಕರು ಉದ್ಯೋಗಕ್ಕಾಗಿ ಬೇರೆ ಬೇರೆ ದೇಶಗಳಿಗೆ ಪಲಾಯನಗೈಯ್ಯುತ್ತಿರುವಾಗ ಪ್ರಧಾನಿ ಹಾಗೂ ಕೇಂದ್ರದ ಗೃಹ ಸಚಿವರು ಮಾತ್ರ ಜಾಣತನದ ನಡವಳಿಕೆ ಪ್ರದರ್ಶಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ ಹಾಗೂ ಕಾಂಗ್ರೆಸ್ ಜಿಲ್ಲಾ ಮಾಧ್ಯಮ ವಕ್ತಾರ ಮಹೇಶ ಅವರು ಈ ಸಂದರ್ಭ ಉಪಸ್ಥಿತರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್‌ಗೆ ಸನ್ಮಾನ



ಮೈಸೂರು, ಮೇ 5(ಎಂಕೆ)– ಅನ್ವೇಷಣಾ ಸೇವಾ ಟ್ರಸ್ಟ್ ಹಾಗೂ ಅರಸು ಸಮುದಾಯದ ವತಿಯಿಂದ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಶಾಸಕ ಎಲ್.ನಾಗೇಂದ್ರ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಚುಟುಕು ಸಾಹಿತಿ ಎಂಜಿಆರ್ ಅರಸ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಅಮರನಾಥ್ ರಾಜೇ ಅರಸ್, ಹೆಚ್‌ಎಂಟಿ ನಿಂಗರಾಜ ಅರಸ್ ಮತ್ತಿತರರು ಅಭಿನಂದಿಸಿದರು.

ಬಳಿಕ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸದಾ ಉತ್ಸಾಹಿ ಬಿಜೆಪಿ ಕಾರ್ಯಕರ್ತರಾದ ಮೈ.ವಿ.ರವಿಶಂಕರ್ ದಕ್ಷಿಣ ಪದವೀಧರರ ಕ್ಷೇತ್ರ ಚುನಾವಣೆ ಗೆಲ್ಲುವುದು ಖಚಿತ. ಪದವೀಧರರ ಸಮಸ್ಯೆಗಳನ್ನು ಪರಿಹರಿಸಲು ರವಿಶಂಕರ್ ಸೂಕ್ತ ವ್ಯಕ್ತಿಯಾಗಿದ್ದಾರೆ. ಅವರ ಗೆಲುವು ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನುಡಿಯಾಗಲಿದೆ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪರ ಕೆಲಸಗಳು ಮನೆ ಮಾತಾಗಿದ್ದು, ಯುವಕರು ಸಂಪೂರ್ಣ ಬೆಂಬಲ ನೀಡಿದ್ದಾರೆ. ಸುಳ್ಳು ಪ್ರಚಾರದ ಹಿಂದೆ ಬಿದ್ದಿರುವ ಕಾಂಗ್ರೆಸ್ ಮುಕ್ತ ಕರ್ನಾಟಕವಾಗುವುದು ನಿಶ್ಚಿತ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಕನಿಷ್ಠ 60 ಕ್ಷೇತ್ರಗಳಲ್ಲಿ ಗೆಲ್ಲುವುದೇ ಅನುಮಾನವಾಗಿದೆ ಎಂದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, 4 ದಶಕಗಳಿಂದ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರಾಗಿರುವ ಮೈವಿ ರವಿಶಂಕರ್ ಕೆಳ ಹಂತದಿಂದ ಕೆಲಸ ಮಾಡಿ ಬೆಳೆದು ಬಂದಿದ್ದಾರೆ. ಇಂದೂ ಕೂಡ ಸಾಮಾನ್ಯ ಕಾರ್ಯಕರ್ತರಾಗಿರುವ ಅವರು ಸರಳ ವ್ಯಕ್ತಿತ್ವಕ್ಕೆ ಹೆಸರಾಗಿದ್ದು, ವಿಧಾನಪರಿಷತ್‌ಗೆ ಆಯ್ಕೆಯಾಗಬೇಕಾದ ವ್ಯಕ್ತಿಯಾಗಿದ್ದಾರೆ. ಪ್ರಜ್ಞಾವಂತ ಮತದಾರರು ಬಿಜೆಪಿ ಬೆಂಬಲಿಸುತ್ತಿದ್ದು, ಪ್ರತಿಯೊಬ್ಬ ಪದವೀಧರರು ಮೊದಲ ಮತ ನೀಡುವಂತೆ ಮನವಿ ಮಾಡಿದರು.

ಪ್ರಾಮಾಣಿಕ ಪ್ರಯತ್ನ: ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಮಾತನಾಡಿ, ಪದವೀಧರರ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಈಗಾಗಲೇ ಸುಮಾರು 1.30 ಲಕ್ಷಕ್ಕೂ ಹೆಚ್ಚು ಮಂದಿ ಪದವೀಧರರು ನೋಂದಾವಣೆಯಾಗಿದ್ದು, 1.50 ಲಕ್ಷ ದಾಟುವ ನಿರೀಕ್ಷೆಯಿದೆ ಎಂದು ಹೇಳಿದರು.

ನೈಪುಣ್ಯ ಬೇಸಿಗೆ ಬಂಡಿ ಸಮಾರೋಪ

ಅವಕಾಶಗಳ ಸೃಷ್ಟಿ ಮಕ್ಕಳ ಸಾಧನೆಗೆ ಪುಷ್ಟಿ

ಮೈಸೂರು, ಮೇ 5– ಆಧುನಿಕ ತಂತ್ರಜ್ಞಾನ, ವೇಗದ ಜಗತ್ತಿನೊಂದಿಗೆ ನಡೆಯಬೇಕಾದ ಅನಿವಾರ್ಯತೆ ಸೃಷ್ಟಿಸಿದ್ದು ಈ ನಿಟ್ಟಿನಲ್ಲಿ ಭವಿಷ್ಯತ್ತಿನ ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿಯನ್ನು ಉತ್ತೇಜಿಸುವ ಉತ್ತಮ ಅವಕಾಶವನ್ನು ಕಲ್ಪಿಸಿ ಕೊಡುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಶೋಭಾರಾಣಿ ಹೇಳಿದರು.



ಮೈಸೂರಿನ ಆರ್‌ಟಿ ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ 15 ದಿನಗಳ 'ಬೇಸಿಗೆ ಬಂಡಿ' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಒದಗಿಬರುವ ಅವಕಾಶಗಳನ್ನು ಕೀಳರಿಮೆ ತೋರದೆ ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು, ಸವಾಲು ಎದುರಿಸಿ ಗುರಿ ಸಾಧಿಸುವ ಛಲವಂತಿಕೆ ಮೈಗೂಡಿಸಿಕೊಳ್ಳಬೇಕು. ಆಗ ಮಾತ್ರ ನಮ್ಮಲ್ಲಿರುವ ಪ್ರತಿಭೆ ಹಾಗೂ ಸಾಮರ್ಥ್ಯ ಹೊರಹೊಮ್ಮಲು ಸಾಧ್ಯ ಎಂದರು.

ಓದಿಗೂ ಅನುಭವಕ್ಕೂ ಬಹು ವ್ಯತ್ಯಾಸವಿದ್ದು ಅನುಭವ ಅನುಭವಿಸಿಯೇ ಪಡೆಯಬೇಕು. ಈ ನಿಟ್ಟಿನಲ್ಲಿ ನಮ್ಮ ಪದವಿಗಳು ಅರ್ಹತೆಯ ಸಂಕೇತವಾದರೆ, ಆತ್ಮವಿಶ್ವಾಸ ನಮ್ಮ ಗೆಲುವಿನ ಸಂಕೇತವಾಗಿದೆ. ನೈಪುಣ್ಯ ಸ್ಕೂಲ್ ಆರಂಭದ ಹೆಜ್ಜೆಯಲ್ಲೇ ಬೇಸಿಗೆ ಬಂಡಿ ಮುಖೇನ ಉತ್ತಮ ಸಂದೇಶವನ್ನು ಸಮಾಜಕ್ಕೆ ರವಾನಿಸಿದೆ. ಶಿಬಿರದ ಮಕ್ಕಳಲ್ಲಿ ನಮ್ಮ ಸಂಸ್ಕೃತಿಯ ಪರಿಚಯಿಸಿ ಜಾಗೃತಿ ಮೂಡಿಸಲು ಯಶಸ್ವಿಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ರಘು ಮಾತನಾಡಿ, ಶಿಕ್ಷಕ ಹಾಗೂ ಪೋಷಕರ ನಡುವಿನ ಉತ್ತಮ ಸಮನ್ವಯ ಹಾಗೂ ಸಹಕಾರ ಮಕ್ಕಳ ಉಜ್ವಲ ಭವಿಷ್ಯಕ್ಕೆ ಅತ್ಯುತ್ತಮ ಸೇತುವೆಯಾಗಲಿದೆ ಎಂದು ಹೇಳಿದರು.

ಶಿಬಿರಾರ್ಥಿ ವಿದ್ಯಾರ್ಥಿಗಳಿಂದ ಶಿಬಿರದ ಸಮಯದಲ್ಲಿ ಕಲಿತ ಜಾನಪದ ನೃತ್ಯ, ನಾಟಕ, ಸಮೂಹ ಗಾಯನ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೆರೆದಿದ್ದ ಪೋಷಕರು ಹಾಗೂ ಪ್ರೇಕ್ಷಕರಿಂದ ಮೆಚ್ಚುಗೆಗೆ ಪಾತ್ರವಾಯಿತು. ಶಿಬಿರದ ಆಟೋಟಗಳಲ್ಲಿ ಬಹುಮಾನ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಿಸಲಾಯಿತು. ಸಿದ್ದರಾಮೇಶ್ವರ ಟ್ರಸ್ಟ್ ಅಧ್ಯಕ್ಷ ಕೆಂಚಪ್ಪ, ಎಫ್. ಎಮ್. ರೇಡಿಯೋ ಕಾರ್ಯಕ್ರಮ ನಿರೂಪಕ ಅವಿನಾಶ್ ಅವರನ್ನು ಗೌರವಿಸಲಾಯಿತು ಪ್ರಾಂಶುಪಾಲೆ ಶ್ರೀಮತಿ ಶಿಲ್ಪಾ ಪ್ರಶಾಂತ್ ಉಪಸ್ಥಿತರಿದ್ದರು.



ಹಾಡಿನ ಮೂಲಕ ಮನೆ ಮನೆಗೆ ಅಂಬೇಡ್ಕರ್ ವಿಚಾರ ತಲುಪಿಸಿದ ಕಲಾವಿದ ಸಿದ್ಧಾರ್ಥರಿಗೆ 'ಡಾ.ಅಂಬೇಡ್ಕರ್ ಪ್ರಶಸ್ತಿ'

ಮೈಸೂರು, ಮೇ 5– ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇತ್ತೀಚೆಗೆ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೂಲತಃ ಮೈಸೂರಿನ ಅಶೋಕಪುರಂನವರಾಗಿದ್ದು, ಹಾಲಿ ಸಿದ್ದಾರ್ಥ ನಗರದಲ್ಲಿ ವಾಸವಿರುವ ಕಲಾವಿದ ಎಸ್. ಸಿದ್ದಾರ್ಥ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಲೋಕೋಪಯೋಗಿ ಸಚಿವ ಚಂದ್ರಕಾಂತ ಪಾಟೀಲ್, ಶಾಸಕರಾದ ಅರವಿಂದ ಲಿಂಬಾವಳಿ, ರಿಜ್ವಾನ್ ಅರ್ಷದ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಮೈಸೂರು ಅಶೋಕಪುರಂನ ಸಿದ್ದಯ್ಯ ಮತ್ತು ಮರಮ್ಮ ದಂಪತಿ ಪುತ್ರರಾದ ಸಿದ್ದಾರ್ಥ, ಬಾಲ್ಯದ ದಿನಗಳಲ್ಲೇ ಗಾಯನದ ಬಗ್ಗೆ ಆಸಕ್ತಿ ಹೊಂದಿದ್ದು, ಶಾಲಾ ಕಾಲೇಜುಗಳಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನೇ ಪಡೆಯುತ್ತಿದ್ದರು. ಯಾವುದೇ ರೀತಿಯ ತರಬೇತಿ ಇಲ್ಲದಿದ್ದರೂ ತಾನೇ ಆಸಕ್ತಿ ವಹಿಸಿ, ಗೀತೆ ರಚನೆ, ಹಾಡುಗಾರಿಕೆ ಹಾಗೂ ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ಮೊದಲಿಗೆ ಅಶೋಕಪುರಂನ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅಂಬೇಡ್ಕರ್ ಕುರಿತು ತಾವೇ ರಚಿಸಿ, ಹಾಡಿದ ಗೀತೆ ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸ ಪ್ರಸಾದ್, ದಿ.ಬಿ.ರಾಚಯ್ಯ ಮುಂತಾದ ಗಣ್ಯರ ಮನ ಸೆಳೆದಿತ್ತು.



ಹೀಗಾಗಿ ರಾಜ್ಯದ ಎಲ್ಲೇ ಅಂಬೇಡ್ಕರ್ ಕುರಿತ ದೊಡ್ಡ ಮಟ್ಟದ ಕಾರ್ಯಕ್ರಮ ನಡೆದರೂ, ಅಲ್ಲಿ ಸಿದ್ದಾರ್ಥ ಅವರಿಗೆ ಹಾಡಲು ಅವಕಾಶ ನೀಡಲಾಗುತ್ತಿತ್ತು. ಸಿದ್ದಾರ್ಥ ಅವರು, ತಾವೇ ರಚಿಸಿ ರಾಗ ಸಂಯೋಜನೆ ಮಾಡಿ ಹಾಡಿದ 'ಅಂಬೇಡ್ಕರ್' ಧ್ವನಿಸುರಳಿ ಎಲ್ಲರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು. ಇವರು 'ಚಿತ್ರರಂಗ' 'ಮಹಾಚೇತನ' ಮುಂತಾದ ಧ್ವನಿಸುರಳಿಗಳನ್ನು ತಾವೇ ರಚಿಸಿ ಸಂಯೋಜನೆ ಮಾಡಿ ಹಾಡಿದ ಗೀತೆಗಳೊಂದಿಗೆ ಹೊರ ತಂದಿದ್ದಾರೆ.

ಪ್ರಸಿದ್ಧ ಗಾಯಕರಾದ ಗಫೂರ್, ಮೈಸೂರು ಅನಂತಸ್ವಾಮಿ, ಪಿ.ಕಾಳಿಂಗರಾವ್, ದೇವದಾಸ್, ಗುರುರಾಜ್ ಅವರ ಕಾರ್ಯಕ್ರಮಗಳಲ್ಲಿ ಹಾರ್ಮೋನಿಯಂ ನುಡಿಸುವುದರ ಜೊತೆಗೆ ಹಾಡುವುದರ ಮೂಲಕ ಗಮನ ಸೆಳೆದಿದ್ದಾರೆ. ಇವರು ರಚಿಸಿ ರಾಗ ಸಂಯೋಜನೆ ಮಾಡಿದ ಕೆಲವು ಹಾಡುಗಳು ಚಿತ್ರಗೀತೆಗಳಾಗಿ ಪ್ರಸಿದ್ಧಿ ಹೊಂದಿದ್ದವು. ಹಾಡಿನ ಮೂಲಕ ಮನೆ ಮನೆಗೂ ಅಂಬೇಡ್ಕರ್ ಅವರ ವಿಚಾರಗಳನ್ನು ಮುಟ್ಟಿಸಿದ ಸಿದ್ದಾರ್ಥ ಅವರಿಗೆ ಅವರ 82ನೇ ವರ್ಷದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ.

ಬೋಗಾದಿ ಪಪಂ ಮುಖ್ಯಾಧಿಕಾರಿ ಹೆಚ್ಚುವರಿ ಜವಾಬ್ದಾರಿ ಶ್ರೀಧರ್‌ಗೆ

ಮೈಸೂರು, ಮೇ 5(ಎಂಟಿವೈ)– ಕಳೆದ 11 ದಿನಗಳಿಂದ ಖಾಲಿ ಇದ್ದ ಬೋಗಾದಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಯಾಗಿ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಎ.ಎಂ.ಶ್ರೀಧರ್ ಹೆಚ್ಚುವರಿ ಜವಾಬ್ದಾರಿ ವಹಿಸಿಕೊಂಡರು. ಇಂಜಿನಿಯರ್ ಒಬ್ಬರಿಂದ ಲೈಸೆನ್ಸ್ ನವೀಕರಣಕ್ಕಾಗಿ 20 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದಾಗ ಬೋಗಾದಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಯಾಗಿದ್ದ ಡಿ.ಎನ್. ವಿಜಯ್‌ಕುಮಾರ್ ಎಸಿಬಿ ಬಲೆಗೆ ಬಿದ್ದಿದ್ದರು. ಅಂದಿನಿಂದ ಬೋಗಾದಿ ಪ.ಪಂ ಮುಖ್ಯಾಧಿಕಾರಿ ಹುದ್ದೆ ಖಾಲಿಯಿತ್ತು.



ಈ ಹಿನ್ನೆಲೆಯಲ್ಲಿ ಸರ್ಕಾರ ಆದೇಶ ಹೊರಡಿಸಿ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ ಆದೇಶ ಬರುವವರೆಗೂ ಬೋಗಾದಿ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಯಾಗಿ ಪ್ರಭಾರ ಹುದ್ದೆ ವಹಿಸಿಕೊಳ್ಳುವಂತೆ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿಯಾಗಿ ಎ.ಎಂ.ಶ್ರೀಧರ್ ಇಂದು ಹೆಚ್ಚುವರಿ ಹುದ್ದೆಯಾಗಿ ಅಧಿಕಾರ ವಹಿಸಿಕೊಂಡರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಸೇರಿ 17 ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಸೇರಿ ಒಟ್ಟು 17 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದ ಐಎಎಸ್ ಅಧಿಕಾರಿಗಳು: ಗೌರವ್ ಗುಪ್ತಾ– ACS, ಮೂಲಸೌಕರ್ಯ ಅಭಿವೃದ್ಧಿ, ತುಷಾರ್ ಗಿರಿನಾಥ್ – BBMP ನೂತನ ಮುಖ್ಯ ಆಯುಕ್ತ ಮನೋಜ್ ಜೈನ್ – ಕಾರ್ಮಿಕ ಇಲಾಖೆಯ ಕಾರ್ಯದರ್ಶಿ, ಟಿ.ಕೆ.ಅನಿಲ್‌ಕುಮಾರ್– ಪ್ರಧಾನ ಕಾರ್ಯದರ್ಶಿ, ಕಂದಾಯ, ವಿ.ಪೊನ್ನುರಾಜು– ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ, ಖುಷ್ಬೂ ಜಿ. ಚೌಧರಿ– ಉಪ ಆಯುಕ್ತರು, ಕರ್ನಾಟಕ ಭವನ, ಡಾ. ರಾಜೇಂದ್ರ ಕೆ. – ಕಾರ್ಯದರ್ಶಿ, ಕೆಪಿಎಸ್‌ಸಿ, ಎಂ.ಜಿ.ಹಿರೇಮಠ್ – ವ್ಯವಸ್ಥಾಪಕ ನಿರ್ದೇಶಕ, KRIDL, ಡಾ. ನವೀನ್ ಭಟ್ ವೈ – ನಿರ್ದೇಶಕ, KSRTC, ಡಾ.ದಿಲೀಶ್ ಸಸಿ – ನಿರ್ದೇಶಕ, EDCS, DPAR, ನಿತೇಶ್ ಪಾಟೀಲ್ – ಜಿಲ್ಲಾಧಿಕಾರಿ, ಬೆಳಗಾವಿ, ಗುರುದತ್ತ ಹೆಗ್ಡೆ – ಜಿಲ್ಲಾಧಿಕಾರಿ, ಧಾರವಾಡ, ಭೂಬಾಲನ್ ಟಿ. – ಜಿಲ್ಲಾಧಿಕಾರಿ, ಬಾಗಲಕೋಟೆ, ಭರತ್ ಎಸ್ – MD, ವಾಯುವ್ಯ ಸಾರಿಗೆ ಇಲಾಖೆ, ಶಿಲ್ಪಾ ಎಂ. – MD, ನಗರ ಮೂಲಸೌಕರ್ಯ ಅಭಿವೃದ್ಧಿ, ಪ್ರಸನ್ನ ಹೆಚ್– ಸಿಇಒ, ಜಿಲ್ಲಾ ಪಂಚಾಯತ್, ಉಡುಪಿ, ಗಿರೀಶ್ ದಿಲೀಪ್ ಬಡೋಲೆ – CEO, ಜಿಪಂ ಕಲಬುರಗಿ.

ಮೇ 10, ಸರ್ಕಾರದಿಂದ ರಾಮಾನುಜಾಚಾರ್ಯರ ಜಯಂತಿ ಆಚರಣೆ

ಸಾಧಕರಿಗೆ 'ಶ್ರೀರಾಮಾನುಜ ಸೇವಾ ಪ್ರಶಸ್ತಿ' ಪ್ರದಾನ



ಮೈಸೂರು, ಮೇ 5(ಎಂಟಿವೈ)– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಆಯೋಜಿಸಿದ್ದ ಶ್ರೀ ರಾಮಾನುಜಾಚಾರ್ಯರ 1005ನೇ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 'ಶ್ರೀ ರಾಮಾನುಜ ಸೇವಾ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ರಾಮಾನುಜಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬಳಿಕ ವಿದ್ವಾನ್ ಕೃಷ್ಣಮೂರ್ತಿ, ಪುಟ್ಟಸ್ವಾಮಿ, ಡಾ.ಸಿ.ಎನ್.ಸುನೀತಾ, ಪ್ರಶಾಂತ್ ತಾತಾಚಾರ್, ಎಸ್.ಶ್ರೀಧರ್, ಟಿ.ಎಸ್. ಶಾಮಣ್ಣ ಅವರಿಗೆ ಶ್ರೀ ರಾಮಾನುಜ ಸೇವಾ ಪ್ರಶಸ್ತಿ–2022 ಪ್ರದಾನ ಮಾಡಿ ಪುರಸ್ಕರಿಸಲಾಯಿತು.

ಇದೇ ವೇಳೆ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮಾತನಾಡಿ, ಸಮಾಜಕ್ಕೆ ರಾಮಾನುಜಾಚಾರ್ಯರ ಕೊಡುಗೆ ಅಪಾರವಾದುದು, 130 ವರ್ಷಗಳ ಕಾಲ ಬದುಕಿದ್ದ ರಾಮಾನುಜರು ಮೇಲುಕೋಟೆಗೆ ಭೇಟಿ ನೀಡಿ ಹಿಂದೂ ಧರ್ಮ ಮಹತ್ವವನ್ನು ಸಾರಿದರು. ಕೆರೆ ತೊಣ್ಣೂರು ಕೆರೆ ನಿರ್ಮಿಸಿದರು. ಸಮಾಜದ ಎಲ್ಲಾ ಜಾತಿಯವರಿಗೂ ಸಂಸ್ಕಾರ ಪರಿಚಯಿಸಿದರು. ಸಂಸ್ಕೃತಿಯೊಂದಿಗೆ ಆರೋಗ್ಯ, ಶಿಕ್ಷಣ, ವಿಜ್ಞಾನದ ಉಪಯೋಗದ ಮಹತ್ವ ತಿಳಿಸಿಕೊಟ್ಟರು. ಸರ್ಕಾರದ ವತಿಯಿಂದ ಮೇ 10ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಮಾನುಜಾಚಾರ್ಯರ ಜಯಂತಿ ಆಚರಿಸಲಾಗುತ್ತದೆ. ಮುಂದಿನ ವರ್ಷದಿಂದ ಸರ್ಕಾರದ ವತಿಯಿಂದಲೇ ಎಲ್ಲಾ ಜಿಲ್ಲೆಗಳಲ್ಲೂ ರಾಮಾನುಜಾಚಾರ್ಯರ ಜಯಂತಿ ಆಚರಿಸುವಂತೆ ಮನವಿ ಮಾಡಲಾಗುವುದು ಎಂದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಶ್ರೀರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಪ್ರತಿಪಾದಕರಾಗಿ ಶ್ರೀವೈಷ್ಣವ ಸಂಪ್ರದಾಯವನ್ನು ಸ್ಥಾಪಿಸಿದರು. ಸಾವಿರ ವರ್ಷದ ಹಿಂದೆಯೇ ಸರ್ವರಿಗೂ ಸಮಾನ ಹಕ್ಕು ಸಾಮರಸ್ಯದ ಬದುಕು ನಿರ್ಮಾಣಕ್ಕೆ ಬುನಾದಿ ಹಾಕಿಕೊಟ್ಟರು. ಎಲ್ಲರಿಗೂ ಆಧ್ಯಾತ್ಮ ಸಾರ ತಿಳಿಸಿಕೊಟ್ಟರು. ಇದರಿಂದಲೇ ವಿಶ್ವದಲ್ಲಿ ಎರಡನೇ ದೊಡ್ಡ ಪ್ರತಿಮೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹೈದರಾಬಾದ್‌ನಲ್ಲಿ ಪ್ರಧಾನಿ ಮೋದಿಯವರು ಅನಾವರಣಗೊಳಿಸಿದ ರಾಮಾನುಜರ ಪ್ರತಿಮೆ ಸಾವಿರ ವರುಷದ ದೇಶದ ಇತಿಹಾಸ ತಿಳಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಮಾತನಾಡಿ, ರಾಮಾನುಜ ರಸ್ತೆಯಲ್ಲಿ ಶ್ರೀರಾಮಾನುಜರ ಪ್ರತಿಮೆ ಸ್ಥಾಪಿಸಲು ನಗರಪಾಲಿಕೆ ಕಾರ್ಯೋನ್ಮುಖರಾಗಬೇಕು. ರಾಜ್ಯ ಸರ್ಕಾರ ಶಂಕರ ಜಯಂತಿ ಆಚರಿಸುವ ಮಾದರಿಯಲ್ಲೇ ರಾಮಾನುಜರ ಮತ್ತು ಮಧ್ವಾಚಾರ್ಯರ ಜಯಂತಿಯನ್ನು ಜಿಲ್ಲಾಡಳಿತ ಆಚರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು

ಕಾರ್ಯಕ್ರಮದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಎಸ್‌ಎಲ್‌ಎನ್ ಆಚಾರ್, ಜೀವಧಾರ ರಕ್ತನಿಧಿಯ ಗಿರೀಶ್, ಯೋಗಾ ನರಸಿಂಹ (ಮುರಳಿ), ನಗರ ಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಸುಚೀಂದ್ರ ಚಕ್ರಪಾಣಿ, ಅಪೂರ್ವ ಸುರೇಶ್, ಗಿರೀಶ್ ರಾಮಮೂರ್ತಿ, ರಾಜಗೋಪಾಲ್ ಹಾಗೂ ಇನ್ನಿತರರು ಇದ್ದರು.

ಪ್ರತಿ ಗ್ರಾಮದಲ್ಲೂ ಕ್ರೀಡಾಂಗಣ



ಮಂಡ್ಯ,ಮೇ 5(ಮೋಹನ್‌ರಾಜ್)– ಕ್ರೀಡಾ ಕ್ಷೇತ್ರದಲ್ಲಿ ರಾಜ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ಅಭಿವೃದ್ಧಿ ಕೆಲಸ ಮಾಡಲು ಪಣತೊಟ್ಟಿದ್ದು, ರಾಜ್ಯದ ಪ್ರತಿ ಗ್ರಾಮದಲ್ಲಿ ಪುಟ್ಟ ದೊಂದು ಕ್ರೀಡಾಂಗಣ ನಿರ್ಮಿಸಬೇಕೆಂಬ ಗುರಿ ಹೊಂದಿರುವುದಾಗಿ ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ ಹೇಳಿದರು.

ಗುರುವಾರ ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ 2022–25ನೇ ಸಾಲಿನ ನೂತನ ಆಡಳಿತ ಮಂಡಳಿಯ ಅಧಿಕಾರ ಸ್ವೀಕಾರ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಖಾತೆ ಯಾವುದಾದರೇನು ಕೆಲಸ ಮಾಡುವ ಧ್ಯೇಯ ಇರಬೇಕು. ಈ ನಿಟ್ಟಿನಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಲು ಪಣತೊಟ್ಟಿದ್ದು, ಕ್ರೀಡಾಂಗಣಗಳನ್ನು ನಿರ್ಮಿಸುವ ಮೂಲಕ ಕ್ರೀಡೆಗೆ ಉತ್ತೇಜನ ನೀಡಲು ಮುಂದಾಗಿದ್ದೇನೆ ಎಂದರು.

ಮಂಡ್ಯ ನಗರದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಮಾಡಬೇಕೆಂಬುದು ನನ್ನ ಗುರಿಯಾಗಿದ್ದು, ಇದಕ್ಕಾಗಿ ಜಾಗ ಕೊಡಲು ಸಹ ಅನೇಕರು ಮುಂದೆ ಬಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಚರ್ಚೆ ಸಹ ನಡೆಯುತ್ತಿದೆ ಎಂದು ಸಚಿವರು ತಿಳಿಸಿದರು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಾಗಿ ಕೊರೋನಾ ಸಂದರ್ಭದಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದು, ಎರಡು ವರ್ಷ ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಕಾರ್ಯನಿರ್ವಹಿಸಿದ್ದು ಖುಷಿ ತಂದಿದೆ ನಾನು ಯಾವುದೇ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡರೂ ಮಂಡ್ಯದವನು ಎಂಬ ಹೆಮ್ಮೆ ಇದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ನಿವೇಶನ ರಹಿತ ಅನೇಕ ಪತ್ರಕರ್ತರಿದ್ದು, ಅವರಿಗೆ ನಿವೇಶನ ಒದಗಿಸಿಕೊಡುವ ಜವಾಬ್ದಾರಿ ನನ್ನದು. ಈ ನಿಟ್ಟಿನಲ್ಲಿ ಈಗಾಗಲೇ ಮುಡಾದಿಂದ ಮಂಡ್ಯ ನಗರದ ಪತ್ರಕರ್ತರಿಗೆ ನಿವೇಶನ ಒದಗಿಸಲು ಜಾಗ ಗುರುತಿಸುವಂತೆಯೂ ಮುಡಾ ಅಧ್ಯಕ್ಷರಿಗೆ ಸೂಚಿಸಲಾಗಿದೆ. ಜೊತೆಗೆ ತಾಲೂಕು ಮಟ್ಟದ ಪತ್ರಕರ್ತರಿಗೂ ನಿವೇಶನ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲು ನಾನು ಮುಂದಾಗುತ್ತೇನೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕು ಅಂಗಗಳಲ್ಲಿ ಪತ್ರಿಕಾರಂಗ ಸಹ ಪ್ರಮುಖವಾದದ್ದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸುದ್ದಿಯ ವೇಗ ಇದ್ದೇ ಇದೆ. ಮೊದಲು ಬ್ರೇಕ್ ಮಾಡಬೇಕೆಂಬ ಧಾವಂತದಲ್ಲಿ ಪತ್ರಕರ್ತರು ಎಡವಬಾರದು. ಕ್ರಿಯಾಶೀಲತೆಯಿಂದ, ಬುದ್ಧಿವಂತಿಕೆಯಿಂದ ಕೆಲಸ ನಿರ್ವಹಿಸಬೇಕು. ಯುವ ಪತ್ರಕರ್ತರಿಗೆ ತಮ್ಮ ನೀತಿ, ಸಂಯಮಗಳ ಬಗ್ಗೆ ಪತ್ರಕರ್ತರ ಸಂಘದ ಪದಾಧಿಕಾರಿಗಳು ಬೋಧನೆ ಮಾಡಬೇಕು. ಸ್ವಾಸ್ಥ್ಯ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಪತ್ರಕರ್ತರ ಪಾತ್ರ ಬಹುದೊಡ್ಡದಾಗಿರುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಂಘದ ನೂತನ ಪದಾಧಿಕಾರಿಗಳಿಗೆ ಹಿಂದಿನ ಪದಾಧಿಕಾರಿಗಳು ಅಧಿಕಾರ ಹಸ್ತಾಂತರ ಮಾಡಿದರು. ಜೊತೆಗೆ ಹಿಂದಿನ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಚುನಾವಣಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಮಧು ಜಿ.ಮಾದೇಗೌಡ, ಮುಡಾ ಅಧ್ಯಕ್ಷ ಶ್ರೀನಿವಾಸ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಂ, ಸೋಮಶೇಖರ ಕೆರಗೋಡು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ನಿರ್ಗಮಿತ ಅಧ್ಯಕ್ಷ ನವೀನ್ ಚಿಕ್ಕಮಂಡ್ಯ, ನಿರ್ಗಮಿತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಮೋಹನ್‌ರಾಜ್, ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಚುನಾವಣಾಧಿಕಾರಿ ಕೆ.ಎನ್.ರವಿ, ಸಹಾಯಕ ಚುನಾವಣಾಧಿಕಾರಿ ಶೇಷಣ್ಣ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಗಮಂಗಲದಲ್ಲಿ ಯುವಕ ಆತ್ಮಹತ್ಯೆ

ನಾಗಮಂಗಲ, ಮೇ 5(ಮಹೇಶ್)–



ಯುವಕನೊಬ್ಬ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿನ ಟಿಬಿ ಬಡಾವಣೆಯಲ್ಲಿ ನಡೆದಿದೆ.

ಸೇನೆಯಲ್ಲಿದ್ದು ನಿವೃತ್ತರಾಗಿದ್ದ ಗಿರೀಶ್ ಎಂಬವರ ಮಗ ಶರತ್ (30) ಆತ್ಮಹತ್ಯೆ ಮಾಡಿಕೊಂಡವರು. ಬುಧವಾರ ಸಂಜೆ ವಿಷ ಕುಡಿದು ಕೋಣೆ ಸೇರಿ ನೋವು ತಾಳಲಾರದೇ ಒದ್ದಾಡುತ್ತಿದ್ದ ನೆನ್ನಲಾಗಿದೆ. ತಕ್ಷಣ ಪೋಷಕರು ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಗೆ ದಾಖಲು ಮಾಡಿದರಾದರೂ ಚಿಕಿತ್ಸೆ ಫಲಕಾರಿಯಾಗದೇ ಮಧ್ಯ ರಾತ್ರಿ ಶರತ್ ಮೃತಪಟ್ಟಿದ್ದು, ಪ್ರಕರಣ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.



ಪಾಂಡವಪುರ ತಾಲೂಕಿನ ಡಿಂಕಾಶೆಟ್ಟಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ಗ್ರಾಪಂ ಅಧ್ಯಕ್ಷೆ ರತಿಪಾಲಾಕ್ಷ, ಉಪಾಧ್ಯಕ್ಷ ನಂಜೇಗೌಡ, ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಮುರುಳಿಧರ್, ಯೋಜನಾಧಿಕಾರಿ ದಯಾನಂದ ಪೂಜಾರಿ, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಚಿಕ್ಕತಮ್ಮೇಗೌಡ, ಉಪಾಧ್ಯಕ್ಷ ಜಯರಾಮು, ಗ್ರಾಪಂ ಮಾಜಿ ಅಧ್ಯಕ್ಷ ಗಂಗಾಧರ್, ಜನಜಾಗೃತಿ ಸಮಿತಿ ಸದಸ್ಯರಾದ ಅಶ್ವಥ್ ಕುಮಾರೇಗೌಡ, ಗುಣಶೇಖರ್, ರಾಜ್‌ಕುಮಾರ್, ಮುಖಂಡರಾದ ದೊಡ್ಡರಾಮೇಗೌಡ, ಪಾಪೇಗೌಡ, ಧರ್ಮಸ್ಥಳದ ಅಧಿಕಾರಿ ಮಂಜು, ಪ್ರಮೋದ, ಪಿಡಿಓ ಸ್ವಾಮೀಗೌಡ ಸೇರಿದಂತೆ ಹಲವರು ಹಾಜರಿದ್ದರು.

ಕಾಟಾಚಾರಕ್ಕೆ ಮಳೆ ಹಾನಿ ಪ್ರದೇಶಗಳ ವೀಕ್ಷಣೆ: ಜಿಲ್ಲಾಧಿಕಾರಿ ವಿರುದ್ಧ ರೈತರ ಆಕ್ರೋಶ



ಶ್ರೀರಂಗಪಟ್ಟಣ,ಮೇ 5(ವಿನಯ್ ಕಾರೇಕುರ)–ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಕಾಟಾಚಾರದ ಪರಿಶೀಲನೆ ನಡೆಸಿದ್ದಾರೆಂದು ಆರೋಪಿಸಿ ಜಿಲ್ಲಾಧಿಕಾರಿ ಡಾ.ಅಶ್ವಥಿ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಏ.29ರಂದು ಸುರಿದ ಭಾರೀ ಗಾಳಿ ಮಳೆಗೆ ಬೆಳಗೊಳ ಹೋಬಳಿಯ ಹಲವು ಗ್ರಾಮಗಳಲ್ಲಿ ನೂರಾರು ಎಕರೆ ತೋಟಗಾರಿಕೆ ಹಾಗೂ ರೈತರ ಬೆಳೆಗಳು ಹಾನಿಗೊಳಗಾಗಿದ್ದವು, ಹಾನಿಗೊಳಗಾಗಿ 5 ದಿನ ಕಳೆದ ನಂತರ ಜಿಲ್ಲಾಧಿಕಾರಿ ಕೆಲ ಆಯ್ದ ಪ್ರದೇಶಗಳಿಗೆ ಭೇಟಿ ನೀಡಿ ನಿರ್ಗಮಿಸಿದರು.

ಅಂದು ಸುರಿದ ಮಳೆಗೆ ವಿಶ್ವ ವಿಖ್ಯಾತ ಪ್ರವಾಸಿತಾಣ ರಂಗನತಿಟ್ಟು ಪಕ್ಷಿಧಾಮ ಸಂಪೂರ್ಣ ಹಾನಿಗೊಳಗಾಗಿದ್ದು, 20ಕ್ಕೂ ಹೆಚ್ಚು ಬೃಹತ್ ಮರಗಳು ನೆಲಕ್ಕುರುಳಿದೆ, ನೂರರಷ್ಟು ಮರಗಳ ರಂಬೆ ಧರೆಗುರುಳಿದೆ, ಇದರಿಂದ ಪಕ್ಷಿಧಾಮದ ಹಲವು ಕಟ್ಟಡಗಳು ಹಾನಿಗೊಳಗಾಗಿದ್ದು, ಪಾಲಹಳ್ಳಿ, ಹೊಸಹಳ್ಳಿ, ಕಾರೇಕುರ ಸೇರಿದಂತೆ ಕೆಲ ಗ್ರಾಮಗಳಲ್ಲಿ ರೈತರ ಭತ್ತ, ಕಬ್ಬು, ರಾಗಿ, ತೆಂಗು, ಅಡಿಕೆ, ಬಾಳೆ, ಹೆಬ್ಬೇವು ಸೇರಿದಂತೆ ಹಲವು ಬೆಳೆಗಳು ಹಾನಿಯಾಗಿವೆ. ಇಂಥ ಸೂಕ್ಷ್ಮ ಸ್ಥಳಗಳಿಗೆ ತಕ್ಷಣಕ್ಕೆ ಭೇಟಿ ನೀಡಿ ಪರಿಹಾರ ನೀಡಿ ಸಮಸ್ಯೆ ಸರಿಪಡಿಸಬೇಕಾದ ಅಧಿಕಾರಿಗಳು ಗಾಢ ನಿದ್ರೆಯಲ್ಲಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಹಾನಿಗೊಳಗಾಗಿದ್ದ ರೈತರ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸದ ಜಿಲ್ಲಾಧಿಕಾರಿ ಸೇರಿದಂತೆ ಯಾವ ಅಧಿಕಾರಿಯೂ ತಿರುಗಿ ನೋಡಿಲ್ಲ. ಐದು ದಿನ ಕಳೆದ ನಂತರ ಜಿಲ್ಲಾಧಿಕಾರಿ ಡಾ.ಅಶ್ವಥಿ, ಉಪವಿಭಾಗಾಧಿಕಾರಿ ಶಿವಾನಂದ ಮೂರ್ತಿ, ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ ಸೇರಿದಂತೆ ಕೆಲ ಅಧಿಕಾರಿಗಳು ವೀಕ್ಷಣೆ ನಡೆಸಿದ್ದಾರೆ. ಆದರೆ ಇಷ್ಟು ದಿನ ಕಳೆದರು ಎಷ್ಟು ಎಕರೆಯಲ್ಲಿ ಎಷ್ಟು ಬೆಳೆ ಹಾನಿ ಆಗಿದೆ ಎಂಬ ನಿಖರ ಮಾಹಿತಿ ಇಲ್ಲದೆ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಪತ್ನಿಯಿಂದಲೇ ಪತಿ ಕೊಲೆಗೆ ಸುಪಾರಿ

ಪತ್ನಿ ಸೇರಿ ಎಂಟು ಮಂದಿ ಬಂಧನ

ಶ್ರೀರಂಗಪಟ್ಟಣ,ಮೇ 5(ವಿನಯ್ ಕಾರೇಕುರ)– ಪತ್ನಿಯೇ ತನ್ನ ಪತಿ ಹತ್ಯೆಗೆ ಸುಪಾರಿ ನೀಡಿದ ಪ್ರಕರಣ ಬೆಳಕಿಗೆ ಬಂದಿದ್ದು, ಪತ್ನಿ ಸೇರಿದಂತೆ ಎಂಟು ಮಂದಿ ಆರೋಪಿಗಳನ್ನು ಕೆ.ಆರ್. ಸಾಗರ ಪೊಲೀಸರು ಬಂಧಿಸಿದ್ದಾರೆ.

ಪತ್ನಿ ಜಯಂತಿ ಮೇಲ್ವಿನ್, ಈಕೆಯ ಸ್ನೇಹಿತೆ ಪಾಲಹಳ್ಳಿ ವಿನುತಾ, ಅಜಯ್, ಕೀರ್ತಿ, ನವೀನ, ಪ್ರಜ್ವಲ್, ರಾಜೇಶ್, ವರುಣ್ ಬಂಧಿತ ಅರೋಪಿಗಳು.

ಪ್ರಕರಣ ವಿವರ: ಶ್ರೀರಂಗಪಟ್ಟಣ ತಾಲೂಕಿನ ಮೊಗರಹಳ್ಳಿ ಗ್ರಾಮದ ನಿವಾಸಿ ಮೇಲ್ವಿನ್ ಫ್ರಾನ್ಸಿಸ್ ಸೀಕವೇರ ತನ್ನ ಪತ್ನಿ ಜಯಂತಿ ಜೊತೆ ನೆಲೆಸಿದ್ದರು. ವಿದ್ಯುತ್ ಕಂಬಗಳ ತಯಾರಿಕಾ ಉದ್ಯಮ ನಡೆಸುತ್ತಿದ್ದ ಮೇಲ್ವಿನ್ ಫ್ರಾನ್ಸಿಸ್ ಬಗ್ಗೆ ಪತ್ನಿ ಜಯಂತಿ ಬೇರೆ ಮಹಿಳೆಯೊಂದಿಗೆ ಸಂಬಂಧವಿದೆ ಎಂದು ಅನುಮಾನಗೊಂಡಿದ್ದರು. ಗಂಡನ ಮೇಲೆ ಹಲ್ಲೆ ಮಾಡಿಸಿದರೆ, ತನ್ನ ಜೊತೆಯಲ್ಲೇ ಇರುತ್ತಾರೆಂದು ತನಗೆ ಪರಿಚಯವಿದ್ದ ವಿನುತಾಳೊಂದಿಗೆ ಸೇರಿ ಹಲ್ಲೆ ನಡೆಸಲು ಪ್ಲಾನ್ ಮಾಡಿದ್ದರು.

ಅದರಂತೆ ಫೆ.25 ರಂದು ಮೇಲ್ವಿನ್ ಫ್ರಾನ್ಸಿಸ್ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಮತ್ತೊಂದು ಕಾರಿನಲ್ಲಿ ಅಡ್ಡಗಟ್ಟಿದ ಇತರ ಆರೋಪಿಗಳು ಮಚ್ಚು, ಲಾಂಗ್‌ನಿಂದ ಹಲ್ಲೆಗೆ ಯತ್ನಿಸಿದ್ದರು. ಅದೃಷ್ಟವಶಾತ್ ದುಷ್ಕರ್ಮಿಗಳಿಂದ ತಪ್ಪಿಸಿಕೊಂಡ ಮೇಲ್ವಿನ್ ಫ್ರಾನ್ಸಿಸ್ ಕೆ.ಆರ್. ಸಾಗರ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡು ಡಿವೈಎಸ್‌ಪಿ ಸಂದೇಶ್ ಕುಮಾರ್ ಮಾರ್ಗದರ್ಶನದಲ್ಲಿ ತನಿಖೆ ಆರಂಭಿಸಿದ್ದ ಕೆ.ಆರ್. ಸಾಗರ ಠಾಣೆ ಪೊಲೀಸರು ಜಯಂತಿಯನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೊಳಪಡಿಸಿದಾಗ ಸತ್ಯ ಹೊರಬಿದ್ದಿದೆ. ಆಕೆಯ ಹೇಳಿಕೆಯಂತೆ ಉಳಿದ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಪ್ರಕರಣದಲ್ಲಿ ಭಾಗಿಯಾಗಿದ್ದ ಮನೋಜ್ ಅಲಿಯಾಸ್ ಮಸಾಲೆ ಮತ್ತು ಕಿರಣ್ ಮತ್ತೊಂದು ಪ್ರಕರಣದಲ್ಲಿ ಮೈಸೂರು ಜೈಲಿನಲ್ಲಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಮೇ 5– 2022–23ನೇ ಸಾಲಿನ ಮೀನುಗಾರಿಕೆ ಇಲಾಖೆ ಪಾಂಡವಪುರ ತಾಲೂಕಿನ ವ್ಯಾಪ್ತಿಯ ಡ್ಯಾಮಡಹಳ್ಳಿ ಕೆರೆ, ಹಿರೋಡೆ ಕೆರೆ, ಸುಂಕಾತೊಣ್ಣೂರು ಕೆರೆ, ಎಸ್. ಕೊಡಗಳ್ಳಿ ಕೆರೆ, ಬೇಬಿ ಕೆರೆ ಮತ್ತು ಹೊಸಕೆರೆ ಗುತ್ತಿಗೆ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಆಸಕ್ತ ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಗುತ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಮೇ 23ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಪಾಂಡವಪುರ ಮೀನುಗಾರಿಕೆ ಸಹಾಯಕ ನಿರ್ದೇಶಕರ ದೂ.ಸಂ. 7892340185 ಸಂಪರ್ಕಿಸಬಹುದು.

ವ್ಯಕ್ತಿ ನಾಪತ್ತೆ

ಪಾಂಡವಪುರ, ಮೇ 5– ತಾಲೂಕಿನ ಮಾಣಿಕ್ಯನಹಳ್ಳಿ ಗ್ರಾಮದ ಲೋಕೇಶ್ (38) ಏ.18ರಿಂದ ಕಾಣೆಯಾಗಿದ್ದಾರೆಂದು ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಕಾಣೆಯಾದ ವ್ಯಕ್ತಿಯು 5.7 ಅಡಿ ಎತ್ತರ, ಕೋಲು ಮುಖ, ಗೋದಿ ಬಣ್ಣ ಹೊಂದಿದ್ದಾರೆ. ಎಡಗೈನಲ್ಲಿ ಕಾಳಮ್ಮ ಎಂದು ಹಚ್ಚೆ ಹಾಕಿಸಿಕೊಂಡಿರುತ್ತಾರೆ.

ಇವರ ಸುಳಿವು ಸಿಕ್ಕಲ್ಲಿ ಮೇಲುಕೋಟೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದೆಂದು ಸಬ್‌ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲಿ

ಒಳಪಡಿಸುತ್ತಾರಾ? ಎಂದು ಪ್ರಶ್ನಿಸಿದ ಅವರು, ಬೇಕಂತಲೇ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಪ್ರಕರಣದ ಸತ್ಯಾಸತ್ಯತೆ ತಿಳಿಯಲು ನ್ಯಾಯಾಂಗ ತನಿಖೆ ಆಗಬೇಕು ಎಂದು ಒತ್ತಾಯಿಸಿದರು. ಈ ಹಗರಣದಲ್ಲಿ ಮಧ್ಯವರ್ತಿಗಳನ್ನು ಮಾತ್ರ ಬಂಧಿಸಲಾಗಿದೆ. ಎಡಿಜಿಪಿ, ಡಿವೈಎಸ್ಪಿಯನ್ನು ವರ್ಗಾವಣೆ ಮಾಡಲಾಗಿದೆ. ಅಕ್ರಮ ನಡೆದಿಲ್ಲವೆಂದು ಗೃಹ ಸಚಿವ ಆರಗ ಜ್ಞಾನೇಂದ್ರ ಈ ಹಿಂದೆ ಸದನದಲ್ಲಿ ಹೇಳಿ ದಾರಿ ತಪ್ಪಿಸಿದ್ದಾರೆ. ಈಗ ನಡೆದಿರುವುದೇನು? ಕಳ್ಳರು ಯಾವತ್ತೂ ಸತ್ಯ ಒಪ್ಪಿಕೊಳ್ಳುವುದಿಲ್ಲ. ಅಧಿಕಾರದಲ್ಲಿರಲು ಬಿಜೆಪಿಯವರು ಲಾಯಕ್ಕಲ್ಲ ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ನಿಜವಾದ ಆರೋಪಿಗಳನ್ನು ಬಂಧಿಸಿಲ್ಲ. ಮಧ್ಯವರ್ತಿಗಳನ್ನು ಮಾತ್ರ ಬಂಧಿಸಿದ್ದಾರೆ. ಸಚಿವ ಡಾ.ಅಶ್ವತ್ಥನಾರಾಯಣ ಕಡೆಯವರು ಇಬ್ಬರು ಇದ್ದಾರೆ. ಆಯ್ಕೆಯಾದ ದರ್ಶನ್ ಗೌಡನನ್ನು ಕರೆ ತಂದು ವಿಚಾರಣೆ ಮಾಡದೆ ಬಿಟ್ಟಿದ್ದಾರೆ. ನಿಷ್ಪಕ್ಷಪಾತ ತನಿಖೆ ಮಾಡುತ್ತಿಲ್ಲ ಎಂದು ಆರೋಪಿಸಿದರು. ಈ ಹಿಂದಿನ ವಾಚ್ ಪ್ರಕರಣವನ್ನು ಮತ್ತೆ ಪ್ರಸ್ತಾಪಿಸುತ್ತಿದ್ದಾರೆ. ಕಳ್ಳತನದ ವಾಚ್ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದರಿಂದ ಪ್ರಕರಣವನ್ನು ಆಗಲೇ ಎಸಿಬಿಗೆ ವಹಿಸಿದ್ದೆ. ತನಿಖೆಯಾಗಿ ನನಗೆ ವಾಚ್ ಕೊಟ್ಟ ದುಬೈನ ಡಾ.ವರ್ಮಾ ಎಂಬುವರು ಪ್ರಮಾಣ ಪತ್ರ ಸಲ್ಲಿಸಿ ರಸೀದಿ ಕೂಡ ನೀಡಿದ್ದು, ಪ್ರಕರಣ ಇತ್ಯರ್ಥವಾಗಿದೆ. ಸರ್ಕಾರಕ್ಕೇ ವಾಚ್ ಒಪ್ಪಿಸಿದ್ದೇನೆ. ಆದರೀಗ ಸಿದ್ದರಾಮಯ್ಯ ವಾಚ್ ಕಟ್ಟಿಕೊಂಡಿರಲಿಲ್ವೇ ಎಂದು ಈಗ ಪ್ರತಿವಾದ ಮಾಡಿದರೆ ಹೇಗೆ? ಆ ವಾಚ್‌ಗೆ 35–40 ಲಕ್ಷ ರೂ. ಬೆಲೆ ಇರಬಹುದು. ಈಗ ನಡೆದಿರುವುದು 300 ಕೋಟಿ ರೂ. ಅವ್ಯವಹಾರ. ಹಾಗೆಂದು ನಾನೇನೂ ಸಮರ್ಥಿಸಿಕೊಳ್ಳುತ್ತಿಲ್ಲ ಎಂದರು.

ಹಿಂದೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಈಗ ಬಸವರಾಜ ಬೊಮ್ಮಾಯಿ ಜನರಿಂದ ಆಯ್ಕೆಯಾದ ಮುಖ್ಯಮಂತ್ರಿ ಅಲ್ಲ. ಬರೀ ನೇಮಕವಾದ ಮುಖ್ಯಮಂತ್ರಿಗಳು. ಶಾಸಕರನ್ನು ಖರೀದಿಸಿ ಸರ್ಕಾರ ಮಾಡಿಕೊಂಡರು. ಇದರಿಂದಲೇ ವ್ಯಾಪಕ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಶಾಸಕರನ್ನು ಖರೀದಿಸಿರುವುದಕ್ಕೆ ಪ್ರತಿಯಾಗಿ ಮಿತಿ ಮೀರಿದ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಈ ಹಿಂದೆ ಶಾಸಕ ಕೆ.ಜೆ. ಜಾರ್ಜ್ ಅವರಿಗೆ ಸಂಬಂಧಿಸಿದ ಎರಡೂ ಪ್ರಕರಣ ಸಿಬಿಐಗೆ ಹೋಗಿದ್ದವು. ಎರಡೂ ಪ್ರಕರಣಗಳಲ್ಲಿ ಕ್ಲೀನ್‌ಚಿಟ್ ನೀಡಲಾಗಿದೆ. ಆಗ ಯಾರ ಸರ್ಕಾರವಿತ್ತು? ಸತ್ಯವಿದ್ದರೆ ಕ್ಲೀನ್‌ಚಿಟ್ ನೀಡುತ್ತಿದ್ದರಾ? ಎಂದು ಪ್ರಶ್ನಿಸಿದರು.

ಅಕ್ರಮ ನೇಮಕಾತಿ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ಪ್ರಿಯಾಂಕ್ ಖರ್ಗೆ ಅವರು ಕೆಲವು ದಾಖಲೆ ಬಿಡುಗಡೆ ಮಾಡಿದ್ದಕ್ಕೆ ನೋಟಿಸ್ ನೀಡಲಾಗಿದೆ. ನೋಟಿಸ್ ನೀಡುವುದಕ್ಕೆ ಅಧಿಕಾರವೇ ಇಲ್ಲ. ಮೂರನೇ ಬಾರಿ ನೋಟಿಸ್ ನೀಡಲಾಗಿದೆ. ನೋಟಿಸ್ ನೀಡಿದ ಮಾತ್ರಕ್ಕೆ ಅವರು ಠಾಣೆಗೆ ಹೋಗಬೇಕಾ? ಪೊಲೀಸರೇ ಅವರ ಬಳಿ ಹೋಗಿ ದಾಖಲೆಗಳ ಬಗ್ಗೆ ಮಾಹಿತಿ ಪಡೆಯಲಿ. ಅವರೇನು ಅಪರಾಧಿನಾ ಎಂದು ಪ್ರಶ್ನಿಸಿದರು. ಪಿಎಸ್‌ಐ ನೇಮಕಾತಿ ಅಕ್ರಮದ ಬಗ್ಗೆ ಅವರ ಪಕ್ಷದ ಮಂತ್ರಿಯೇ ಪತ್ರ ಬರೆದಿದ್ದಾರೆ. ಬಿಜೆಪಿಯ ಓರ್ವ ವಿಧಾನಪರಿಷತ್ ಸದಸ್ಯರೂ ಸದನದಲ್ಲಿ ಪ್ರಶ್ನೆ ಮಾಡಿದ್ದಾರೆ. ಅಕ್ರಮ ನಡೆದಿದೆ ಎಂದು ಹೇಳಿದ್ದ ಅವರದೇ ಸರ್ಕಾರದ ಸಚಿವರಾಗಿದ್ದ ಪ್ರಭು ಚೌಹಾಣ್ ಅವರಿಂದ ಯಾವುದೇ ಮಾಹಿತಿ ಕೇಳಲು ಮುಂದಾಗಿಲ್ಲ ಯಾಕೆ ಎಂದು ಕಿಡಿಕಾರಿದರು. ಸದನದಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿಲ್ಲ ಎಂದು ಸಚಿವರು ಹೇಳಿದ್ದರು. ಅಕ್ರಮ ನಡೆದಿಲ್ಲದಿದ್ದರೆ ಯಾಕೆ ಮರು ಪರೀಕ್ಷೆ ನಡೆಸಲು ಆದೇಶಿಸಿದರು. ಇವರಿಗೆ ಅಧಿಕಾರದಲ್ಲಿ ಮುಂದುವರೆಯಲು ಲಾಯಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ವರಿಷ್ಠರು ಕೇಂದ್ರದಿಂದ ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ. ಯಾರೂ ಸಹ ಭ್ರಷ್ಟಾಚಾರ ನಿಯಂತ್ರಣದ ಬಗ್ಗೆ ಮಾತನಾಡುತ್ತಿಲ್ಲ. ರಾಜ್ಯದ ಬಿಜೆಪಿ ನಾಯಕರು ಮಾಡುತ್ತಿರುವ ಭ್ರಷ್ಟಾಚಾರಕ್ಕೆ ಕೇಂದ್ರದ ನಾಯಕರು ಮುದ್ರೆ ಒತ್ತಿ ಹೋಗುತ್ತಿದ್ದಾರೆ. ರಾಜಕೀಯ ಕಾರಣಕ್ಕಾಗಿ ಹಾಗೂ ಜನರ ಭಾವನೆಯನ್ನು ಬೇರೆ ಕಡೆ ಸೆಳೆಯುವುದಕ್ಕಾಗಿ ಕಾಂಗ್ರೆಸ್ ನಾಯಕರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಸಿಪಿಐ ಆನಂದ್ ಮೇತ್ರೆ ಬಂಧನ

ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು 3ನೇ ಜೆಎಂಎಫ್‌ಸಿ ನ್ಯಾಯಾಲಯದ ಸರ್ಕಾರಿ ವಕೀಲ ಶಿವಶರಣಪ್ಪ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ತಂಡ, ಡಿವೈಎಸ್‌ಪಿ ರ‍್ಯಾಂಕ್ ಅಧಿಕಾರಿಯನ್ನು ಬಂಧಿಸಿರುವುದು ಇದೇ ಮೊದಲು. ಈಗಾಗಲೇ 7 ದಿನಗಳಿಂದ ಸಿಐಡಿ ಕಸ್ಟಡಿಯಲ್ಲಿರುವ ಹಗರಣದ ಪ್ರಮುಖ ಆರೋಪಿ ಆರ್.ಡಿ.ಪಾಟೀಲ್‌ಗೆ ಸಹಾಯ ಮಾಡಿದ ಆರೋಪದ ಮೇಲೆ ಸಾಲಿ ಅವರನ್ನು ಬಂಧಿಸಲಾಗಿದೆ. ಆರ್.ಡಿ.ಪಾಟೀಲ್ ಅವರು ಬ್ಲೂಟೂತ್ ಸಾಧನವನ್ನು ಬಳಸಿಕೊಂಡು ಅಭ್ಯರ್ಥಿಗಳಿಗೆ ಪಿಎಸ್‌ಐ ಪರೀಕ್ಷೆ ಬರೆಯಲು ಸಹಾಯ ಮಾಡಿದ ಆರೋಪ ಎದುರಿಸುತ್ತಿದ್ದಾರೆ. ಸಾಲಿ ಮತ್ತು ಮೈತ್ರೆ ಬಂಧನದೊಂದಿಗೆ ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಸಿಐಡಿಯಿಂದ ಬಂಧಿತರ ಸಂಖ್ಯೆ 31ಕ್ಕೆ ಏರಿಕೆಯಾಗಿದೆ.

ಸರ್ವಧರ್ಮೀಯರು ಪಾಲ್ಗೊಂಡಿದ್ದ ಈದ್ ಮಿಲನ್ ಸೌಹಾರ್ದ ಸಮಾರಂಭ



ಮೈಸೂರು,ಮೇ.5(ಜಿಎ)– ಮೈಸೂರಿನ ರಾಜೀವ್‌ನಗರದ ಖಾಸಗಿ ಕನ್ವೆನ್ಷನ್ ಹಾಲ್‌ನಲ್ಲಿ ಶಾಸಕ ತನ್ವೀರ್ ಸೇಠ್ ಅವರ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ಏರ್ಪಡಿಸಲಾಗಿದ್ದ ಸರ್ವಧರ್ಮೀಯರ ಈದ್ ಮಿಲನ್ ಸೌಹಾರ್ದ ಸಮಾರಂಭದಲ್ಲಿ ಸರ್ವಧರ್ಮ ಧಾರ್ಮಿಕ ಮುಖಂಡರುಗಳು ಪಾಲ್ಗೊಂಡಿದ್ದರು.

ಈ ವೇಳೆ ಮಾತಾಡಿದ ತನ್ವೀರ್ ಸೇಠ್, ದೇವರು ಇದ್ದಾನೆ ಎಂಬ ನಂಬಿಕೆಯಿಂದಲೇ ಈ ದೇಶ ಸಾಗುತ್ತಿದೆ. ಸೃಷ್ಟಿಕರ್ತನ ಸೃಷ್ಟಿಯಾದ ನೀರು, ಗಾಳಿ, ಬೆಳಕು, ಸೂರ್ಯ, ಚಂದ್ರನ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ ಆದರೆ ನಮ್ಮಲಿರುವ ನಡವಳಿಕೆಗಳಲ್ಲಿ ಭಿನ್ನಾಭಿಪ್ರಾಯವಿದೆ ಎಂದರು.

ಹುಟ್ಟು ಆಕಸ್ಮಿಕ, ಸಾವು ಖಚಿತ ಎಂಬ ಸಂಗತಿ ತಿಳಿದಿದ್ದರೂ ಸಹ ನಾನು ನನ್ನದು ಎಂಬುದು ಈಗಲೂ ಇದೆ. ಇದರ ಬಗ್ಗೆ ಸೃಷ್ಟಿಯಲ್ಲಿರುವ ಯಾವ ಪ್ರಾಣಿಗಳು ಚಿಂತಿಸುವುದಿಲ್ಲ. ಕೇವಲ ಮನುಷ್ಯ ಎಂಬ ಪ್ರಾಣಿ ಮಾತ್ರ ದ್ವೇಷ ಸಾಧಿಸುತ್ತಾನೆ. 21ನೇ ಶತಮಾನವಾದರೂ 12ನೇ ಶತಮಾನಕ್ಕೆ ಹೋಲಿಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಏಕೆಂದರೆ ಹೊಸ ಆವಿಷ್ಕಾರ, ಚಿಂತನೆಗಳು, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬಂದ ನಂತರ ಸಮಾಜ ಒಗ್ಗೂಡಿಸುವ ಬದಲು ಒಡೆಯುವ ಕಾರ್ಯ ಹೆಚ್ಚಾಗುತ್ತಿದೆ ಎಂದರು.

ರಾಜಕೀಯ ಎಂಬುದು ಭಗವಂತನ ಸೃಷ್ಟಿಯಲ್ಲ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುವ ಸಲುವಾಗಿ ಜನರು ಧರಿಸುವ ಬಟ್ಟೆ ಟೋಪಿ ಹಾಗೂ ಇನ್ನಿತರ ವಿಚಾರಗಳನ್ನು ಮುಂದಿಟ್ಟುಕೊಂಡು ಬೇರ್ಪಡಿಸುತ್ತಿದ್ದಾರೆ. ಕೊರೊನಾ ಹಿನ್ನೆಲೆ ಕಳೆದ ಎರಡು ವರ್ಷಗಳಿಂದ ದೇಶ ಅಭಿವೃದ್ಧಿಯಾಗಿಲ್ಲ. ಸುಧಾರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಬೇಡದ ವಿಚಾರಗಳನ್ನು ಚರ್ಚಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸೌಹಾರ್ದ ಭೋಜನ ಕೂಡ ಏರ್ಪಡಿಸಲಾಗಿತ್ತು. ಕುದೇರು ಮಠದ ಗುರುಶಾಂತ ಸ್ವಾಮೀಜಿ, ಸರ್‌ಖಾಜಿ ಉಸ್ಮಾನ್ ಶರೀಫ್, ಫಾದರ್ ಫಿಲಿಪ್ಸ್ ಲೋಬೋ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಶಫಿ ಸೇರಿದಂತೆ ಇನ್ನಿತರರು ಇದ್ದರು.

ಪಿಎಸ್‌ಐ ಸಮವಸ್ತ್ರ ಧರಿಸಿದ್ದ ಕಾನ್‌ಸ್ಟೇಬಲ್ ಸಸ್ಪೆಂಡ್



ಬೆಂಗಳೂರು, ಮೇ 5– ನೇಮಕಾತಿ ಆದೇಶ ಹೊರಬೀಳುವ ಮುನ್ನವೇ ಖಾಕಿ ಸಮವಸ್ತ್ರ ಧರಿಸಿ ಶಿಸ್ತು ಉಲ್ಲಂಘಿಸಿದ್ದ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಕೇಂದ್ರ ವಿಭಾಗದ ಡಿಸಿಪಿ ಅನುಚೇತ್ ಅಮಾನತು ಮಾಡಿದ್ದಾರೆ. ವಿವೇಕನಗರ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ಬಸನಗೌಡ ಕರೇಗೌಡ ಅಮಾನತುಗೊಂಡಿದ್ದಾರೆ. ಇತ್ತೀಚೆಗೆ ನಡೆದ ಪಿಎಸ್‌ಐ ಪರೀಕ್ಷೆಯಲ್ಲಿ ಬಸನಗೌಡ ಆಯ್ಕೆಯಾಗಿದ್ದರು.

ನೇಮಕಾತಿ ಆದೇಶ ಪ್ರತಿ ಸಿಗುವ ಮೊದಲೇ ಸಮವಸ್ತ್ರ ಧರಿಸಿ ಊರಿನಲ್ಲಿ ಪ್ರಚಾರ ಗಿಟ್ಟಿಸಿಕೊಂಡಿದ್ದರು. ಕಾನ್‌ಸ್ಟೇಬಲ್ ಹುದ್ದೆಗೆ ರಾಜೀನಾಮೆ ನೀಡದೆ, ಪಿಎಸ್‌ಐ ಬಟ್ಟೆ ಧರಿಸಿದ್ದರು. ಪೊಲೀಸ್ ನಿಯಮಾವಳಿಯನ್ನು ಉಲ್ಲಂಘನೆ ಮಾಡಿದ್ದರಿಂದ ಸಸ್ಪೆಂಡ್ ಮಾಡಲಾಗಿದೆ

ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆ



ಮೈಸೂರು,ಮೇ.5(ಜಿಎ)– ಇಂದಿನ ಪೀಳಿಗೆಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಯಾವುದೂ ಪೂರ್ಣವಾಗಿ ಗೊತ್ತಿಲ್ಲದ ಸ್ಥಿತಿ ಇದೆ ಎಂದು ಮೈಸೂರು ಜಿಲ್ಲಾ ಕನ್ನಡ ಜಗೃತ ಸಮಿತಿ ಸದಸ್ಯೆ ಡಾ. ವಿನೋದಮ್ಮ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ರನ್ನ, ಪಂಪ, ಬಸವಣ್ಣ, ಕುವೆಂಪು ಹಾಗೂ ದ.ರಾ.ಬೇಂದ್ರೆ ಸೇರಿದಂತೆ ಅನೇಕ ಮಹನೀಯರು ಕನ್ನಡವನ್ನು ಉಳಿಸಲು ಶ್ರಮಿಸಿದರು. ಅದರಂತೆ ಅಂದಿನಿಂದ ಇಂದಿಗೂ ಕನ್ನಡವನ್ನು ಉಳಿಸಲು ಹೋರಾಟ ನಡೆಸುತ್ತಿದ್ದೇವೆ ಹಾಗೂ ಕರ್ನಾಟಕ ಏಕೀಕರಣಗೊಂಡ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ರಚನೆಯಾಗಿದೆ ಮತ್ತು ಇದಕ್ಕಾಗಿಯೂ ಅನೇಕ ಮಹನೀಯರು ಶ್ರಮಿಸಿದ್ದಾರೆ ಎಂದರು.

ಕನ್ನಡದ ಬೆಳವಣಿಗೆಗೆ ಮೈಸೂರಿನ ರಾಜಮನೆತನದ ಕೊಡುಗೆಯೂ ಇದ್ದು, ಕೆಂಪರಾಜಮ್ಮಣ್ಣಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಅವಧಿಯಲ್ಲಿ ಅನೇಕ ಯೋಜನೆಗಳನ್ನು ನೀಡಿದ್ದಾರೆ. ಅದರಂತೆ ಅಂದಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿಶೇಷ ಸಂಸ್ಥೆಗಳನ್ನು ನಿರ್ಮಿಸಿದ್ದರು ಎಂದರು.

ಇಂದಿನ ಕಾನ್ವೆಂಟ್ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಇತ್ತ ಕನ್ನಡವು ಪೂರ್ಣವಾಗಿ ಗೊತ್ತಿಲ್ಲ. ಅತ್ತ ಇಂಗ್ಲೀಷ್ ಸಹ ಗೊತ್ತಿಲ್ಲದ ಸ್ಥಿತಿ ಎದುರಾಗಿದೆ. ಇದಕ್ಕೆ ಮುಖ್ಯ ಕಾರಣ ಪ್ರಾಧ್ಯಾಪಕರು. ರಾಜ್ಯದಲ್ಲಿ ಪ್ರಾಧ್ಯಾಪಕರು ಸರಿಯಾಗದೇ, ವಿದ್ಯಾರ್ಥಿಗಳು ಸರಿಯಾಗುವುದಿಲ್ಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕವಿಯತ್ರಿ ಡಾ.ಡಿ. ಸುಮಂಗಲ, ಕನ್ನಡ ಸಹೃದಯ ಬಳಗ ಮಾಜಿ ಅಧ್ಯಕ್ಷ ರಂಗಧಾಮಯ್ಯ, ಲತಾ ಮೋಹನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಾವಿನ ಅಂಚಿನಲ್ಲಿದ್ದ ಚಿರತೆಯನ್ನು ರಸ್ತೆಯಲ್ಲೇ ಕಚ್ಚಿ ಕಿತ್ತು ತಿಂದ ಕಾಡು ಹಂದಿಗಳು!



ಚಾಮರಾಜನಗರ: ರಸ್ತೆ ಅಪಘಾತದಲ್ಲಿ ಸಾವಿನ ಅಂಚಿನಲ್ಲಿದ್ದ ಚಿರತೆಯನ್ನು ಮೂರು ಕಾಡುಹಂದಿಗಳು ನಡುರಸ್ತೆಯಲ್ಲೇ ಎಳೆದಾಡಿಕೊಂಡು ಕಚ್ಚಿ ತಿನ್ನುತ್ತಿರುವ ವೀಡಿಯೋ ನೆಟ್ಟಿಗರನ್ನು ಬೆಚ್ಚಿ ಬೀಳಿಸಿದೆ. ಇಂತಹ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಹಾಸನೂರು – ಕೊಳ್ಳೇಗಾಲ ರಸ್ತೆಯಲ್ಲಿ ಈ ಪ್ರಕರಣ ನಡೆದಿದೆ ಎಂದು ಹೇಳಲಾಗುತ್ತಿದೆ.

ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು, ಇನ್ನೇನು ಸಾವಿನ ಅಂಚಿನಲ್ಲಿ ನರಳುತ್ತಾ ಬಿದ್ದಿದ್ದ ಚಿರತೆಯನ್ನು ಮೂರು ಕಾಡುಹಂದಿಗಳು ನಡುರಸ್ತೆಯಲ್ಲಿ ಎಳೆದಾಡಿ ತಿನ್ನುತ್ತಿರುವುದು ನೋಡುಗರ ಬೆಚ್ಚಿ ಬೀಳಿಸಿದೆ. ಎರಡು ಕಡೆ ವಾಹನಗಳು ಸಾಲುಗಟ್ಟಿ ನಿಂತು, ಭಾರೀ ಸದ್ದು ಮಾಡುವಂತೆ ಹಾರ್ನ್ ಮಾಡಿದರೂ ಲೆಕ್ಕಿಸದೆ, ಕಾಡುಹಂದಿಗಳು ಆವೇಶಭರಿತವಾಗಿಯೇ ತಿಂದು ತೇಗಿವೆ. ವನ್ಯಜೀವಿ ಪ್ರಿಯರೂ ಇಂತಹ ಒಂದು ಚಿತ್ರಣಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಹಾಸನೂರು – ಕೊಳ್ಳೇಗಾಲ ರಸ್ತೆಯಲ್ಲಿ ನಡೆದಿದೆ ಎಂದು ರಾಜ್ಯದ ಅರಣ್ಯ ಇಲಾಖೆ, ಅರಣ್ಯಾಧಿಕಾರಿಗಳನ್ನು ಟ್ಯಾಗ್ ಮಾಡಿ ಪತ್ರಕರ್ತೆ ಬೋಸ್ನೆ ಖನ್ನಾ ಟ್ವೀಟ್ ಮಾಡಿದ್ದಾರೆ.

ಮೇ 9ಕ್ಕೆ 'ಗೃಹ ಶೋಭೆ' ಮುಕ್ತಾಯ



ಮೈಸೂರು, ಮೇ 5–"ಗೃಹಶೋಭೆ" ಅಂತಾರಾಷ್ಟ್ರೀಯ ಗೃಹಬಳಕೆ ವಸ್ತುಗಳ ಅತಿದೊಡ್ಡ ಪ್ರದರ್ಶನ ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ನಡೆಯುತ್ತಿದ್ದು, ಮೇ 9ರಂದು ಮುಕ್ತಾಯಗೊಳ್ಳಲಿದೆ. ಪ್ರದರ್ಶನವು ಪ್ರತಿ ದಿನ ಬೆಳಗ್ಗೆ 11 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ನಡೆಯಲಿದೆ.

ಈ ವಸ್ತುಪ್ರದರ್ಶನದಲ್ಲಿ 150ಕ್ಕೂ ಹೆಚ್ಚು ಮಳಿಗೆಗಳಿದ್ದು, ವಿವಿಧ ಬಗೆಯ ಪೀಠೋಪಕರಣಗಳು, ಇಲೆಕ್ಟ್ರಾನಿಕ್ ಉಪಕರಣಗಳು, ಮಿಕ್ಸ್, ಗ್ರೈಂಡರ್ಸ್, ರೆಫ್ರಿಜರೇಟರ್ಸ್, ಜ್ಯೂಸ್‌ರ್ಸ್, ವಾಟರ್ ಪ್ಯೂರಿಫೈಯರ್ಸ್, ತರಕಾರಿ ಹೆಚ್ಚುವ ಉಪಕರಣಗಳಂತಹ ಗೃಹಬಳಕೆ ವಸ್ತುಗಳ ಜೊತೆಗೆ ಹೇರ್ ಡ್ರೈಯರ್ಸ್, ಹೇರ್ ಸ್ಟ್ರೈಟ್ನರ್ಸ್, ಬಾಡಿ ಮಸಾಜರ್ಸ್ ಮತ್ತು ಸೋಲಾರ್ ಉತ್ಪನ್ನಗಳು ಹಾಗೂ ಮುಂತಾದ ಅತ್ಯುಪಯುಕ್ತ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಈ ಪ್ರದರ್ಶನದಲ್ಲಿ ವಿಶೇಷ ಆಕರ್ಷಣೆಯಾಗಿ ಪ್ರಾಣಿ ಸಾಮ್ರಾಜ್ಯ (ಅನಿಮಲ್ ಕಿಂಗ್‌ಡಂ) ಪ್ರದರ್ಶಿಸಲಾಗಿದೆ. ಇದರಲ್ಲಿ ರೋಬೋಟ್ ತಂತ್ರಜ್ಞಾನದ ಮೂಲಕ ಪ್ರಾಣಿಗಳ ನೈಜ್ಯತೆಯನ್ನು ಸೃಷ್ಟಿಸಲಾಗಿದೆ. ರುಚಿಕರ ತಿಂಡಿ–ತಿನಿಸುಗಳ ಸ್ಟಾಲ್‌ಗಳು ಈ ಗೃಹಶೋಭೆಯ ಮತ್ತೊಂದು ಆಕರ್ಷಣೆ. ಮಕ್ಕಳ ಮನೋರಂಜನೆಗಾಗಿ ಆಟಿಕೆಗಳು ಕೂಡ ಇವೆ.

ಕನ್ನಡದ ಕೋಟ್ಯಾಧಿಪತಿ ಖ್ಯಾತಿಯ ಲೈನ್‌ಮನ್ ಆತ್ಮಹತ್ಯೆ



ಬೀಳಗಿ(ಬಾಗಲಕೋಟೆ), ಮೇ 5– ಕನ್ನಡದ ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನಪ್ರಿಯತೆ ಗಳಿಸಿದ್ದ, ಟಿಕ್‌ಟಾಕ್, ಹಾಸ್ಯ, ಸಂಗೀತದ ಮೂಲಕ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಬೀಳಗಿ ಹೆಸ್ಕಾಂ ಲೈನ್‌ಮನ್ ತಿಮ್ಮಣ್ಣ ಭೀಮಪ್ಪ ಗುರಡ್ಡಿ(27) ಆತ್ಮಹತ್ಯೆಗೆ ಶರಣಾಗಿದ್ದಾರೆ.

ನಟ ರಮೇಶ್ ಅರವಿಂದ್ ಅವರು ನಡೆಸಿಕೊಡುತ್ತಿದ್ದ ಕನ್ನಡದ ಕೋಟ್ಯಾಧಿಪತಿಯಲ್ಲಿ ಭಾಗವಹಿಸಿದ್ದ ತಿಮ್ಮಣ್ಣ 6.40 ಲಕ್ಷ ರೂ. ಗೆದ್ದಿದ್ದರು. ಓದಿದ್ದು ಎಸ್ಸೆಸ್ಸೆಲ್ಸಿ ಆದರೂ ಅಪಾರ ಜ್ಞಾನ ಇತ್ತು. ಟಿಕ್‌ಟಾಕ್, ಹಾಸ್ಯ, ಸಂಗೀತದಲ್ಲೂ ನಿಪುಣರಾಗಿದ್ದ ತಿಮ್ಮಣ್ಣ, ಖೋ ಖೋ ಕ್ರೀಡಾಪಟು ಕೂಡ. ಗ್ರಾಮದ ಮಕ್ಕಳಿಗೆ ಖೋಖೋ ತರಬೇತಿಯನ್ನೂ ಕೊಡುತ್ತಿದ್ದರು. ಊರಲ್ಲಿ ನೂತನವಾಗಿ ಮನೆಯನ್ನು ನಿರ್ಮಿಸಿದ್ದರು. ಇನ್ನೊಂದು ತಿಂಗಳಲ್ಲಿ ಮದುವೆ ನಿಶ್ಚಯ ಆಗುವ ಸಾಧ್ಯತೆಯೂ ಇತ್ತು ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇಂದು ಅವರ ನೂತನ ಮನೆಯ ಗೃಹಪ್ರವೇಶ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಬೇಕಿತ್ತು. ಇದಕ್ಕೂ 2 ದಿನ ಮೊದಲೇ ತಿಮ್ಮಣ್ಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ತಂದೆ ಚಿಕಿತ್ಸೆ ಹಾಗೂ ಮನೆ ನಿರ್ಮಾಣಕ್ಕೆ ಮಾಡಿದ ಸಾಲದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆಯಾದರೂ ಇದನ್ನು ತಿಮ್ಮಣ್ಣರ ಸ್ನೇಹಿತರು ಅಲ್ಲಗಳೆದಿದ್ದಾರೆ. ಗೃಹಪ್ರವೇಶಕ್ಕೆ ಮುನ್ನಾ ದಿನವೇ ನೀವೆಲ್ಲ ಬರಬೇಕು, ನೀವೆ ನಿಂತು ಉಸ್ತುವಾರಿ ವಹಿಸಿಕೊಂಡು ಮಾಡ್ರಪ್ಪ ಪ್ರೋಗ್ರಾಂ ಚೆನ್ನಾಗಿ ಆಗ್ಬೇಕು ಅಂದ್ರೆ ನೀವೆಲ್ಲಾ ನನಗೆ ಬಲವಾಗಿ ನಿಲ್ಲಬೇಕು. ತಡ ಮಾಡ್ಬೇಡ್ರಪ್ಪಾ' ಎಂದಿದ್ದರೆಂದು ಗೆಳೆಯರಾದ ಶಿವು ಕೋಲಕಾರ ಮತ್ತು ಉಮೇಶ್ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಕಸಾಪ ಸಂಸ್ಥಾಪನಾ ದಿನಾಚರಣೆ



ಮಡಿಕೇರಿ, ಮೇ 5– ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆಯನ್ನು ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷ ನವೀನ್ ಅಂಬೆಕಲ್ಲು ಅಧ್ಯಕ್ಷತೆಯಲ್ಲಿ ನಗರದ ಎಸ್‌ಜೆಎಸ್‌ವೈ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಎಂ.ಪಿ.ಕೇಶವ ಕಾಮತ್, ಕನ್ನಡ ಭಾಷೆ, ಅಭಿವೃದ್ಧಿ ಮತ್ತು ಬೆಳವಣಿಗೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ. ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ವಿಶ್ವವಿದ್ಯಾನಿಲಯ, ಕನ್ನಂಬಾಡಿ ಕಟ್ಟೆ(ಕೆಆರ್‌ಎಸ್), ಭದ್ರಾವತಿಯಲ್ಲಿ ಕಾಗದ ಕಾರ್ಖಾನೆ, ಮೈಸೂರು ಬ್ಯಾಂಕ್, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಹೀಗೆ ಹತ್ತು ಹಲವಾರು ಸಾಮಾಜಿಕ, ಶೈಕ್ಷಣಿಕ ಹಾಗೂ ಕೈಗಾರಿಕಾ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ ಎಂದು ಅವರು ಸ್ಮರಿಸಿದರು.

ಸಾಹಿತಿ ಬಿ.ಎ.ಷಂಶುದ್ದೀನ್ ಮಾತನಾಡಿ, ಕನ್ನಡ ನಾಡು ಹತ್ತು ಹಲವು ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ಕಾಲದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ್ದ 'ಮೈಸೂರು ಸಂಪದಭ್ಯುದಯ ಸಮಾಜ'ವು ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಒಂದು ಸಂಸ್ಥೆಯ ಅಗತ್ಯವಿದೆ ಎಂದು ಅರಿತು ಮೇ 5, 1915 ರಲ್ಲಿ ಬೆಂಗಳೂರಿನ ಸರ್ಕಾರಿ ಹೈಸ್ಕೂಲ್‌ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ 'ಕರ್ನಾಟಕ ಸಾಹಿತ್ಯ ಪರಿಷತ್ತು' ಉದಯವಾಯಿತು ಎಂದು ಅವರು ಸ್ಮರಿಸಿದರು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರಾಗಿ ಎಚ್.ವಿ.ನಂಜುಂಡಯ್ಯ ಅವರು ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ಎಂ.ಶ್ಯಾಮರಾವ್ ಅವರು ಆಯ್ಕೆಯಾಗಿದ್ದರು. ಎಚ್.ವಿ.ನಂಜುಂಡಯ್ಯ ಅವರು 1915 ರಿಂದ 1920 ರವರೆಗೆ ಅಧ್ಯಕ್ಷರಾಗಿದ್ದರು. ಅನಂತರ ಸರ್.ಎಂ.ಕಾಂತರಾಜೇ ಅರಸ್, ಶ್ರೀ ಕಂಠೀರವ ನರಸಿಂಹರಾಜ ಒಡೆಯರ್, ಶ್ರೀ ಜಯಚಾಮರಾಜ ಒಡೆಯರ್, ಹೀಗೆ ಹಲವಾರು ಅಧ್ಯಕ್ಷರಾಗಿ ಕನ್ನಡ ಸಾಹಿತ್ಯ, ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾಗಿ 55 ವರ್ಷಗಳ ಬಳಿಕ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜನ್ಮ ತಳೆದಿದ್ದು, ಗಮನಾರ್ಹ. 1970 ರಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂದಿತು. ಮೊದಲ ಅಧ್ಯಕ್ಷರಾಗಿ ಡಿ.ಜೆ.ಪದ್ಮನಾಭ ಅವರು ಕಾರ್ಯ ನಿರ್ವಹಿಸಿದರು. ನಂತರ ಎಂ.ಎಸ್.ಪೂವಯ್ಯ, ಎಸ್.ಜಿ.ರಾಜಶೇಖರ್, ಟಿ.ಪಿ.ರಮೇಶ್, ಲೋಕೇಶ್‌ಸಾಗರ್, ಅಧ್ಯಕ್ಷರಾದರು. ಈಗ ಕೇಶವ ಕಾಮತ್ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಚಟುವಟಿಕೆಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಬಿ.ಎ.ಷಂಶುದ್ದೀನ್ ಅವರು ವಿವರಿಸಿದರು.

ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಜಿಲ್ಲೆಯಲ್ಲಿ ಕಸಾಪ ಸದಸ್ಯರ ಸಂಖ್ಯೆಯನ್ನು ಹತ್ತು ಸಾವಿರಕ್ಕೆ ಏರಿಸುವ ಗುರಿ ಹೊಂದಲಾಗಿದೆ. ಹಾಗೆಯೇ 50 ದತ್ತಿನಿಧಿ ಪ್ರಶಸ್ತಿಗಳನ್ನು ಹೆಚ್ಚಿಸಬೇಕೆಂದು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಯರು, ಮಕ್ಕಳು, ಯುವಜನರು ಸೇರಿದಂತೆ ಕನ್ನಡ ಸಾಹಿತ್ಯ ಬೆಳವಣಿಗೆಗೆ ಹಲವು ಕಾರ್ಯಕ್ರಮಗಳ ಮೂಲಕ ಪ್ರೋತ್ಸಾಹಿಸುತ್ತಿದೆ. ಕೊಡಗಿನ ಗೌರಮ್ಮ ಪ್ರಶಸ್ತಿಯನ್ನು ಸ್ಥಾಪಿಸುವ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ತೊಡಗಿಸಿಕೊಳ್ಳುವಂತಾಗಲು ಪ್ರೋತ್ಸಾಹಿಸಲಾಗುತ್ತಿದೆ ಎಂದು ಅವರು ಹೇಳಿದರು.

ಸಾಹಿತಿ ಬಿ.ಆರ್.ಜೋಯಪ್ಪ ಮಾತನಾಡಿ, ಸಾಹಿತ್ಯ ಬರವಣಿಗೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತಾಗಬೇಕು. ಬರವಣಿಗೆಯಲ್ಲಿ ವಿಮರ್ಶೆಯು ಸಹ ಅಗತ್ಯ ಎಂದರು.

ಬಾಳೆಯಡ ಕಿಶನ್ ಪೂವಯ್ಯ ಅವರು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ಶಾಲಾ ಕಾಲೇಜುಗಳಲ್ಲಿ ಹೆಚ್ಚು ನಡೆಯುವಂತಾಗಬೇಕು. ಯುವ ಜನರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತಾಗಬೇಕು ಎಂದರು.

ಅಭಿನಯ ಕಲಾ ಮಿಲನ ಚಾರಿಟೆಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಮಿಲನ ಭರತ್ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಕನ್ನಡ ಭಾಷೆಯನ್ನು ಬಳಸುವ ಮೂಲಕ ಬೆಳೆಸುವಂತಾಗಬೇಕು ಎಂದು ಕರೆ ನೀಡಿದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ನವೀನ್ ಅಂಬೆಕಲ್ಲು ಅವರು ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತು 108ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಅಭಿನಯ ಕಲಾ ಮಿಲನ ಚಾರಿಟೆಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಮಿಲನ ಭರತ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಣಿ ಮಾಚಯ್ಯ, ಕಾವೇರಮ್ಮ ಸೋಮಣ್ಣ, ಕಾಲೂರು ನಾಗೇಶ್, ಕುಡೆಕಲ್ ಸಂತೋಷ್, ಮುನೀರ್ ಅಹ್ಮದ್, ಕಸಾಪ ಗೌರವ ಕಾರ್ಯದರ್ಶಿ ರೇವತಿ ರಮೇಶ್, ಮಂಡುವಂಡ ಬಿ. ಜೋಯಪ್ಪ ಇತರರು ಇದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ 108 ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಸಾಹಿತ್ಯ ಪರಿಷತ್ತು ಕಚೇರಿ ಆವರಣದಲ್ಲಿ ಕನ್ನಡ ಧ್ವಜಾರೋಹಣವನ್ನು ತಾಲೂಕು ಘಟಕದ ಅಧ್ಯಕ್ಷ ನವೀನ್ ಅಂಬೆಕಲ್ಲು ನೆರವೇರಿಸಿದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ 4.50 ಕೋಟಿ ರೂ.ಉಳಿತಾಯ ಬಜೆಟ್

ಮಡಿಕೇರಿ, ಮೇ 5– ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2022–23 ನೇ ಸಾಲಿನಲ್ಲಿ 4.50 ಕೋಟಿ ರೂ. ಉಳಿತಾಯ ಬಜೆಟ್‌ನ್ನು ಅಧ್ಯಕ್ಷರಾದ ಕೆ.ಎಸ್.ರಮೇಶ್ ಹೊಳ್ಳ ಅವರು ಮಂಡಿಸಿದರು. ಇತ್ತೀಚೆಗೆ ನಡೆದ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಶಾಸಕರಾದ ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಇತರರ ಉಪಸ್ಥಿತಿಯಲ್ಲಿ ವಾರ್ಷಿಕ ಬಜೆಟ್‌ನ್ನು ಮಂಡಿಸಿದರು.

ಮಡಿಕೇರಿ ನಗರ ಸ್ಥಳೀಯ ಪ್ರದೇಶದ ಮಹಾಯೋಜನೆಯನ್ನು ಮುಂದಿನ ಹತ್ತು ವರ್ಷದ ಅವಧಿಗೆ ಸಿದ್ಧಪಡಿಸುವ ಪ್ರಸ್ತಾವನೆಯನ್ನು ಸಭೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮಂಡಿಸಿದರು. ನಗರಸಭೆ, ಲೋಕೋಪಯೋಗಿ, ಸೆಸ್ಕ್, ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹೀಗೆ ಎಲ್ಲರ ಸಹಕಾರದೊಂದಿಗೆ ಮಹಾಯೋಜನೆಯನ್ನು ಪರಿಷ್ಕರಿಸಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಮಹಾಯೋಜನೆಗೆ ಸಾರ್ವಜನಿಕರಿಂದ ಸ್ವೀಕರಿಸಿದ ಸಲಹೆ ಸೂಚನೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ರಸ್ತೆ ಅಗಲೀಕರಣ ಮತ್ತು ಕಟ್ಟಡ ರೇಖೆಯನ್ನು ಕ್ರಮ ಮಾಡುವುದು, ಕಂದಾಯ ಇಲಾಖೆಯಿಂದ ಸುತ್ತೋಲೆ ಹೊರಡಿಸಿರುವಂತೆ ತೋಟದಲ್ಲಿ ಮನೆ ನಿರ್ಮಿಸಲು ಅವಕಾಶ ಮಾಡುವುದು, ಕೃಷಿ ಜಮೀನಿನಲ್ಲಿ ಬರುವ ಪ್ರದೇಶದಲ್ಲಿ 20 ಸೆಂಟ್ ಗರಿಷ್ಠ ಮನೆ, ವಸತಿಗೆ ಭೂ ಪರಿವರ್ತನೆಗೆ ಅವಕಾಶ ಮಾಡುವುದು, ರಾಜಕಾಲುವೆ ಒತ್ತುವರಿ ಮಾಡದಂತೆ ಬಫರ್ ಜೋನ್ ನಿಗದಿಪಡಿಸುವುದು, ಮನೆ ನಿರ್ಮಿಸುವಾಗ ನಾಲ್ಕುಚಕ್ರ ವಾಹನ ನಿಲುಗಡೆಗೆ ಸೆಲ್ಲರ್ ಕಾಯ್ದಿರಿಸುವುದು, 240 ಚದರ ಮೀಟರ್ ಒಳಗೆ ನಿವೇಶನ ಇದ್ದರೂ ಸಹ ನಾಲ್ಕು ಚಕ್ರದ ವಾಹನ ನಿಲುಗಡೆಗೆ ಜಾಗ ಕಾಯ್ದಿರಿಸುವುದು, 240 ಚದರ ಮೀಟರ್‌ಗಿಂತ ಹೆಚ್ಚು ನಿವೇಶನ ಇದ್ದಲ್ಲಿ ವಾಹನ ನಿಲುಗಡೆ ನೆಲಮಹಡಿ ವ್ಯವಸ್ಥೆ ಮಾಡುವುದು, ನಂತರ ಮನೆ ನಿರ್ಮಿಸುವುದು(ಜಿ+2) ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಿಎ ನಿವೇಶನ ಬಗ್ಗೆ ಚರ್ಚಿಸಲಾಯಿತು. ಸಿಎ ನಿವೇಶನಕ್ಕಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವೈದ್ಯಕೀಯ ಇಲಾಖೆಯಿಂದ ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಪೂವಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಆರ್.ವೆಂಕಟೇಶ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಲಾವಣ್ಯ, ಪೌರಾಯುಕ್ತರಾದ ರಾಮದಾಸ್, ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟೇಶ್, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕರಾದ ಗೀತಾ, ವಿಶೇಷ ಆಹ್ವಾನಿತರು ಇತರರು ಇದ್ದರು.

ತೆರಾಲ್ ಗ್ರಾಮದಲ್ಲಿ ಸಿಎನ್‌ಸಿಯಿಂದ ಕೊಡವ ಜಾಗೃತಿ ಸಭೆ



ಮಡಿಕೇರಿ,ಮೇ 5– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಮರೆನಾಡಿನ ತೆರಾಲ್ ಗ್ರಾಮದಲ್ಲಿ 'ಮಂದ್ ಕಾನ್ ಕ್ಲೇವ್' ನಡೆಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೊಡವರ ಹಕ್ಕುಗಳ ಕುರಿತು ನಿರ್ಣಯ ಮಂಡಿಸಲಾಯಿತು. ಕೊಡವ ಜನಾಂಗವನ್ನು ಈ ಮಣ್ಣಿನ ಆದಿಮ ವಿಶಿಷ್ಟ ಬುಡಕಟ್ಟು ಜನಾಂಗವೆಂದು ಗುರುತಿಸಬೇಕು, ಸಂವಿಧಾನದ 371ನೇ ವಿಧಿಯಡಿಯಲ್ಲಿ ಕೊಡವ ಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆ ನೀಡಬೇಕು, ಆರ್ಟಿಕಲ್ 25 ಮತ್ತು 26 ರ ಅಡಿಯಲ್ಲಿ ಕೊಡವ 'ಧಾರ್ಮಿಕ ಸಂಸ್ಕಾರ ಗನ್'ಗೆ ಸಂವಿಧಾನದ ರಕ್ಷಣೆ ನೀಡಬೇಕು, ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಕೊಡವ ಭಾಷೆಯನ್ನು ಸೇರಿಸಬೇಕು, ಉಜ್ವಲವಾದ ಕೊಡವ ಜಾನಪದ ಸಾಂಸ್ಕೃತಿಕ ಪರಂಪರೆಯನ್ನು ಯುನೆಸ್ಕೋದ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿ ಸರಕಾರದ ಗಮನ ಸೆಳೆಯಲು ನಿರ್ಣಯಿಸಲಾಯಿತು.

ಬೊಟ್ಟಂಗಡ ಸವಿತಾ ಗಿರೀಶ್, ಬೊಜ್ಜಂಗಡ ಚಂಪಾನಂದ, ಬೊಜ್ಜಂಗಡ ಅಂಚಲ್, ಬುಟ್ಟಿಯಂಡ ಲೀನಾ ಬೊಳ್ಳಮ್ಮ, ಬೊಟ್ಟಂಗಡ ಮುತ್ತಪ್ಪ, ಕಿರಿಯಮಾಡ ಶೆರಿನ್, ಬೊಳ್ಳೇರ ಮುತ್ತಣ್ಣ, ಮುಕಳಮಾಡ ವೀಟು, ಬೊಟ್ಟಂಗಡ ಪೆಮ್ಮಯ್ಯ, ಬೊಟ್ಟಂಗಡ ಮಹೇಶ್, ಬೊಟ್ಟಂಗಡ ಬೋಪಣ್ಣ, ಬೊಟ್ಟಂಗಡ ದೇವಯ್ಯ ಉಪಸ್ಥಿತರಿದ್ದು ಒಗ್ಗಟ್ಟು ಮತ್ತು ಶಾಂತಿಯುತ ಹೋರಾಟದ ಕುರಿತು ಪ್ರಮಾಣವಚನ ಸ್ವೀಕರಿಸಿದರು. ಬೊಟ್ಟಂಗಡ ಗಿರೀಶ್ ಸ್ವಾಗತಿಸಿ, ಬಲ್ಯಮೇದೇರಿರ ರಾಜಾ ವಂದಿಸಿದರು.

ಇಂದು ಮಾದಪಟ್ಟಣದಲ್ಲಿ ಕುಂಭಾಭಿಷೇಕ

ಗುಡ್ಡೆಹೊಸೂರು, ಮೇ 5– ಇಲ್ಲಿಗೆ ಸಮೀಪದ ಮಾದಪಟ್ಟಣ ಗ್ರಾಮದಲ್ಲಿ ಶ್ರೀ ಕಾಶಿ ವಿಶ್ವನಾಥ ಮತ್ತು ಶ್ರೀ ಜೋಡಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಕುಂಭಾಭಿಷೇಕ ಮೇ 6ರಂದು ನಡೆಯಲಿದೆ 2 ದಿನಗಳಿಂದ ದೇವಸ್ಥಾನದಲ್ಲಿ ವಿವಿಧ ಹೋಮ ಹವನ ನಡೆಯುತ್ತಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ. ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ದೇವಸ್ಥಾನ ಸಮಿತಿ ಅಧ್ಯಕ್ಷ ಎಂ.ಎಸ್.ನಾಗೇಶ್ ಅಧ್ಯಕ್ಷತೆಯಲ್ಲಿ ನಡೆಯುವ ಸಭಾ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಉದ್ಘಾಟಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಶಾಸಕರಾದ ಅಪ್ಪಚ್ಚು ರಂಜನ್, ಕೆಜಿ.ಬೋಪಯ್ಯ, ಸಂಸದ ಪ್ರತಾಪ್ ಸಿಂಹ, ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯ ಪಡೆಯ ಅಧ್ಯಕ್ಷ ರವಿಕುಶಾಲಪ್ಪ, ವಿಧಾನಪರಿಷತ್ ಸದಸ್ಯರಾದ ಸುಜಾ ಕುಶಾಲಪ್ಪ ವೀಣಾ ಅಚ್ಚಯ್ಯ, ಡಿಸಿ ಬಿಸಿಸತೀಶ್, ಜಿಲ್ಲಾ ಎಸ್ಪಿ ಎಂ.ಎ. ಅಯ್ಯಪ್ಪ ತಹಸಿಲ್ದಾರ್ ಪ್ರಕಾಶ್, ಮಾಜಿ ಸಚಿವ ಬಿ.ಎ.ಜೀವಿಜಯ ಇತರರು ಭಾಗವಹಿಸಲಿದ್ದಾರೆ.

ತಾಲೂಕು ಮಟ್ಟದ ಬೇಸಿಗೆ ಶಿಬಿರದ ಸಮಾರೋಪ



ಮಡಿಕೇರಿ, ಮೇ 5– ತಾಲೂಕು ಬಾಲಭವನ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಹಾಗೂ ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಕಾರದೊಂದಿಗೆ 8 ದಿನಗಳ ಕಾಲ ಮೂರ್ನಾಡುವಿನಲ್ಲಿ ನಡೆದ ಬೇಸಿಗೆ ಶಿಬಿರ ಸಮಾರೋಪ ಸಮಾರಂಭವನ್ನು ಶಿಬಿರದಲ್ಲಿ ಪಾಲ್ಗೊಂಡ ಮಕ್ಕಳ ತಾಯಂದಿರ ಪಾದ ಪೂಜೆ ಮಾಡುವುದರೊಂದಿಗೆ ವಿನೂತನವಾಗಿ ಹಮ್ಮಿಕೊಳ್ಳಲಾಯಿತು.

ಮೇ 8 ರಂದು ತಾಯಂದಿರ ದಿನಾಚರಣೆ ಇರುವುದರಿಂದ ಡಾ.ಮಹಾಬಲೇಶ್ವರ ಗಾವಂಕರ್ ಸ್ವಾಮಿಗಳ ಮಾರ್ಗದರ್ಶನದಲ್ಲಿ ಪಾದಪೂಜೆ ಕಾರ್ಯಕ್ರಮವು ನೆರವೇರಿತು, ಮಕ್ಕಳು ವಿವಿಧ ರೀತಿಯ ನೃತ್ಯಗಳೊಂದಿಗೆ ಸಭಿಕರನ್ನು ಮನೋರಂಜನೆಗೊಳಿಸಿದರು. 8 ದಿನದಲ್ಲಿ ತಯಾರಿಸಿದ ಕ್ರಾಫ್ಟ್, ಚಿತ್ರಕಲೆ, ಕಸದಿಂದ ರಸ ತಯಾರಿಸಿದ ವಸ್ತುಗಳ ಪ್ರದರ್ಶನ ಕೂಡ ನೆರವೇರಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಕ್ಕಳಿಗೆ ನೆನಪಿನ ಕಾಣಿಕೆ ಮತ್ತು ಪ್ರಶಸ್ತಿಯನ್ನು ನೀಡಲಾಯಿತು. ಗ್ರಾಪಂ ಅಧ್ಯಕ್ಷೆ ಸುಜಾತ ಚಂದ್ರಶೇಖರ್, ಗ್ರಾಪಂ ಸದಸ್ಯರಾದ ಲತಾ, ಪಿಡಿಒ ಚಂದ್ರಮೌಳಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅರುಂಧತಿ, ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಸುಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ಕುಮಾರಸ್ವಾಮಿ, ಮಹೇಶ್ ಕುಮಾರ್, ಕುಮಾರಿ ವರ್ಷಿಣಿ, ಮೇಲ್ವಿಚಾರಕಿ ಸವಿತ ಕೀರ್ತನ್, ಅಂಗನವಾಡಿ ಕಾರ್ಯಕರ್ತೆಯರಾದ ಜಯಂತಿ, ಚೈತ್ರ, ಭವ್ಯ, ಪ್ರಮೀಳ, ಭವಾನಿ, ಉಮಾವತಿ, ಸಹಾಯಕಿಯರಾದ ಜಯಂತಿ, ಪ್ರೇಮ, ಸರಸ್ವತಿ ಪಾಲ್ಗೊಂಡಿದ್ದರು.

ಕರ್ತವ್ಯಲೋಪ ಆರೋಪ: ಚಾ.ನಗರ ನಗರಸಭೆ ಕಂದಾಯಾಧಿಕಾರಿ ಅಮಾನತು



ಚಾಮರಾಜನಗರ, ಮೇ 5(ಎಸ್‌ಎಸ್)– ಚಾಮರಾಜನಗರ ನಗರಸಭೆಯಲ್ಲಿ ಸಾರ್ವಜನಿಕರಿಗೆ ಇ–ಆಸ್ತಿ, ಹಕ್ಕು ಬದಲಾವಣೆ, ಇ–ಸ್ವತ್ತು ನೀಡಲು ವಿಳಂಬ ಮಾಡಿ ಕರ್ತವ್ಯಲೋಪ ಎಸಗಿದ ಆರೋಪದ ಮೇರೆಗೆ ಕಂದಾಯಾಧಿಕಾರಿ ಜಯಶೀಲ ಅವರನ್ನು ಸೇವೆಯಿಂದ ಅಮಾನತು ಮಾಡಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ ಹೊರಡಿಸಿದ್ದಾರೆ.

ನಗರಸಭೆಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿರುವ ಬಗ್ಗೆ ಜಿಲ್ಲಾಡಳಿತಕ್ಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಸಭೆಗಳಲ್ಲಿ ದೂರು ಬಂದಿತ್ತು. ಈ ಬಗ್ಗೆ ತನಿಖೆ ನಡೆಸಲು ಖಾದಿ ಗ್ರಾಮೋದ್ಯೋಗ ಇಲಾಖೆಯ ಉಪನಿರ್ದೇಶಕರ ನೇತೃತ್ವದಲ್ಲಿ ಅಧಿಕಾರಿಗಳು ಹಾಗೂ ನೌಕರರ ತಂಡ ರಚಿಸಲಾಗಿತ್ತು. ಈ ತಂಡವು ತನಿಖೆ ನಡೆಸಿದಾಗ, ಕಂದಾಯಾಧಿಕಾರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಾರ್ವಜನಿಕರಿಗೆ ಇ–ಆಸ್ತಿ, ಹಕ್ಕು ಬದಲಾವಣೆ, ಇ–ಸ್ವತ್ತು ನೀಡಲು ವಿಳಂಬ ಮಾಡುತ್ತಿರುವುದು, ಪ್ರತಿಯೊಂದು ಕಡತದ ವಿಲೇವಾರಿಯಲ್ಲಿ ನಿಗದಿತ ಕಾಲಾವಧಿಗಿಂತ 8ರಿಂದ 10 ತಿಂಗಳು ಮತ್ತು ವರ್ಷಕ್ಕೂ ಹೆಚ್ಚು ಕಾಲ ವಿಳಂಬ ಮಾಡಿರುವುದು ಹಾಗೂ ಲೋಪದೋಷಗಳನ್ನು ಎಸಗಿರುವುದು ಕಂಡು ಬಂದಿತ್ತು. ಈ ಬಗ್ಗೆ ತನಿಖಾ ತಂಡವು ಏಪ್ರಿಲ್ 30ರಂದು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿತ್ತು. ವರದಿ ಆಧರಿಸಿದ ಜಿಲ್ಲಾಧಿಕಾರಿಗಳು ಕಂದಾಯಾಧಿಕಾರಿ ಜಯಶೀಲ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖೆ ವಿಚಾರಣೆಗೆ ಕಾಯ್ದಿರಿಸಿ, ಸರ್ಕಾರಿ ಸೇವೆಯಿಂದ ಅಮಾನತಿನಲ್ಲಿರಿಸಿ ಆದೇಶಿಸಿದ್ದಾರೆ.

ಜಲಜೀವನ್ ಮಿಷನ್ ಯೋಜನೆ ಪ್ರಗತಿಗೆ ಸಮುದಾಯದ ಸಹಭಾಗಿತ್ವ ಅಗತ್ಯ: ಸಿಇಓ



ಚಾಮರಾಜನಗರ, ಮೇ 5– ಜಲ ಜೀವನ್ ಮಿಷನ್ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವ ಅಗತ್ಯ, ಗ್ರಾಮದ ಪ್ರತಿಯೊಂದು ಕುಟುಂಬದಿಂದ ಆಧಾರ್ ಕಾರ್ಡ್ ಸಂಗ್ರಹ ಮತ್ತು ಗ್ರಾಮ ಪಂಚಾಯಿತಿಗಳ ವಾರ್ಡಿನ ಸದಸ್ಯರೇ ಸಮುದಾಯ ವಂತಿಕೆ ಸಂಗ್ರಹಣೆ ಮಾಡುವಂತೆ ಪ್ರೇರೇಪಿಸುವುದು ಬೆಂಬಲ ಸಂಸ್ಥೆಗಳ ಬಹುಮುಖ್ಯವಾದ ಹೊಣೆಗಾರಿಕೆಯಾಗಿದೆ ಎಂದು ಜಿಪಂ ಸಿಇಒ ಕೆ.ಎಂ. ಗಾಯತ್ರಿ ತಿಳಿಸಿದರು.

ನಗರದ ನಿಜಗುಣ ರೆಸಿಡೆನ್ಸಿಯ ಸಭಾಂಗಣದಲ್ಲಿ ಗುರುವಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಯೋಗದೊಂದಿಗೆ ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಐಎಸ್‌ಆರ್‌ಎ ಬೆಂಬಲ ಸಂಸ್ಥೆಯ ಸಿಬ್ಬಂದಿಗೆ ಆಯೋಜಿಸಲಾಗಿರುವ ಮೂರು ದಿನಗಳ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಜನಸಮುದಾಯಕ್ಕೆ ಯೋಜನೆಯ ಮಾಹಿತಿ ನೀಡುವ ಕರ್ತವ್ಯ, ಜವಾಬ್ದಾರಿಗಳು ಹೆಚ್ಚಿವೆ. ಪೈಪ್‌ಲೈನ್ ವ್ಯವಸ್ಥೆ, ಗುಣಮಟ್ಟದ ಬಗ್ಗೆ ಹಾಗೂ ಯೋಜನೆಯ ಕುರಿತು ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಬೇಕು. ಸಮುದಾಯದ ಜನರ ಸಹಭಾಗಿತ್ವ, ಜನಪ್ರತಿನಿಧಿಗಳ ಸಹಕಾರ ಅಗತ್ಯವಾಗಿದೆ ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ಗಂಗಾಧರಯ್ಯ ಮಾತನಾಡಿ, ಜಲಜೀವನ್ ಮಿಷನ್ ಯೋಜನೆಯನ್ನು ವೈಜ್ಞಾನಿಕವಾಗಿ ಅಳವಡಿಸುತ್ತಿರುವುದರಿಂದ ಹಲವು ಪ್ರಯೋಜನಗಳಿವೆ. ಎಲ್ಲಾ ಮನೆಗಳಿಗೂ ಸ್ಟ್ಯಾಂಡ್ ಪೋಸ್ಟ್ ಕಲ್ಪಿಸಬೇಕು. ಪ್ರತಿಯೊಬ್ಬ ನಾಗರಿಕರಿಗೆ ಸಮಾನವಾಗಿ ಶುದ್ಧ ಮತ್ತು ಸುರಕ್ಷಿತವಾದ ನೀರನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ ಎಂದರು. ಕಾರ್ಯಾಗಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಅಧಿಕಾರಿ ಜಗದೀಶ್, ಮಾಹಿತಿ–ಶಿಕ್ಷಣ ಮತ್ತು ಸಂವಹನ ಸಮಾಲೋಚಕ ವಿ.ಹೆಚ್.ರಾಮಾಂಜನೇಯ, ಸಮಾಲೋಚಕ ಕಾಳಚಾರಿ, ಜೋಸೆಫ್ ರೋಲೋ, ಜಲ ಜೀವನ್ ಮಿಷನ್ ಯೋಜನೆಯ ಹಿನ್ನೆಲೆ, ಉದ್ದೇಶ, ಜನರ ಭಾಗವಹಿಸುವಿಕೆ, ಜಲ ಮೂಲಗಳ ಬಲವರ್ಧನೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳು, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಬಗ್ಗೆ ಉಪನ್ಯಾಸ ನೀಡಿದರು.

ಮೇ 8 ರಂದು ಭಗೀರಥ ಜಯಂತಿ

ಚಾಮರಾಜನಗರ, ಮೇ 5– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ಮೇ 8ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ನಡೆಯಲಿರುವ ಶ್ರೀಭಗೀರಥ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಬಳಿಕ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಜೈ ಭುವನೇಶ್ವರಿ ವೃತ್ತ (ಪಚ್ಚಪ್ಪ ವೃತ್ತ) ಮೂಲಕ ಸಮಾರಂಭ ನಡೆಯುವ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ.

ಮಧ್ಯಾಹ್ನ 12 ಗಂಟೆಗೆ ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ.

ವಿವಿಧ ಆರೋಗ್ಯ ಕೇಂದ್ರಗಳಿಗೆ ಡಿಹೆಚ್‌ಓ ಭೇಟಿ



ಚಾಮರಾಜನಗರ, ಮೇ 5–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ. ಎಂ.ವಿಶ್ವೇಶ್ವರಯ್ಯ ಅವರು ಜಿಲ್ಲೆಯ ವಿವಿಧ ಆರೋಗ್ಯ ಕೇಂದ್ರಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ಚಾಮರಾಜನಗರ ತಾಲೂಕಿನ ಕಾಗಲವಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಗುಂಡ್ಲುಪೇಟೆ ತಾಲೂಕಿನ ರಂಗನಾಥಪುರ, ಮಾದಾಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕುಬ್ಬಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಆಡಳಿತ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕು. ಕಡ್ಡಾಯವಾಗಿ ಬಯೋಮೆಟ್ರಿಕ್ ಹಾಜರಾತಿ ಹಾಕಬೇಕು. ರೋಗಿಗಳಿಗೆ ಸ್ಪಂದಿಸಿ ಉತ್ತಮ ಚಿಕಿತ್ಸೆ ನೀಡಬೇಕು. ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಕಾರ್ಯ ನಿರ್ವಹಿಸಬೇಕು ಎಂದು ಡಿಹೆಚ್‌ಓ ಡಾ.ಕೆ.ಎಂ. ವಿಶ್ವೇಶ್ವರಯ್ಯ ಸೂಚನೆ ನೀಡಿದರು.

ಆಸ್ಪತ್ರೆಯಲ್ಲಿ ಔಷಧಗಳ ಲಭ್ಯತೆ, ವಿತರಣೆ ಕುರಿತು ಖುದ್ದು ವೀಕ್ಷಣೆ ಮಾಡಿದರು. ಔಷಧಗಳ ಉಗ್ರಾಣಕ್ಕೆ ಭೇಟಿ ನೀಡಿ ದಾಸ್ತಾನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದರು. ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಬೇಕು ಎಂದು ನಿರ್ದೇಶನ ನೀಡಿದರು.

2 ವರ್ಷದಿಂದ ಪ್ರೀತಿಸಿ ಮದುವೆ ಸಂದರ್ಭದಲ್ಲಿ ಯುವಕ ಪರಾರಿ

ಹನೂರು, ಮೇ 5– 2 ವರ್ಷ ಪ್ರೀತಿಯ ನಾಟಕವಾಡಿದ ಯುವಕನೊಬ್ಬ ಮದುವೆ ಸಂದರ್ಭದಲ್ಲಿ ಪರಾರಿಯಾಗಿರುವ ಘಟನೆ ತಾಲೂಕಿನ ರಾಮಾಪುರದಲ್ಲಿ ನಡೆದಿದೆ.

ತಾಲೂಕಿನ ಗ್ರಾಮವೊಂದರ 20 ವರ್ಷದ ಯುವತಿಯನ್ನು ಪೊನ್ನಾಚಿ ಗ್ರಾಮದ ಪರಂಜ್ಯೋತಿ(25) 2 ವರ್ಷಗಳಿಂದ ಪ್ರೀತಿಸುತ್ತಿದ್ದ. ಮದುವೆಯಾಗು ಎಂದಾಗ ಮೊದಮೊದಲು ಯುವಕ ನಿರಾಕರಿಸಿದ್ದಾನೆ ಎನ್ನಲಾಗಿದೆ.

ಬಳಿಕ ನಡೆದ ಪಂಚಾಯಿತಿಯಲ್ಲಿ ಮದುವೆಯಾಗುವುದಾಗಿ ಒಪ್ಪಿದ ಪರಂಜ್ಯೋತಿ ವಿವಾಹ ನೋಂದಣಿಗಾಗಿ ರಾಮಾಪುರಕ್ಕೆ ತೆರಳುವ ಮಾರ್ಗ ಮಧ್ಯೆಯೇ ಪರಾರಿಯಾಗಿದ್ದಾನೆ. ಯುವತಿ ರಾಮಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾಳೆ.

ಕೃಷಿ ಹೊಂಡಕ್ಕೆ ಬಿದ್ದು ಸಹೋದರಿಯರ ಸಾವು ಪ್ರಕರಣ

ಕುಟುಂಬಸ್ಥರಿಗೆ ಶಾಸಕ ನಿರಂಜನ್‌ಕುಮಾರ್ ಸಾಂತ್ವನ



ಗುಂಡ್ಲುಪೇಟೆ, ಮೇ 5(ಸೋಮ್.ಜಿ)– ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ ಇತ್ತೀಚೆಗೆ ಕೃಷಿ ಹೊಂಡಕ್ಕೆ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದ ಗ್ರಾಮದ ರೇಚಣ್ಣ ಅವರ ಪುತ್ರಿಯರಾದ ಪೂಜಾ(13), ಪುಣ್ಯ(14) ಅವರ ಮನೆಗೆ ಗುರುವಾರ ಶಾಸಕ ಸಿ.ಎಸ್. ನಿರಂಜನಕುಮಾರ್ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಕುಟುಂಬಸ್ಥರನ್ನು ಭೇಟಿಯಾದ ಶಾಸಕರು ಸಹೋದರಿಯರ ಸಾವಿಗೆ ತೀವ್ರ ಸಂತಾಪ ವ್ಯಕ್ತಪಡಿಸಿದರು. ಇಂತಹ ದುರ್ಘಟನೆಯಿಂದ ಕುಟುಂಬದಲ್ಲಿ ಶೋಕ ಮಡುಗಟ್ಟಿದೆ. ಕೃಷಿ ಹೊಂಡಗಳಿಗೆ ರೈತರು ಸೂಕ್ತ ಬೇಲಿ ಹಾಕುವುದರೊಂದಿಗೆ ನಿಗಾವಹಿಸಬೇಕು. ಆಗ ಇಂತಹ ಘಟನೆಗಳು ನಡೆಯುವುದು ಕಡಿಮೆಯಾಗುತ್ತದೆ ಎಂದರು.

ಈ ವೇಳೆ ಮುಖಂಡರಾದ ಹಂಗಳ ಪ್ರಣಯ್, ಶಿಂಡನಪುರ ಮಂಜುನಾಥ್, ಹಂಗಳ ಹುಂಡೀಪುರ ಮಲ್ಲಿಕಾರ್ಜುನ್ ಸೇರಿದಂತೆ ಹಲವರು ಇದ್ದರು.

ನಿಧನ

ಮಹದೇವಮ್ಮ



ಆಲೂರು, ಮೇ 5– ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ನಿವಾಸಿ ಮಹದೇವಮ್ಮ(80) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪುತ್ರರಾದ ಜಿಲ್ಲಾ ರೈತ ಸಂಘದ ಮುಖಂಡ ದಿವಂಗತ ಎ.ಬಿ.ಸ್ವಾಮಿ, ಎ.ಬಿ.ಸುಂದರರಾಜು ಮತ್ತು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಕಸಾಪ ವತಿಯಿಂದ ಬಸವ, ಅಂಬೇಡ್ಕರ್ ಜಯಂತಿ ಆಚರಣೆ



ಯಳಂದೂರು, ಮೇ 5(ವಿ.ನಾಗರಾಜು)– ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಬಸವ ಹಾಗೂ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ವೇಳೆ ಮುಖಂಡ ಮಾಂಬಳ್ಳಿ ರಾಮು ಮಾತನಾಡಿ, ಬಸವೇಶ್ವರರು ಹಾಗೂ ಅಂಬೇಡ್ಕರ್ ಸಮಾನತೆ ಸಾರಿದ ಭಾರತದ ಮಹಾನ್ ನಾಯಕರಾಗಿದ್ದಾರೆ. ಇವರು ತಮ್ಮ ಕಾಲಾವಧಿಯಲ್ಲಿ ಮೌಢ್ಯತೆ, ಜಾತಿಯತೆ, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಶ್ರಮಿಸಿದರು. ಸಮ ಸಮಾಜ ನಿರ್ಮಾಣಕ್ಕೆ ಈ ಮಹಾನ್ ನಾಯಕರ ಕೊಡುಗೆ ಅಪಾರವಾಗಿದ್ದು, ಇವರ ತತ್ವಾದರ್ಶಗಳ ಪಾಲನೆ ಇಂದಿಗೆ ಪ್ರಸ್ತುತವಾಗಿದೆ ಎಂದರು.

ಯಳಂದೂರು ಕಸಾಪ ಅಧ್ಯಕ್ಷ ಯರಿಯೂರು ಎನ್.ನಾಗೇಂದ್ರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ವೈ.ಕೆ. ಮೋಳೆ ನಾಗರಾಜು, ರವಿ, ಮಹಾದೇವ, ಮಹದೇವಸ್ವಾಮಿ, ವಿಜಯ್, ಮಾದೇಶ್, ಗುರು, ನವಾಜ್‌ಬೇಗ್, ಸಿದ್ದರಾಜು, ಚಿನ್ನಪ್ಪ ಲೋಕೇಶ್ ಮೌರ್ಯ, ಟಿಎಪಿಸಿಎಂಎಸ್ ನಿರ್ದೇಶಕರಾದ ಪುಟ್ಟರಾಜು, ನಾಗರಾಜು ಇನ್ನಿತರರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು



ಕೊಳ್ಳೇಗಾಲ, ಮೇ 5(ನಾಗೇಂದ್ರ ಸ್ವಾಮಿ)– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸತ್ತೇಗಾಲ ಗ್ರಾಮ ಬಳಿ ಗುರುವಾರ ನಡೆದಿದೆ.

ತಾಲೂಕಿನ ಕೆಂಪನಪಾಳ್ಯ ಗ್ರಾಮದ ನಾಗಸುಂದರಪ್ಪ ಅವರ ಪುತ್ರ ಮನೋಜ್(23) ಮೃತಪಟ್ಟ ಸವಾರ.

ಮನೋಜ್ ಬೆಂಗಳೂರಿನ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕಳೆದ ಮೂರು ದಿನಗಳಿಂದ ಸಾಲು ಸಾಲು ರಜೆ ನಿಮಿತ್ತ ತನ್ನೂರು ಕೆಂಪನಪಾಳ್ಯಕ್ಕೆ ಬಂದು, ಇಂದು ಮುಂಜಾನೆ 4.30ರಲ್ಲಿ ಕೆಂಪನಪಾಳ್ಯದಿಂದ ಬೆಂಗಳೂರಿಗೆ ತನ್ನ ಬೈಕ್‌ನಲ್ಲಿ ಹೋಗುತ್ತಿದ್ದಾಗ ಸತ್ತೇಗಾಲ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಎದುರಿನಿಂದ ಬಂದ ಸ್ಕಾರ್ಪಿಯೋ ಕಾರು, ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಮನೋಜ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ.

ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ
ಶುಕ್ರವಾರ 06-5-2022
ಬೆಳ್ಳಿ ಬೆಳಕು
ಸತ್ಯಮೂರ್ತಿ ತೋಳಹುಣಸೆ

ಭಟ್ಟರ ಗರಡಿಯಲ್ಲಿ ಪಾಟೀಲರ ಕುಟುಂಬ

ಬೆಂಗಳೂರಿನ ಚಿಕ್ಕಜಾಲದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಲ್ಲಿ ಹಾಕಿದ ಕುಸ್ತಿ ಅಖಾಡದ ವಿಶೇಷ ಸೆಟ್‌ನಲ್ಲಿ ಯೋಗರಾಜ ಭಟ್ಟರ ನಿರ್ದೇಶನದ 'ಗರಡಿ' ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು. ಸಚಿವ ಬಿ.ಸಿ. ಪಾಟೀಲರ ಮಗಳು ಸೃಷ್ಟಿಪಾಟೀಲ್ ಅವರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಸಚಿವರು ಗರಡಿಮನೆ ರಂಗಣ್ಣನಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಅವರ ಅಳಿಯ ಸುಜಯ್ ಖಳನಾಯಕನಾಗಿ ಬಣ್ಣ ಹಚ್ಚುತ್ತಿದ್ದಾರೆ. ಹೀಗೆ ಪಾಟೀಲರ ಕುಟುಂಬವೇ ಈ ಚಿತ್ರದಲ್ಲಿ ತೊಡಗಿಕೊಂಡಿದೆ. ಕೊನೇಹಂತದ ಚಿತ್ರೀಕರಣ ನಡೆಯುತ್ತಿದ್ದ ಸೆಟ್‌ಗೆ ಮಾಧ್ಯಮದವರನ್ನು ಪಾಟೀಲರು ಆಹ್ವಾನಿಸಿದ್ದರು. ವಿಶೇಷವಾಗಿ ಈ ಚಿತ್ರದಲ್ಲಿ ನಟ ದರ್ಶನ್ ಅತಿಥಿ ಪಾತ್ರವೊಂದನ್ನು ನಿರ್ವಹಿಸಿದ್ದಾರೆ.

ಶೂಟಿಂಗ್ ಸ್ಥಳಕ್ಕಾಗಮಿಸಿದ ಪತ್ರಕರ್ತರ ಜೊತೆ ಮಾತನಾಡಿದ ಭಟ್ಟರು, ಗರಡಿ ನಮ್ಮ ನೆಲದ ಕಥೆ. ನಾನು ಇದುವರೆಗೂ ಮಾಡಿರದೇ ಇರುವಂತಹ ಕಥೆಯನ್ನು ಈ ಚಿತ್ರದಲ್ಲಿ ಹೇಳುತ್ತಿದ್ದೇನೆ. ಸೂರಿ ಹಾಗೂ ಮಾನ್ವಿತಾ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಮೊದಲು ಈ ಕಥೆಯನ್ನು ಮಾಡಿಕೊಂಡಾಗ ಬೇರೊಂದು ಟೈಟಲ್ ಇತ್ತು. ನಂತರ ಚಿತ್ರೀಕರಣದ ಲೊಕೇಶನ್‌ಗಾಗಿ ಬಾದಾಮಿ ಅಲ್ಲದೆ ಉತ್ತರ ಕರ್ನಾಟಕದ ಕೆಲ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಮ್ಮ ಕಥೆಗೆ 'ಗರಡಿ' ಎಂಬ ಟೈಟಲೇ ಸೂಕ್ತ ಎನಿಸಿತು. ಅದನ್ನು ಪಾಟೀಲ ರಿಗೆ ಹೇಳಿದಾಗ ಅವರೂ ಸಹ ಒಪ್ಪಿಕೊಂಡರು. ನಾಯಕ ಮತ್ತು ಖಳನಾಯಕ ಸೇರಿದಂತೆ ಹಲವರಿಗೆ ಮೈಸೂರಿನ ದೇಸಿಗೌಡ್ರು ಎಂಬುವರು ಕುಸ್ತಿ ಪಟ್ಟುಗಳನ್ನು ಕಲಿಸಿದ್ದಾರೆ. ಚಿತ್ರದಲ್ಲಿ ಕಲಾವಿದರ ಜೊತೆ ನಿಜವಾದ ಪೈಲ್ವಾನ ರುಗಳೂ ಸಹ ನಟಿಸುತ್ತಿದ್ದಾರೆ. ಚಿತ್ರದಲ್ಲಿ ಬಿ.ಸಿ.ಪಾಟೀಲರದ್ದು ಹಿರಿಯ ಪೈಲ್ವಾನ್ ಪಾತ್ರ ಎಂದು ಮಾಹಿತಿ ನೀಡಿದರು.

ಇಲ್ಲಿ ಹಾಕಿರುವ ಸೆಟ್‌ನಲ್ಲಿ ಮಧ್ಯಂತರದ ದೃಶ್ಯ ಚಿತ್ರೀಕರಣ ಮಾಡುತ್ತಿದ್ದೇವೆ, ಚಿತ್ರದಲ್ಲಿ ಬಿ.ಸಿ.ಪಾಟೀಲರ ಅಳಿಯ ಸುಜಯ್ ಖಳನಟನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇವರನ್ನು ಹೊರತುಪಡಿಸಿದರೆ ರವಿಶಂಕರ್, ನಿರಂಜನ್, ಪೃಥ್ವಿ ಶ್ಯಾಮನೂರು ಹೀಗೆ ಹಲವರು ನಟಿಸುತ್ತಿದ್ದಾರೆ. ಸೋನಲ್ ಪಂಚತಂತ್ರ ನಂತರ ನಮ್ಮ ತಂಡ ಸೇರಿಕೊಂಡಿದ್ದಾರೆ. ಪ್ರತಿಯೊಂದು ಪಾತ್ರವೂ ವಿಭಿನ್ನವಾಗಿದೆ. ಈ ಸಿನಿಮಾದ ಸಂಪೂರ್ಣ ಉಸ್ತುವಾರಿ ಯನ್ನು ಪಾಟೀಲರ ಪುತ್ರಿ ಸೃಷ್ಟಿ ಪಾಟೀಲ್ ನೋಡಿಕೊಳ್ಳುತ್ತಿದ್ದಾರೆ ಎಂದೂ ಹೇಳಿದರು. ನಿರಂಜನ್‌ಬಾಬು ಈ ಸಿನಿಮಾಗೆ ಸಿನಿಮಾಟೋಗ್ರಫಿ ಮಾಡುತ್ತಿದ್ದು, ವಿ.ಹರಿಕೃಷ್ಣ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಈಗಾಗಲೇ ದರ್ಶನ್ ಭಾಗದ ಚಿತ್ರೀಕರಣವನ್ನು ಬಾದಾಮಿಯಲ್ಲಿ ಚಿತ್ರೀಕರಿಸಲಾಗಿದೆ. ಸದ್ಯ ಶೂಟಿಂಗ್ ಮುಗಿಸಿರುವ ಚಿತ್ರತಂಡ ಮುಂದಿನ ಕೆಲಸಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.







ರಾಜಮಾರ್ತಾಂಡ ಟ್ರೈಲರ್ ಬಿಡುಗಡೆ

ಚಿರಂಜೀವಿಸರ್ಜಾ ಅಭಿನಯದ ಕೊನೆಯಚಿತ್ರ ರಾಜ ಮಾರ್ತಾಂಡ ಜೂನ್‌ನಲ್ಲಿ ಬಿಡುಗಡೆಯಾಗಲಿದ್ದು, ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ರಾಮ್‌ನಾರಾಯಣ್, ಚಿರುಸರ್ಜಾ ಅವರು ಡಬ್ಬಿಂಗ್ ಮಾಡುವುದು ಮಾತ್ರವೇ ಬಾಕಿಯಿತ್ತು. ಆನಂತರ ನಡೆಯಬಾರದ ಘಟನೆ ನಡೆದದ್ದು ಎಲ್ಲರಿಗೂ ಗೊತ್ತೇ ಇದೆ. ನಾನು ಚಿರು ಪಾರ್ಥಿವ ಶರೀರ ನೋಡಲು ಹೋದಾಗ, ಧ್ರುವ ಕೇಳಿದ ಮೊದಲ ಮಾತು, ಅಣ್ಣ ಡಬ್ಬಿಂಗ್ ಮುಗಿಸಿದ್ದಾರಾ?, ಆಗ ನಾನು ಇಲ್ಲ ಅಂದೆ. ನಾನು ಮಾಡಿಕೊಡುತ್ತೇನೆ ಅಂತ ಆಗಲೇ ಹೇಳಿದರು. ಹಾಗೇ ಚಿತ್ರದ ಟ್ರೇಲರ್‌ಗೂ ಸಹ ಧ್ರುವಸರ್ಜಾ ಧ್ವನಿ ನೀಡಿದ್ದಾರೆ. ಚಿತ್ರಕ್ಕೆ ದರ್ಶನ್ ಅವರೂ ಸಹ ವಾಯ್ಸ್‌ಓವರ್ ಕೊಡುವುದಾಗಿ ಹೇಳಿದ್ದಾರೆ. ಚಿರು ಪುತ್ರ ರಾಯನ್‌ರಾಜ್ ಸರ್ಜಾ ಸಹ ನಮ್ಮ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜೂನ್‌ನಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ಹೇಳಿದರು. ನಂತರ ನಿರ್ಮಾಪಕ ಶಿವಕುಮಾರ್ ಮಾತನಾಡಿ, ರಾಜಮಾರ್ತಾಂಡ ಚಿತ್ರವನ್ನು ಅದ್ದೂರಿಯಾಗಿ ಬಿಡುಗಡೆ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಥಿಯೇಟರ್ ಮುಂದೆ ಚಿರು ಅವರ 101ಅಡಿ ಕಟೌಟ್ ಹಾಗೂ ರಾಯನ್‌ರಾಜ್ ಸರ್ಜಾ ಅವರ 51ಅಡಿ ಕಟೌಟ್‌ನ್ನು ನಿಲ್ಲಿಸಲಿದ್ದೇವೆ. ಒಳ್ಳೇ ಕಂಟೆಂಟ್ ಚಿತ್ರದಲ್ಲಿದೆ, ಕನ್ನಡಿಗರು ಚಿತ್ರವನ್ನು ಗೆಲ್ಲಿಸುವರೆಂಬ ನಂಬಿಕೆಯಿದೆ ಎಂದು ಹೇಳಿದರು. ಮೇಘನಾರಾಜ್ ಮಾತನಾಡಿ, ಅದೇನೋ ಗೊತ್ತಿಲ್ಲ. ಅವರು ನಟಿಸಿರುವ ಬೇರೆಲ್ಲಾ ಚಿತ್ರಗಳ ಸಂಭಾಷಣೆಯನ್ನು ಅಲ್ಲೇ ಹೇಳಿ, ಅದನ್ನು ಮರೆತು ಹೋಗುತ್ತಿದ್ದರು. ಆದರೆ ಈ ಚಿತ್ರದ ಸಂಭಾಷಣೆಗಳನ್ನು ಮಾತ್ರ ಅವರು ಯಾವಾಗಲೂ ಹೇಳುತ್ತಿದ್ದರು. ಈ ಚಿತ್ರವನ್ನು ಚಿರು ಅಷ್ಟೊಂದು ಹಚ್ಚಿಕೊಂಡಿದ್ದರು. ಅವರಿಲ್ಲದ ಈ ಸಮಯದಲ್ಲಿ ಚಿತ್ರತಂಡಕ್ಕೆ ಬೆಂಬಲ ನೀಡಬೇಕಾಗಿರುವುದು ನಮ್ಮ ಕರ್ತವ್ಯ ಎಂದು ಹೇಳಿದರು. ಈ ಚಿತ್ರವನ್ನು ಪ್ರಣವ್‌ಗೌಡ.ಎನ್, ನಿವೇದಿತಾ ಹಾಗೂ ಶಿವಕುಮಾರ್ ನಿರ್ಮಿಸಿದ್ದಾರೆ. ಅರ್ಜುನ್ ಜನ್ಯ ಅವರ ಸಂಗೀತ, ಕೆ.ಗಣೇಶ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಚಿತ್ರದ ನಾಯಕಿಯರಾಗಿ ದೀಪ್ತಿಸಾತಿ, ತ್ರಿವೇಣಿ(ಟಗರು) ನಟಿಸಿದ್ದಾರೆ.

ಶೀರ್ಷಿಕೆಯಲ್ಲೇ ಕಥೆಯಿದೆ... ಕಂಡ್ಹಿಡಿ ನೋಡನ



ಸೈಕೋ ಶಂಕರ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ಪ್ರಣವ ಸೂರ್ಯ ನಟಿಸಿರುವ, ನಾಗೇಂದ್ರ ಅರಸ್ ನಿರ್ದೇಶನದ "ಕಂಡ್ಹಿಡಿ ನೋಡನ" ಚಿತ್ರದ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ನಾಗೇಂದ್ರ ಅರಸ್ ಮಾತನಾಡುತ್ತ ವಿಶೇಷವಾದ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮೂರು ತಿರುವುಗಳಿದೆ. ಯಾರು ಊಹಿಸಲಾಗದ ಕ್ಲೈಮ್ಯಾಕ್ಸ್ ಸಹ ಇದೆ. ಒಂದು ಚಿಕ್ಕ ಎಳೆಯ ಮೇಲೆ ಇಡೀ ಚಿತ್ರ ನಿಂತಿದೆ ಎಂದರು.

ನನ್ನ ಮೊದಲಚಿತ್ರ ಅಂದುಕೊಂಡ ಯಶಸ್ಸು ತಂದುಕೊಡಲಿಲ್ಲ. ಈಗ ವಿಭಿನ್ನ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ನಟಿಸಿದ್ದೇನೆ. ಕಥೆ ತುಂಬಾ ಚೆನ್ನಾಗಿದೆ. ಕ್ಲೈಮ್ಯಾಕ್ಸ್ ನೋಡಿದವರು ಅಚ್ಚರಿಯಾಗುವುದಂತು ಖಚಿತ. ಇದು ತಂತ್ರಜ್ಞರೆ ಸೇರಿ ಮಾಡಿರುವ ಸಿನಿಮಾ. ಶ್ರೀಧರ್ ಕಶ್ಯಪ್ ಅವರಿಗೆ ಸಂಗೀತ ಕ್ಷೇತ್ರದಲ್ಲಿ ಅನುಭವವಿದೆ. ವಿನೋದ್ ಜೆ ರಾಜ್ ಚಿತ್ರದ ಛಾಯಾಗ್ರಾಹಕರು. ಹೀಗೆ ಹಲವು ತಂತ್ರಜ್ಞರ ಹಾಗೂ ಕಲಾವಿದರ ಸಮಾಗಮದಲ್ಲಿ ಈ ಚಿತ್ರ ಮೂಡಿ ಬಂದಿದೆ ಎಂದು ನಾಯಕ ಪ್ರಣವ್ ಸೂರ್ಯ ಹೇಳಿದರು. ಪ್ರಣವ ಸೂರ್ಯ, ಎಸ್.ಕೆ ನಾಗೇಂದ್ರ ಅರಸ್, ವಿಜಯ್ ಚೆಂಡೂರ್, ಗಿರಿಜಾ ಲೋಕೇಶ್, ಪ್ರಿಯಾಂಕ , ಶಿಲ್ಪ ಬರಿಕೆ, ಗಗನ ಮಧು, ಮಂಜುರಾಜ್ ಸೂರ್ಯ ಹಾಗೂ ಆದರ್ಶ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಸಿನಿ ಬಜಾರ್ ನಿರ್ಮಾಪಕರಿಗೆ ಆಶಾದಾಯಕ




ಕನ್ನಡ ನಿರ್ಮಾಪಕರಿಗೆ ಅನುಕೂಲವಾಗಲೆಂದೇ ಸಿನಿಬಜಾರ್ ಎಂಬ ಓಟಿಟಿ ಪ್ಲಾಟ್‌ಫಾರಂ ಇದೀಗ ಪ್ರಾರಂಭವಾಗಿದೆ. ಉಮೇಶ್‌ಬಣಕಾರ್ ಹಾಗೂ ಭಾಸ್ಕರ್ ವೆಂಕಟೇಶ್ ಸೇರಿ ಹುಟ್ಟುಹಾಕಿರುವ ಈ ಹೊಸ ಓಟಿಟಿಗೆ ಫಿಲಂಚೇಂಬರ್ ಅಧ್ಯಕ್ಷ ಜೈರಾಜ್ ಚಾಲನೆ ನೀಡಿದರು. ಈ ಕಾರ್ಯಕ್ರಮಕ್ಕೆ ನಿರ್ಮಾಪಕರ ಸಂಘದ ಅಧ್ಯಕ್ಷ ಪ್ರವೀಣ್‌ಕುಮಾರ್, ನಿರ್ದೇಶಕ ನಾಗಣ್ಣ, ಶ್ರೀನಗರ ಕಿಟ್ಟಿ, ರವಿಶ್ರೀವತ್ಸ, ಗಿರಿರಾಜ್ ಸೇರಿದಂತೆ ಅನೇಕ ಗಣ್ಯರು ಆಗಮಿಸಿದ್ದರು. ತಮ್ಮ ಸಿನಿಬಜಾರ್ ಬಗ್ಗೆ ಮಾತನಾಡಿದ ಭಾಸ್ಕರ್, ಆಂಡ್ರಾಯ್ಡ್ ಮೊಬೈಲ್, ಟಿವಿ ಅಲ್ಲದೆ ಲ್ಯಾಪ್‌ಟ್ಯಾಪ್‌ಗಳಲ್ಲೂ ಹೊಸ ಕನ್ನಡ ಚಿತ್ರಗಳನ್ನು ಯಾವುದೇ ಜಾಹೀರಾತುಗಳಿಲ್ಲದೆ ಸಿನಿಬಜಾರ್ ಓಟಿಟಿಯಲ್ಲಿ ನೋಡಬಹುದು, ಚಿತ್ರಮಂದಿರಗಳಲ್ಲಿ ನೋಡಲು ಅವಕಾಶ ಸಿಗದೇಹೋದಾಗ ಆ ಚಿತ್ರಗಳನ್ನು ನಮ್ಮ ಸಿನಿಬಜಾರ್‌ನಲ್ಲಿ ವೀಕ್ಷಿಸಬಹುದಾಗಿದೆ ಪ್ರಪಂಚದ 177 ದೇಶಗಳಲ್ಲೂ ಸಿನಿಬಜಾರ್ ಆಪ್ ಲಭ್ಯವಿದೆ ಎಂದು ಹೇಳಿದರು.

ಜೈರಾಜ್ ಮಾತನಾಡುತ್ತ ಭಾಸ್ಕರ್ ಒಂದೊಳ್ಳೇ ಪ್ರಯತ್ನ ಮಾಡುತ್ತಿದ್ದಾರೆ. ಮುಖ್ಯವಾಗಿ ನಮ್ಮ ನಿರ್ಮಾಪಕರಿಗೆ ಹಾಕಿದ ಹಣ ವಾಪಸ್ ಬರಬೇಕು. ನಿರ್ಮಾಪಕರಿಗೆ ಮೋಸ ಆಗುವ ಅವಕಾಶವಿಲ್ಲ ಎಂದರು. ಪ್ರವೀಣ್ ಮಾತನಾಡುತ್ತ ಬಾಸ್ಕರ್ ಬಹಳದಿನಗಳಿಂದ ಚಿತ್ರರಂಗದಲ್ಲಿದ್ದಾರೆ. ನಮ್ಮವರಿಗೆ ಓಟಿಟಿ ಅಂದ್ರೆ ಈಥರ ಇರುತ್ತೆ ಅನ್ನೋದು ಗೊತ್ತಾಗಿದ್ದೇ ಇವರಿಂದ. ಈಗವರು ನಮ್ಮ ನಿರ್ಮಾಪಕರಿಗೆ ಸಹಕಾರಿಯಾಗುವ ಕೆಲಸ ಮಾಡಿದ್ದಾರೆ. ಬೇರೆ ಓಟಿಟಿಯಲ್ಲಿ ತಿಂಗಳ ಚಂದಾದಾರಿಕೆ ಪಡೆಯಲೇಬೇಕು, ಆದರೆ ಇಲ್ಲಿ ಹಾಗಿಲ್ಲ, ಬೇಕಾದ ಚಿತ್ರವನ್ನು ಮಾತ್ರ ವೀಕ್ಷಿಸಬಹುದು ಎಂದು ಹೇಳಿದರು.

ಸಿನಿಪದಬಂಧ-006

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. 1964 ರಲ್ಲಿ ಕಲ್ಯಾಣಕುಮಾರ್- ಸಾವಿಲ್ಲದ ಮೂರ್ತಿಕಾರ	10
4. ಡಾ. ವಿಷ್ಣುವರ್ಧನರ ಬಿರುದು	5
5. ನಿಲ್ಲು ನಿಲ್ಲೇ --- ಬೇಡ ಬೇಡ ಬೆಂಕಿಯ ಸಂಗ	3
7. ಅಪ್ಪಣ್ಣ ಊದಿದ ವಾದ್ಯ	3
9. ಒಣಗದ ವ್ರಣ ಎಂಬರ್ಥದ ಶಂಕರ್ ನಾಗ್-ಗಾಯತ್ರಿ ಚಿತ್ರ	5
10. ಕಲ್ಯಾಣ್ ಕುಮಾರ್- ಕಲ್ಪನಾರ ಸಂತಸದ ಶಿಶು	5
12. ಬನವಾಸಿಯ ರಾಜ ವಿಷ್ಣು ಅಭಿನಯದಲ್ಲಿ	3
15. 2007ರಲ್ಲಿ ಪುನೀತ್-ಪೂಜಾಗಾಂಧಿ "ಭೇಟಿ"	3
16. ಅಂಬರೀಶ್-ರಾಮಕೃಷ್ಣರ ಗೆಳೆತನ ಮತ್ತು ನಂಟು ಅದಲು ಬದಲಾಗಿದೆ	5
17. ನಟ ಲೋಕೇಶರ 10 ಪಾತ್ರಗಳು	10

ಮೇಲಿನಿಂದ ಕೆಳಕ್ಕೆ

1. ಶ್ರೀನಾಥ್-ಆರತಿ ಭೂಗತ	5
2. ವಿಷ್ಣುವರ್ಧನ್ ಜೊತೆ ಎನ್ಟಿಆರ್, ವಹೀದಾ ರೆಹಮಾನ್ ನಟಿಸಿದ ಚಿತ್ರ	4
3. ಪ್ರಾಣಿಗಳ ಮನೆಯಲ್ಲಿ ಅಂಬರೀಶ್	4
6. -- ಕನ್ನಡಿಗ-ಪುನೀತ್ ಸಿನಿಮಾ	2
8. --- ಮುರಾರಿ, ಸುದೀಪ್-ಉಪೇಂದ್ರ ಚಿತ್ರ	3
9. ಅಂಬರೀಶ್-ಸುಮಲತಾ ಅಭಿನಯದ 1985ರ ಚಿತ್ರ	3
10. ಕುಚ್ಚಿಕ್ಕು ಎಂಬರ್ಥದ ವಿಷ್ಣುವರ್ಧನ್ ಚಿತ್ರ	4
11. 2004ರ ಮುರುಳಿ-ರಮ್ಯಾ ಚಿತ್ರ	2
13. ನಟ ಅಶೋಕರ "ಜೀವನ ಚಿನ್ನ" ಆಗಿದ್ದು ಈ ಚಿತ್ರದಲ್ಲಿ	5
14. ವಿಷ್ಣು-ಜಯಪ್ರದಾ-ದರ್ಶನ್ ಅಭಿನಯದ "ಸದರಿ ನಂಟು	4

ಸಿನಿ ಪದಬಂಧ 005ರ ಸರಿ ಉತ್ತರ

ಆ	ಪ	ರೇ	ಷ	ನ್	ಡೈ	ಮಂ	ಡ್	ರಾ	ಕೆ	ಟ್
ಟೋ			ವೇ		ರೇ			ಜ		
ರಾ		ಜ		ವಿ	ಕ್ಟ	ರಿ		ಕು		ಸಿ
ಜ	ಯ	ಮಾ	ಲ		ರ್		ರಾ	ಮ	ಚಾ	ರಿ
		ನ				ಅಂ	ಬ	ರ		ವಂ
ನಾ	ನು		ಮಾ				ಟ್		ಸಂ	ತ
ನು		ಅ	ವ	ಸ್ಥೆ				ವಿ		
ನಾ	ಗಾ	ರ್ಜು	ನ		ಕ		ಚ	ಕ್ರ	ವ್ಯೂ	ಹ
ನೆ		ನ್		ಹು	ಲಿ	ಯಾ		ವ್		ಳ್ಳಿ
		ಡ			ಯು		ಸೂ			ಹೈ
ಬೋ	ರೇ	ಗೌ	ಡ	ಬೆಂ	ಗ	ಳೂ	ರಿ	ಗೆ	ಬಂ	ದ

ವಿಜೇತರು: ಮೋನಿಕ ಎಂ.ಎಂ. (ಡಯಾಲಿಸ್ ಯೂನಿಟ್)
ಬೃಂದಾವನ ಆಸ್ಪತ್ರೆ,
ಒಂಟಿಕೊಪ್ಪಲ್ ಮೈಸೂರು.

ಟಾಕೀಸ್ ಆಪ್‌ಗೆ ಶಿವರಾಜ್‌ಕುಮಾರ್ ಚಾಲನೆ

ಮಾಲ್ಗುಡಿ ಡೇಸ್ ಚಿತ್ರದ ನಿರ್ಮಾಪಕ ರತ್ನಾ ಕರ್ ಕಾಮತ್ ಅವರು ಕನ್ನಡಿಗರಿಗಾಗಿಯೇ ಹೊಸದೊಂದು ಆಪ್‌ನ್ನು ಅಭಿವೃದ್ಧಿಕರಿಸಿದ್ದಾರೆ. ಅದರ ಹೆಸರು ಟಾಕೀಸ್ ಆಪ್. ಹಲವಾರು ವಿಭಾಗಗಳ ಕಲಾವಿದರು ತಮ್ಮ ಪ್ರತಿಭೆ ಪ್ರದರ್ಶಿಸಲು ಮತ್ತೊಂದು ವೇದಿಕೆಯಾಗಿ ಈ ಟಾಕೀಸ್ ಆಪ್ ರೂಪುಗೊಂಡಿದೆ ಇತ್ತೀಚೆಗೆ ಈ ಟಾಕೀಸ್ ಆಪ್‌ನ ಉದ್ಘಾಟನೆಯನ್ನು ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್ ನೆರವೇರಿಸಿದರು.



ಸ್ವಯಂಪ್ರಭ ಸಂಸ್ಥೆ ಈ ಟಾಕೀಸ್ ಆಪ್‌ನ್ನು ಡೆವಲಪ್ ಮಾಡಿದೆ. ಕನ್ನಡಿಗರಿಂದ ಕನ್ನಡಿಗರಿಗಾಗಿ ಎಂಬ ಘೋಷವಾಕ್ಯದೊಂದಿಗೆ ಈ ಆಪ್ ಕಾರ್ಯನಿರ್ವಹಿಸಲಿದೆ. ಮೂಲತಃ ಉದ್ಯಮಿಯಾಗಿರುವ ರತ್ನಾಕರ್ ಕಾಮತ್ ಇದರ ಮುಖ್ಯಸ್ಥರು. ವೆಬ್‌ಸೀರೀಸ್, ಧಾರವಾಹಿ, ಕಿರುಚಿತ್ರ ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಚಲನಚಿತ್ರಗಳನ್ನು ಈ ಟಾಕೀಸ್ ಆಪ್ ಮೂಲಕ ವೀಕ್ಷಿಸಬಹುದು. ದಿನಕ್ಕೆ ಒಂದು ರೂಪಾಯಿಯಂತೆ ವರ್ಷವಿಡೀ ಎಲ್ಲಾ ಥರದ ಕಾರ್ಯಕ್ರಮಗಳನ್ನು ವೀಕ್ಷಿಸಬಹುದಾಗಿದೆ. ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಮನೋರಂಜನೆ ನೀಡುವ ಯೋಜನೆ ಟಾಕೀಸ್ ಆಪ್ ತಂಡದ್ದು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜಕುಮಾರ್ ಈ ಸಂಸ್ಥೆಯ ಬೆಳವಣಿಗೆ ಕಂಡು ಖುಷಿಯಾಗುತ್ತಿದೆ. ನಮ್ಮ ಅಪ್ಪಾಜಿ ಯಾವಾಗಲೂ ಕೆಲಸ ಕೊಟ್ಟವರು ಅನ್ನದಾತರು ಅಂತ ಹೇಳುತ್ತಿದ್ದರು. ರತ್ನಾಕರ್ ಅವರನ್ನು ನೋಡಿದರೆ ಹಾಗೇ ಅನಿಸುತ್ತಿದೆ. ಅವರು ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದಾರೆ. ಇನ್ನು ಟಾಕೀಸ್ ಆಪ್ ಬಗ್ಗೆ ಹೇಳಬೇಕಾದರೆ, ಟೆಕ್ನಾಲಜಿ ಬದಲಾದ ಹಾಗೆ ನಾವು ಸಹ ಬದಲಾಗಬೇಕು. ನಾನು ಈ ಹೊಸ ತಂತ್ರಜ್ಞಾನಕ್ಕೆ ಒಗ್ಗಿಕೊಂಡಿದ್ದೇನೆ. ಲಾಕ್‌ಡೌನ್ ಸಮಯದಲ್ಲಿ ಸಾಕಷ್ಟು ವೆಬ್ ಸೀರೀಸ್‌ಗಳನ್ನು ಓಟಿಟಿಯಲ್ಲಿ ನೋಡಿದ್ದೇನೆ. ನನ್ನ ಮಗಳು ನಿರ್ಮಿಸಿರುವ ವೆಬ್‌ಸೀರೀಸ್ ಸಹ ಸದ್ಯದಲ್ಲೇ ಇದೇ ಟಾಕೀಸ್‌ಆಪ್‌ನಲ್ಲಿ ಮೂಡಿಬರಲಿದೆ. ಮುಂದೆ ನಾನು ಕೂಡ ಒಂದು ವೆಬ್‌ಸೀರೀಸ್ ನಿರ್ಮಿಸಿ, ಅದರಲ್ಲಿ ನಟಿಸಲಿದ್ದೇನೆ. ಟಾಕೀಸ್ ಆಪ್ ಕನ್ನಡಿಗರಿಗೆ ಉತ್ತಮ ಮನರಂಜನೆ ನೀಡಲಿ ಎಂದು ಹೇಳಿದರು. ಟಾಕೀಸ್ ಆಪ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪ್ರೋಗ್ರಾಮಿಂಗ್ ಹೆಡ್ ಸೂರಜ್ ಬೋಳಾರ್ ಅವರು ನೀಡಿದರು. ಈ ಆಪನ್ನು ಹೇಗೆ ಬಳಸಬೇಕೆಂದು ನಟಿ ರಜನಿ ರಾಘವನ್ ವಿಡಿಯೋ ಮೂಲಕ ವಿವರಿಸಿದರು. ರತ್ನಾಕರ ಕಾಮತ್, ಲಕ್ಷ್ಮೀರತ್ನಾಕರ ಕಾಮತ್ ಹಾಗೂ ಗಣೇಶ್ ರತ್ನಾಕರ ಕಾಮತ್ ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕಾಣೆಯಾದವರ ಬಗ್ಗೆ ಪ್ರಕಟಣೆಗೆ ಟ್ರೈಲರ್

ಕನ್ನಡಿಗರು ಉತ್ತಮ ಕಥೆಯುಳ್ಳ ಚಿತ್ರಗಳನ್ನು ಮೆಚ್ಚಿಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ಅಂಥದೊಂದು ವಿಶಿಷ್ಟ ಹಾಗೂ ವಿಭಿನ್ನ ಕಥಾಹಂದರ ಇರುವ ಚಿತ್ರ "ಕಾಣೆಯಾದವರ ಬಗ್ಗೆ ಪ್ರಕಟಣೆ". ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ದುನಿಯಾ ವಿಜಯ್ ಹಾಗೂ ಡಾಲಿ ಧನಂಜಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಟ್ರೇಲರ್ ಬಿಡುಗಡೆ ಮಾಡಿ ಶುಭ ಕೋರಿದರು.



ರಂಗಾಯಣ ರಘು, ರವಿಶಂಕರ್ ಹಾಗೂ ತಬಲನಾಣಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ಈ ಚಿತ್ರವನ್ನು ಅನಿಲ್‌ಕುಮಾರ್ ನಿರ್ದೇಶಿಸಿದ್ದಾರೆ. ಮುಸುಕು ಧರಿಸಿದ ಮೂವರು ಪ್ರಮುಖ ಪಾತ್ರಧಾರಿಗಳನ್ನು, ಪೊಲೀಸ್ ಪಾತ್ರಧಾರಿಯೊಬ್ಬ ವೇದಿಕೆಗೆ ಕರೆತರುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ನಿರ್ದೇಶಕ ಅನಿಲ್‌ಕುಮಾರ್ ಮಾತನಾಡುತ್ತ ಇದೊಂದು ವಿಭಿನ್ನ ಕಥಾವಸ್ತು. ಚಿಕ್ಕಣ್ಣ, ತಿಲಕ್, ಆಶಿಕಾ ರಂಗನಾಥ್ ಮುಂತಾದ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ನನ್ನ ಅಣ್ಣ ಜಿತೇಂದ್ರ ಮಂಜುನಾಥ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಈಗ ಟ್ರೇಲರ್ ಬಿಡುಗಡೆ ಮಾಡಿದ್ದೇವೆ. ಮೇನಲ್ಲಿ ಚಿತವನ್ನು ತೆರೆಗೆ ತರುತ್ತೇವೆ ಎಂದರು.

ಕನ್ನಡದಲ್ಲಿ ಕಾಲಕ್ಕೆ ತಕ್ಕಹಾಗೆ ಉತ್ತಮ ಕಥಾವಸ್ತುವುಳ್ಳ ಚಿತ್ರಗಳು ಬರುತ್ತದೆ. ಕನ್ನಡಿಗ ಉತ್ತಮ ಕಥೆಯುಳ್ಳ ಚಿತ್ರಕ್ಕೆ ಜೈ ಎನ್ನುತ್ತಾನೆ. ಅನಿಲ್‌ಕುಮಾರ್ ಸಹ ಉತ್ತಮ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಚಿತ್ರ ಗೆಲ್ಲುವ ಭರವಸೆಯಿದೆ ಎಂದು ರಂಗಾಯಣ ರಘು ಹೇಳಿದರು.

ನಾಯಕ, ನಾಯಕಿ ಕಾನ್ಸೆಪ್ಟ್ ಇಲ್ಲದೆ, ಕಥೆಯನ್ನೇ ಕೇಂದ್ರವಾಗಿಟ್ಟುಕೊಂಡು ನಿರ್ಮಾಣವಾಗಿರುವ ಚಿತ್ರ "ಕಾಣೆಯಾದವರ ಬಗ್ಗೆ ಪ್ರಕಟಣೆ". ಇಂತಹ ವಿಭಿನ್ನ ಪ್ರಯತ್ನ ಮಾಡಿರುವ ಅನಿಲ್‌ಕುಮಾರ್ ಅವರಿಗೆ ಕನ್ನಡಿಗರು ಪ್ರೋತ್ಸಾಹಿಸುತ್ತಾರೆ ಎಂದು ರವಿಶಂಕರ್ ಹೇಳಿದರು. ಉತ್ತಮ ಕಥೆಯನ್ನು ಆಯ್ಕೆ ಮಾಡಿಕೊಂಡಿರುವ ನಿರ್ಮಾಪಕ, ನಿರ್ದೇಶಕರಿಗೆ ಅಭಿನಂದನೆ. ಕಲಾವಿದನಿಗೆ ತಾನು ಮಾಡಿದ ಪಾತ್ರಗಳಲ್ಲಿ ಕೆಲವು ಪಾತ್ರಗಳು ಮನಸ್ಸಿಗೆ ತೀರ ಹತ್ತಿರವಾಗುತ್ತದೆ. ಅಂತಹ ಪಾತ್ರದಲ್ಲಿ ನನಗೆ ಈ ಚಿತ್ರದ ಪಾತ್ರ ಕೂಡ ಒಂದು ಎಂದು ತಬಲಾನಾಣಿ ಹೇಳಿಕೊಂಡರು. ಇದು ಮಾಮೂಲಿ ಚಿತ್ರಗಳಂತೆ ಅಲ್ಲ ಚಿತ್ರಗಳಲ್ಲಿ ಅಭಿನಯಿಸುವ ವಿಲನ್‌ಗಳು ಹಾಗೂ ಕಾಮಿಡಿಯನ್ಸ್‌ಗಳ ಸಮಾಗಮದಲ್ಲಿ ಮೂಡಿಬಂದಿರುವ ಚಿತ್ರವಿದು. ಈ ಚಿತ್ರದಲ್ಲಿ ಕಥೆಯೇ ನಾಯಕ. ಇಂತಹ ಚಿತ್ರಗಳನ್ನು ಕನ್ನಡಿಗರು ಬೆಂಬಲಿಸಬೇಕು ಎಂದು ಚಿಕ್ಕಣ್ಣ ಹೇಳಿದರು.

ಮೈಸೂರು ಮಿತ್ರ

ಶುಕ್ರವಾರ 6 ಮೇ 2022

ವನ್ಯಜೀವಿ ಹಾವಳಿ ತಡೆಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ



ಹುಣಸೂರು, ಮೇ 5(ಕೆಕೆ)– ನಾಗರಹೊಳೆ ಉದ್ಯಾನದಂಚಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಸಾಕಷ್ಟು ಬೆಳೆ ಹಾನಿ–ಪ್ರಾಣ ಹಾನಿಯಾಗುತ್ತಿದ್ದರೂ ಸರ್ಕಾರ, ಅರಣ್ಯ ಇಲಾಖೆ ವನ್ಯಜೀವಿಗಳ ನಿಯಂತ್ರಣಕ್ಕೆ ಕ್ರಮವಹಿಸುತ್ತಿಲ್ಲ ಎಂದು ಆರೋಪಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಹುಣಸೂರು ವನ್ಯಜೀವಿ ವಿಭಾಗದ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಹುಣಸೂರು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ತಾಲೂಕಿನ ಉದ್ಯಾನದಂಚಿನ ಗ್ರಾಮಗಳಲ್ಲಿ ಕಾಡಾನೆ ಹಾವಳಿಯಿಂದ ಪ್ರಾಣಹಾನಿ ಮತ್ತು ಬೆಳೆಹಾನಿ ಆಗುತ್ತಿದ್ದು, ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಕಾಡಾನೆಗಳ ನಿಯಂತ್ರಿಸುವಲ್ಲಿ, ಬೆಳೆ ನಷ್ಟಕ್ಕೆ ಪರಿಹಾರ ಕೊಡಿಸುವಲ್ಲಿ ವಿಫಲರಾಗಿದ್ದಾರೆ. ರೈತ ಸಂಘದ ನೇತೃತ್ವದಲ್ಲಿ ಅನೇಕ ಹೋರಾಟ ನಡೆಸಿದ ಪರಿಣಾಮ ಶಾಶ್ವತ ಪರಿಹಾರಕ್ಕಾಗಿ ರೈಲ್ವೆ ಕಂಬಿ ತಡೆಗೋಡೆ ಕಾಮಗಾರಿ ಮಂಜೂರಾದರೂ ಮಂದಗತಿಯಲ್ಲಿ ಸಾಗುತ್ತಿದೆ ಸೋಲಾರ್ ಬೇಲಿ ಎಂಬುದು ಅಧಿಕಾರಿಗಳು ದುಡ್ಡು ಹೊಡೆಯುವ ಯೋಜನೆಯಾಗಿದೆಯಷ್ಟೆ, ನೂತನ ತಾಂತ್ರಿಕತೆ ಬಳಸಿ ಕಾಡಾನೆಗಳು ನಾಡಿಗೆ ಬರದಂತೆ ತಡೆಯಬೇಕು ಎಂದರು.

ವನ್ಯಪ್ರಾಣಿಗಳಿಂದ ತೊಂದರೆಗೊಳಗಾಗುವ ವ್ಯಕ್ತಿಗಳಿಗೆ ಸೂಕ್ತ ಚಿಕಿತ್ಸೆ ನೀಡುತ್ತಿಲ್ಲ. ಗಾಯಾಳುಗಳಿಗೆ ಪರಿಹಾರವು ಸಿಗುತ್ತಿಲ್ಲ. ಅರಣ್ಯಾಧಿಕಾರಿ–ಸಿಬ್ಬಂದಿಗಳಿಗೆ ತೊಂದರೆಯಾದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಪಡೆಯುತ್ತಾರೆಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ತಾಲೂಕಿನ ಹರಳಹಳ್ಳಿ, ಹೆಜ್ಜೂರು ಗ್ರಾಮದ ಇಬ್ಬರು ಕಾಡಾನೆಯಿಂದ ದಾಳಿಗೊಳಗಾಗಿ ಚಿಕಿತ್ಸೆ ಪಡೆಯುತ್ತಿದ್ದು, ಇವರಿಗೆ ಸೂಕ್ತ ಪರಿಹಾರವನ್ನು ಕೊಡದೇ, ಸ್ಥಳಕ್ಕೆ ಭೇಟಿ ನೀಡದ ಅರಣ್ಯ ಸಂರಕ್ಷಣಾಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಹೆಚ್.ಡಿ.ಕೋಟೆ ತಾಲೂಕಿನ ರಾಜೇಗೌಡನ ಹುಂಡಿ ರೈತ ಸುರೇಶ್ ಮಾತನಾಡಿ, ರಾತ್ರಿ ವೇಳೆ ಕಾಡಾನೆಗಳು ರೈತರ ಜಮೀನಿಗೆ ದಾಳಿ ಮಾಡಿದಾಗ ಕರೆ ಮಾಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಬೆಳೆ ನಷ್ಟಕ್ಕೂ ಸೂಕ್ತ ಪರಿಹಾರ ನೀಡುತ್ತಿಲ್ಲ. ರಾತ್ರಿ ಕಾವಲುಗಾರರನ್ನು ನೇಮಿಸುತ್ತಿಲ್ಲ. ಆದರೆ ಅಧಿಕಾರಿಗಳ ಮನೆಯಲ್ಲಿ ಕಾಡು ಕಾಯುವ ಐದಾರು ಸಿಬ್ಬಂದಿಗಳನ್ನು ನೇಮಿಸಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದಾರೆಂದು ಆರೋಪಿಸಿದ ಅವರು, ಜನಪ್ರತಿನಿಧಿಗಳು ಇತ್ತ ಗಮನಹರಿಸಬೇಕೆಂದು ಆಗ್ರಹಿಸಿದರು.

ಧರಣಿ ಸ್ಥಳದಲ್ಲಿ ತಹಸೀಲ್ದಾರ್ ಡಾ.ಅಶೋಕ್ ಮನವಿ ಸ್ವೀಕರಿಸಿ, ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ರೈತ ಸಂಘದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನೇತ್ರಾವತಿ, ತಾ.ಅಧ್ಯಕ್ಷ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ರಾಮೇಗೌಡ, ಪದಾಧಿಕಾರಿಗಳಾದ ಬಸವರಾಜು, ಧನಂಜಯ, ವಿಷಕಂಠಪ್ಪ ವಾಸು, ಈಶ್ವರ್, ರಾಮಕೃಷ್ಣೇಗೌಡ, ದಸಂಸ ರಾಜು, ಸಿದ್ದೇಶ್ ಸೇರಿದಂತೆ ಇತರರಿದ್ದರು.

–:ಬೇಡಿಕೆಗಳು:–

ರೈಲ್ವೆ ಕಂಬಿಯನ್ನು ಭೇದಿಸಿ ಬರುವ ಆನೆಗಳನ್ನು ತಡೆಗಟ್ಟಲು ವ್ಯವಸ್ಥಿತ ಕ್ರಮವಾಗಬೇಕು. ಬೆಳೆ ನಷ್ಟಕ್ಕೆ ತಕ್ಕಂತೆ ವೈಜ್ಞಾನಿಕವಾಗಿ ಪರಿಹಾರ ನೀಡಬೇಕು. ನಾಶಪಡಿಸುವ ತೆಂಗು–ಅಡಿಕೆ ಮರಗಳಿಗೆ ಸೂಕ್ತ ಪರಿಹಾರ ನೀಡಬೇಕು. ಅರಣ್ಯ ಇಲಾಖೆಯ ಮೂರು ಭಾಗಗಳನ್ನು ರದ್ದುಗೊಳಿಸಿ, ಒಂದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸುವಂತಾಗಬೇಕು. ಅರಣ್ಯಇಲಾಖೆ ಬೆಳೆಸಿದ ಮರಗಳನ್ನು ಕೆಎಫ್‌ಸಿ ಬದಲು ಇಲಾಖಾ ಡಿಪೋ ಮೂಲಕ ಮಾರಾಟವಾಗಬೇಕು. ಹೆಚ್.ಡಿ.ಕೋಟೆ ತಾಲೂಕು ಅಣ್ಣೂರು ಗ್ರಾಮದ ಅರಣ್ಯ ಭೂಮಿ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಿಕೊಡಬೇಕು.

ಮೇ 15 ರಂದು ಉದ್ಯೋಗ, ಆರೋಗ್ಯ ಮೇಳ



ಪಿರಿಯಾಪಟ್ಟಣ, ಮೇ 5(ವೀರೇಶ್)– ಶಾಸಕ ಕೆ. ಮಹದೇವ್ ಅವರ ಹುಟ್ಟುಹಬ್ಬವನ್ನು ಉದ್ಯೋಗ ಮೇಳ ಮತ್ತು ಆರೋಗ್ಯ ಮೇಳ ನಡೆಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ಜೆಡಿಎಸ್ ಕಾರ್ಯಕರ್ತರು ತೀರ್ಮಾನಿಸಿದ್ದಾರೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 11ರಂದು ನಮ್ಮ ತಂದೆಯವರ ಹುಟ್ಟುಹಬ್ಬವಿದ್ದು, ಹುಟ್ಟುಹಬ್ಬದ ಅಂಗವಾಗಿ ಮೇ 15 ರಂದು ಪಟ್ಟಣದ ಬಾಲಕರ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಉದ್ಯೋಗ ಮೇಳ ಮತ್ತು ಆರೋಗ್ಯ ಮೇಳ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಆರೋಗ್ಯ ಮೇಳದಲ್ಲಿ ನೂರಕ್ಕೂ ಹೆಚ್ಚು ತಜ್ಞ ವೈದ್ಯರು ಭಾಗವಹಿಸಲಿದ್ದು, ಗಂಭೀರ ಕಾಯಿಲೆಗಳಿಗೆ ಆಯುಷ್ಮಾನ್ ಕಾರ್ಡ್ ಉಪಯೋಗಿಸಿ ಶಸ್ತ್ರಚಿಕಿತ್ಸೆ ಮಾಡಲು ಶಿಫಾರಸು ಮಾಡಲಿದ್ದಾರೆ ಎಂದು ತಿಳಿಸಿದರು. ಉದ್ಯೋಗ ಮೇಳವನ್ನು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಮತ್ತು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು. ಉದ್ಯೋಗ ಮೇಳ ಆಯೋಜಕ ಉದ್ಯೋಗದಾತ ಸಂಸ್ಥೆ ಮುಖ್ಯಸ್ಥ ರುಕ್ಮಾಂಗದ ಮಾತನಾಡಿ, ಉದ್ಯೋಗ ಮೇಳದಲ್ಲಿ ಕನಿಷ್ಠ 40 ವಿವಿಧ ಕಂಪನಿಗಳು ಆಗಮಿಸಲಿದ್ದು, ಈ ಬಾರಿ ಮೈಸೂರಿನಿಂದ ಹೆಚ್ಚಿನ ಕಂಪನಿಗಳನ್ನು ಭಾಗವಹಿಸುವಂತೆ ನೋಡಿಕೊಳ್ಳಲಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪುರಸಭೆ ಅಧ್ಯಕ್ಷ ಮಹೇಶ್, ಮುಖಂಡರಾದ ಅಪೂರ್ವ ಮೋಹನ್, ರಘುನಾಥ್, ಕೆಂಪಣ್ಣ, ಕುಮಾರ್, ಮಧು, ವಿಜಯಕುಮಾರ್ ಹಾಜರಿದ್ದರು.

ಗುಣಮಟ್ಟದ ಹಾಲು ಪೂರೈಕೆ ಮಾಡಿ: ಚೆಲುವರಾಜು

ತಿ.ನರಸೀಪುರ, ಮೇ 5(ಎಸ್‌ಕೆ)– ಗ್ರಾಮೀಣ ಜನರು ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವ ಮೂಲಕ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಲು ಮುಂದಾಗಬೇಕು ಎಂದು ಮೈಮುಲ್ ನಿರ್ದೇಶಕ ಆರ್. ಚೆಲುವರಾಜು ಮನವಿ ಮಾಡಿದರು.

ತುರುಗನೂರು ಡೈರಿಯಲ್ಲಿ 35 ವರ್ಷ ಮುಖ್ಯ ಕಾರ್ಯ ನಿರ್ವಾಹಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಹೆಚ್.ನಾಗರಾಜು ಅವರಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಸಹಕಾರ ಸಂಘ ಏಳಿಗೆ ಹೊಂದಲು ಅಲ್ಲಿನ ಕಾರ್ಯ ನಿರ್ವಾಹಕರ ಪಾತ್ರ ಮುಖ್ಯ. ನಾಗರಾಜು ತಮ್ಮ ಪಾಲಿನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದರಿಂದ ಡೈರಿ ಉತ್ತಮ ಸ್ಥಿತಿಯಲ್ಲಿ ಮುಂದುವರೆಯುತ್ತಿದೆ ಎಂದರು.

ಹಾಲು ಉತ್ಪಾದನೆಯಲ್ಲಿ ಪಿರಿಯಾಪಟ್ಟಣ ಮೊದಲ ಸ್ಥಾನದಲ್ಲಿದ್ದು, 1.40 ಲಕ್ಷ ಲೀ. ಹಾಲು ಉತ್ಪಾದನೆಯಾಗುತ್ತಿದೆ. ಆದರೆ ಇಲ್ಲಿ 80 ಸಾವಿರ ಲೀ. ಉತ್ಪಾದನೆಯಾಗುತ್ತಿದ್ದು, ಉತ್ಪಾದನೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಆಗಬೇಕು. ಹೈನುಗಾರಿಕೆ ಲಾಭ ತರುವ ಉದ್ದಿಮೆಯಾಗಿದ್ದು, ಗ್ರಾಮೀಣ ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ಉದ್ದಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಹೆಚ್ಚಿನ ಹಾಲು ಉತ್ಪಾದಿಸಲು ಮುಂದಾಗಬೇಕು ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿದರು. ಇದೇ ವೇಳೆ ಡೈರಿ ಸಿಇಓ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಹೆಚ್. ನಾಗರಾಜು ಅವರನ್ನು ಸನ್ಮಾನಿಸಲಾಯಿತು. ಜಿಪಂ ಮಾಜಿ ಸದಸ್ಯ ಎಂ.ಸುಧೀರ್, ಸಂಘದ ಅಧ್ಯಕ್ಷ ಸಿದ್ದಪ್ಪ, ಉಪಾಧ್ಯಕ್ಷ ದೊಡ್ಡನಾಗೇಗೌಡ, ನಿರ್ದೇಶಕರಾದ ಗುರುಪಾದಸ್ವಾಮಿ, ಲಿಂಗಯ್ಯ, ಟಿ.ಎಸ್. ಸಿದ್ದರಾಜು, ಬೋರೇಗೌಡ, ಜಯರಾಮು, ಮೀನಾಕ್ಷಿ, ಕಾರ್ಯದರ್ಶಿ ಟಿ.ಎಸ್. ನಾಗೇಂದ್ರ, ಕಾಂಗ್ರೆಸ್ ಯುವ ಘಟಕ ಅಧ್ಯಕ್ಷ ಟಿ.ಎಸ್.ಲೋಕೇಶ್, ಮುಖಂಡರಾದ ಲಿಂಗಯ್ಯ, ನಿಂಗೇಗೌಡ, ಸ್ವಾಮಿ, ಉಪ ವ್ಯವಸ್ಥಾಪಕ ಡಾ.ದಿವಾಕರ್, ಪಶು ವೈದ್ಯಾಧಿಕಾರಿ ನಿಶ್ಚಿತ್, ವಿಸ್ತರಣಾಧಿಕಾರಿ ಪ್ರಮೋದ್, ದಿವ್ಯಶ್ರೀ, ಗುಮಾಸ್ತ ಮಹೇಶ್ ಮತ್ತಿತರರಿದ್ದರು.

ನಿವೃತ್ತ ಸಿಇಓ ಹೆಚ್.ನಾಗರಾಜುಗೆ ಬೀಳ್ಕೊಡುಗೆ



ದೀನದಲಿತರ ಉದ್ಧಾರಕ್ಕೆ ನಿಂತ ಮಹಾಪುರುಷ ಬಸವಣ್ಣ



ತಿ.ನರಸೀಪುರ, ಮೇ 5(ಎಸ್‌ಕೆ)– 12ನೇ ಶತಮಾನದ ಸಮಾಜ ಸುಧಾರಕ, ಕ್ರಾಂತಿಯೋಗಿ ಬಸವಣ್ಣ ನೊಂದವರ, ದೀನದಲಿತರ ಉದ್ಧಾರಕ್ಕೆ ನಿಂತ ಮಹಾಪುರುಷ ಎಂದು ಜಿಲ್ಲಾ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್ ತಿಳಿಸಿದರು.

ಪಟ್ಟಣದ ಅಕ್ಕಮಹಾದೇವಿ ಅಭಿವೃದ್ಧಿ ಸಹಕಾರ ಸಂಘದ ಕಚೇರಿಯಲ್ಲಿ ರಾಜ್ಯ ರೈತ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಪ್ರದೀಪ್ ಮಾತನಾಡಿ, ಜಾತಿರಹಿತ ಸಮಾಜದ ಕನಸು ಕಂಡ ಬಸವಣ್ಣನವರು ಪ್ರತಿಯೊಬ್ಬರಿಗೂ ಜೀವನದಲ್ಲಿ ಏಳ್ಗೆ ಪಡೆಯಲು ಸಮಾನ ಅವಕಾಶಬೇಕೆಂದು ಬಯಸಿದವರು. ತಮ್ಮೆಲ್ಲಾ ದೂರದೃಷ್ಟಿ ಸಮಾಜ ನಿರ್ಮಾಣಕ್ಕಾಗಿ ಅನುಭವ ಮಂಟಪ ಹುಟ್ಟು ಹಾಕಿದರು. ಅಲ್ಲಮ ಪ್ರಭು ಸೇರಿದಂತೆ ಸಮಾಜದ ಕೆಳವರ್ಗ ಎನಿಸಿಕೊಂಡಿದ್ದ ಸಾಕಷ್ಟು ಜನರು ಶರಣರಾಗಿ ಈ ಅನುಭವ ಮಂಟಪದಿಂದ ಹೊರ ಬಂದರು ಎಂದರು. ಇದೇ ವೇಳೆ ಜಿಲ್ಲಾ ರೈತ ಸಂಘದ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್ ಅವರನ್ನು ಜಾಗತಿಕ ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಜಾಗತಿಕ ಲಿಂಗಾಯಿತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಶರಣ ಮಹದೇವಪ್ಪ, ಉಪಾಧ್ಯಕ್ಷ ಶಿವಮಲ್ಲಪ್ಪ, ಕಾರ್ಯದರ್ಶಿ ಮರಪ್ಪ, ಮಹದೇವಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಮಲ್ಲಪ್ಪ, ಲಿಂಗಾಯತ ಮಹಾಸಭಾದ ಅಧ್ಯಕ್ಷ ಮಹದೇವ ಸ್ವಾಮಿ, ಸಿದ್ದರಾಜು, ಸ್ವಾಮಿಗೌಡ, ಗೋಪಿ, ಸೋಮಶೇಖರಪ್ಪ ರವಿ, ಬಸವಣ್ಣ, ಮಹೇಶ್ ಕುಮಾರ್, ಗುರುಸ್ವಾಮಿ, ಸುರೇಶ್, ಗಂಗಾಧರ್ ಮತ್ತಿತರರಿದ್ದರು.

ಮಿನಿ ಪಾಕಿಸ್ತಾನ್ ಹೇಳಿಕೆ ಖಂಡಿಸಿ ಪ್ರತಿಭಟನೆ



ನಂಜನಗೂಡು, ಮೇ 5(ಸುದರ್ಶನ್)– ತಾಲೂಕಿನ ದೊಡ್ಡಕೌಲಂದೆ ಗ್ರಾಮದಲ್ಲಿ ಮಿನಿ ಪಾಕಿಸ್ತಾನ್ ಹೇಳಿಕೆ ಖಂಡಿಸಿ ಹಾಗೂ ಹೇಳಿಕೆ ನೀಡಿರುವ ದೇಶದ್ರೋಹಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಹಿಂದೂಪರ ಸಂಘಟನೆಗಳು ಗುರುವಾರ ಪ್ರತಿಭಟನೆ ನಡೆಸಿದವು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಜಮಾಯಿಸಿದ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ದೇಶದ್ರೋಹಿಗಳ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ ಕಿಡಿಗೇಡಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿದರು. ಯುವ ಬ್ರಿಗೇಡ್ ದಕ್ಷಿಣ ವಿಭಾಗೀಯ ಸಂಚಾಲಕ ಸಿ.ಚಂದ್ರಶೇಖರ್ ಮಾತನಾಡಿ, ಭಾರತದ ಶಾಂತಿ ಕದಡುವ ಕೆಲಸವನ್ನು ಕೌಲಂದೆ ಮುಸಲ್ಮಾನರು ಮಾಡುತ್ತಿದ್ದಾರೆ. ಮುಸ್ಲಿಮರು ಕಡಿಮೆ ಇರುವ ಕಡೆಗಳಲ್ಲಿ ದೇಶಭಕ್ತರೆಂದು ಹೇಳುತ್ತಾರೆ. ಜನಸಂಖ್ಯೆ ಹೆಚ್ಚಿರುವ ಕಡೆ ಮಿನಿ ಪಾಕಿಸ್ತಾನವೆಂದು ಹೇಳುತ್ತಾರೆ. ಆದ್ದರಿಂದ ಪಾಕಿಸ್ತಾನದಿಂದ ಬಂದಿರುವ ಭಯೋತ್ಪಾದಕರು ಇದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕಿದೆ. ಕೆಲವರು ಜಾತ್ಯಾತೀತರೆಂದು ಸೋಗು ಹಾಕಿಕೊಂಡು ಶಾಂತಿ ಕದಡಿ ಗಲಾಟೆ ನಡೆಸುತ್ತಿದ್ದಾರೆ. ಈ ಘಟನೆ ಅವರ ವಿಕೃತ ಮನಸ್ಥಿತಿ ತೋರುತ್ತದೆ. ಇದು ಖಂಡನೀಯ ಎಂದರು.

ರಂಜಾನ್ ಪ್ರಾರ್ಥನೆ ಆಯೋಜಿಸಿದ್ದ ಆಯೋಜಕರು ಈ ಘಟನೆಯ ಹೊಣೆ ಹೊತ್ತು ಕ್ಷಮೆಯಾಚಿಸಬೇಕು. ವೀಡಿಯೋ ಮಾಡಿರುವ ವ್ಯಕ್ತಿ ಬಂಧಿಸಿ ದೇಶದ್ರೋಹ ಕೇಸ್ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಹಿಂದೂಪರ ಸಂಘಟನೆಗಳು ದೊಡ್ಡ ಮಟ್ಟದಲ್ಲಿ ಕೌಲಂದೆ ಚಲೋ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ಎಪಿಎಂಸಿ ಸದಸ್ಯ ಗುರುಸ್ವಾಮಿ, ಮಧುರಾಜ್, ಉಮೇಶ್, ಜಯಕುಮಾರ್, ಅನಂತ್, ಭಾಗ್ಯರಾಜ್, ಅಶೋಕ್, ಕಿರಣ್, ನಂದ ಕುಮಾರ್, ಭಾನುಪ್ರಕಾಶ್, ಅರುಣ, ನಿತಿನ್, ಸುನೀಲ್, ಮಾದೇಶ, ಸೇರಿದಂತೆ ನೂರಾರು ಹಿಂದೂಪರ ಕಾರ್ಯಕರ್ತರು ಇದ್ದರು.

ಹುಣ್ಣಿಮೆ ಬಸವಣ್ಣ ದೇವಸ್ಥಾನ ಲೋಕಾರ್ಪಣೆ



ಭೇರ್ಯ, ಮೇ 5– 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರು ಜಾತಿರಹಿತ ಸಮ ಸಮಾಜದ ಕನಸು ಕಂಡವರು. ನೊಂದವರು ಹಾಗೂ ದೀನ–ದಲಿತರ ಉದ್ಧಾರಕ್ಕೆ ಶ್ರಮಿಸಿದವರು ಎಂದು ಶಾಸಕ ಸಾ.ರಾ.ಮಹೇಶ್ ಸ್ಮರಿಸಿದರು.


ಗ್ರಾಮದಲ್ಲಿ ವೀರಶೈವ ಸಮಾಜದಿಂದ ನಿರ್ಮಿಸಿರುವ ಹುಣ್ಣಿಮೆ ಬಸವಣ್ಣ ದೇವಸ್ಥಾನ ಉದ್ಘಾಟಿಸಿ ಮಾತನಾಡಿದ ಅವರು, ಕೆಳವರ್ಗದವರನ್ನು ಮೇಲ್ವರ್ಗದವರು ಹೀನಾಯವಾಗಿ ಕಾಣುತ್ತಿದ್ದ ವೇಳೆ ಅನ್ಯಾಯ ಹೋಗಲಾಡಿಸಲೆಂದೇ ಬಸವಣ್ಣನವರ ಕಲ್ಯಾಣದಲ್ಲಿ ಕ್ರಾಂತಿ ಬೀಜ ಬಿತ್ತಿದರು. ಕಾಯಕವೇ ಕೈಲಾಸ ಎಂದು ಸಾರಿ, ಪ್ರತಿಯೊಬ್ಬರಲ್ಲೂ ದುಡಿದು ತಿನ್ನುವ ಹುಮ್ಮಸ್ಸು ತುಂಬಿದರು. ಮೂಢನಂಬಿಕೆ, ಮಡಿ ಮೈಲಿಗೆಯಿಂದ ತುಂಬಿದ್ದ ಸಮಾಜದ ನಡುವೆ ಬಸವಣ್ಣನವರ ವಚನಗಳು ಜೀವನ ಮತ್ತು ದೇವರನ್ನು ವಿಭಿನ್ನವಾಗಿ ನೋಡುವ ದೃಷ್ಟಿ ನೀಡಿದವು. ಪ್ರತಿಯೊಬ್ಬರಿಗೂ ಜೀವನದಲ್ಲಿ ಏಳ್ಗೆ ಪಡೆಯಲು ಸಮಾನ ಅವಕಾಶಬೇಕೆಂದು ಬಸವಣ್ಣನವರು ಬಯಸಿದರು ಎಂದು ಬಣ್ಣಿಸಿದರು. ಹುಣ್ಣಿಮೆ ಬಸವಣ್ಣ ದೇವಾಲಯ ನಿರ್ಮಾಣಕ್ಕೆ 5 ಲಕ್ಷ ರೂ. ಅನುದಾನ ನೀಡಿದ್ದು, ಬಹಳ ಸುಂದರವಾಗಿ ದೇವಸ್ಥಾನ ನಿರ್ಮಾಣವಾಗಿದೆ. ದೇಗುಲಕ್ಕೆ ಕಾಂಪೌಂಡ್ ನಿರ್ಮಾಣದ ಜೊತೆಗೆ ಖಾಲಿ ಇರುವ ಜಾಗಕ್ಕೆ ತಂಗುದಾಣದ ವ್ಯವಸ್ಥೆ ಮಾಡಿ ಕೊಡುವುದಾಗಿ ಭರವಸೆ ನೀಡಿದರು.

ದೇವಸ್ಥಾನ ಸಮಿತಿಯಿಂದ ಶಾಸಕ ಸಾ.ರಾ. ಮಹೇಶ್, ಜಿಪಂ ಮಾಜಿ ಸದಸ್ಯ ಎಂ.ಟಿ. ಕುಮಾರ್, ತಾಲೂಕು ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್‌ರನ್ನು ಅಭಿನಂದಿಸಲಾಯಿತು. ಗ್ರಾಪಂ ಸದಸ್ಯ ಬಿ.ಪಿ.ಪ್ರಕಾಶ್, ಮಂಜಪ್ಪ ಮಾಜಿ ಅಧ್ಯಕ್ಷ ಬಿ.ವೈ. ಶಿವಶಂಕರ್, ತಾಪಂ ಮಾಜಿ ಸದಸ್ಯ ಸಾದೀಕ್, ಸಹಕಾರ ಸಂಘದ ಅಧ್ಯಕ್ಷ ಬಿ.ಎಂ.ಪ್ರಕಾಶ್, ವೀರಶೈವ ಮುಖಂಡರಾದ ಡೈರಿ ಲೋಕೇಶ್, ಡಿಗ್ರಿ ಮಹದೇವ್, ನಿವೃತ್ತ ಸಂಚಾರಿ ನಿರೀಕ್ಷಕ ನಾಗಣ್ಣ ಮಹೇಂದ್ರ, ಜಯಕೀರ್ತಿ, ಮಲ್ಲೇಶ್, ದೇವಸ್ಥಾನ ಸಮಿತಿ ಸದಸ್ಯರಾದ ರಕ್ಷಿತ್, ಮಹೇಶ್, ಸಂತೋಷ್, ಜೆಡಿಎಸ್ ಮುಖಂಡರಾದ ಅಭಿ, ಜುನೇದ್, ಜಿಪಂ ಎಇ ಸ್ವಾಮಿ, ಉಪತಹಸೀಲ್ದಾರ್ ಮಹೇಶ್ ಇತರರಿದ್ದರು.



ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿಯಲ್ಲಿ ಆಯೋಜಿಸಿದ್ದ ಶ್ರೀಅಂಕನಾಥೇಶ್ವರ ಕಲ್ಯಾಣ ಮಂಟಪದ ಗೃಹ ಪ್ರವೇಶ ಹಾಗೂ ಗಿರಿಜಾ ಕಲ್ಯಾಣಕ್ಕೆ ಆದಿಚುಂಚನಗಿರಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿ, ಭಕ್ತರಿಗೆ ಆಶೀರ್ವಚನ ನೀಡಿದರು. ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಎ.ಟಿ.ಸೋಮಶೇಖರ್ ದಂಪತಿಗಳ 25 ನೇ ವರ್ಷದ ವಿವಾಹ ವಾರ್ಷಿಕೋತ್ಸವಕ್ಕೆ ಶುಭ ಹಾರೈಸಿದರು. ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮು, ಮುಖಂಡರಾದ ಸತೀಶ್, ರಂಗಪ್ಪ ಇತರರಿದ್ದರು.

ವ್ಯಕ್ತಿ ನಾಪತ್ತೆ



ಹುಣಸೂರು, ಮೇ 5(ಕೆಕೆ)– ತಾಲೂಕಿನ ಹನಗೋಡು ಗ್ರಾಮದ ಗೋಪಾಲೇಗೌಡರ ಪುತ್ರ ರಾಘವೇಂದ್ರ (39) ಕಾಣೆಯಾಗಿರುವ ಬಗ್ಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಏ.29ರಂದು ಮನೆಯಿಂದ ಹೊರ ಹೋದವನು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆತನ ತಾಯಿ ನಾಗರತ್ನಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಈತನ ಬಗ್ಗೆ ಸುಳಿವು ಸಿಕ್ಕಿದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ 08222–252042 ಅಥವಾ 9480805056 ನಂಬರಿಗೆ ಮಾಹಿತಿ ನೀಡಲು ಕೋರಲಾಗಿದೆ.

‘ನಮ್ಮೂರು ನಮ್ಮ ಕೆರೆ’ ಯೋಜನೆಯಡಿ

ಪುನಶ್ಚೇತನಗೊಂಡ ಅಂತರಸಂತೆ ಕೆರೆ ಹಸ್ತಾಂತರ



ಹೆಚ್.ಡಿ.ಕೋಟೆ, ಮೇ 5(ಮಂಜು)– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಗ್ರಾಮೀಣ ಜನರು ಮತ್ತು ಮಹಿಳೆಯರ ಅಭಿವೃದ್ಧಿಗೆ ಉತ್ತಮ ಯೋಜನೆ ರೂಪಿಸುತ್ತಿದೆ ಎಂದು ರಾಜ್ಯ ಬೀಜ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಡಿ.ಸುಂದರದಾಸ್ ತಿಳಿಸಿದರು.

ತಾಲೂಕಿನ ಅಂತರಸಂತೆಯಲ್ಲಿ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮದಡಿ ಪುನಶ್ಚೇತನಗೊಳಿಸಲಾದ ಅಂತರಸಂತೆ ಕೆರೆ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಗ್ರಾಮಾಂತರ ಭಾಗಕ್ಕೆ ಸಾಕಷ್ಟು ಅನುಕೂಲ ಕಲ್ಪಿಸಿದ್ದು, ಮಹಿಳೆಯರಿಗೆ, ಸಂಘ–ಸಂಸ್ಥೆಗಳಿಗೆ ಸಾಲ ನೀಡುವ ಮೂಲಕ ಅವರ ಬದುಕನ್ನು ಆರ್ಥಿಕವಾಗಿ ಸುಧಾರಿಸುವ ಪ್ರಯತ್ನ ನಡೆದಿದೆ. ಸಂಸ್ಥೆಯಿಂದ ಸಾಲ ಪಡೆದವರು ಹಣ ಸದುಪಯೋಗಪಡಿಸಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಅದೇ ರೀತಿ ಸಂಘದಿಂದ ನಿರಾಶ್ರಿತರಿಗೆ ಮನೆ ಹಂಚುವ ಕಾರ್ಯಕ್ರಮ ನಡೆದರೆ ಮತ್ತಷ್ಟು ಅನುಕೂಲವಾಗಲಿದೆ. ಈ ಸಂಸ್ಥೆ ಸದಾ ಜನತೆ ಅಭಿವೃದ್ಧಿಗೆ ಶ್ರಮಿಸುವ ಸಂಸ್ಥೆಯಾಗಿದೆ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಪಿ.ಗಂಗಾಧರ ರೈ, ಧರ್ಮಸ್ಥಳ ಸಂಘ ಜನರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಸಂಸ್ಥೆಯಾಗಿದೆ. ಜನರ ಸಹಕಾರದಿಂದ ಕೆರೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಸಂಸ್ಥೆ. ಈವರೆಗೂ ರಾಜ್ಯದಲ್ಲಿ 400 ಕೆರೆಗಳನ್ನು 45 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ನೀರಿನ ಸಮಸ್ಯೆಗೆ ಪರಿಹಾರ ಒದಗಿಸುವ ಪ್ರಯತ್ನ ಮಾಡಲಾಗಿದೆ. ಅಂತರಸಂತೆ ಕೆರೆಯೂ ಅದೇ ಮಾದರಿ ಇಲ್ಲಿನ ಜನರ ಸಹಕಾರದಿಂದ ಅಭಿವೃದ್ಧಿಪಡಿಸಲಾಗಿದೆ. 20 ಎಕರೆ ವಿಸ್ತೀರ್ಣದ ಕೆರೆಯಲ್ಲಿ ನಾವು 15 ಎಕರೆಗಳಷ್ಟು ಹೂಳು ತೆಗೆದಿದ್ದೇವೆ. ಉಳಿದ 5 ಎಕರೆ ಕೆಲ ಸಮಸ್ಯೆಯಲ್ಲಿ ಇರುವುದರಿಂದ ಅದನ್ನು ಕೈಬಿಟ್ಟಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಯೋಜನೆ ಜಿಲ್ಲಾ ನಿರ್ದೇಶಕ ವಿ.ವಿಜಯ್ ಕುಮಾರ್ ನಾಗನಾಳ, ತಾಲೂಕು ಯೋಜನಾಧಿಕಾರಿ ಶಶಿಧರ, ಕೆರೆ ಉಸ್ತುವಾರಿ ಜಯರಾಂ, ಗ್ರಾಪಂ ಅಧ್ಯಕ್ಷ ಕಲೀಂ ಪಾಷಾ, ಉಪಾಧ್ಯಕ್ಷೆ ರತ್ನಮ್ಮ, ಸದಸ್ಯರಾದ ಮಾರುತಿ, ಸೋಮೇಶ್, ಪ್ರದೀಪ್, ಶಿವಲಿಂಗ ನಾಯಕ, ರೇಖಾ, ನೇಮಿಚಂದ್ರ, ದೊರೆಸ್ವಾಮಿ, ಸುಬ್ರಮಣ್ಯ, ಕೆರೆ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಸುಬ್ರಹ್ಮಣ್ಯ, ಜೆಡಿಎಸ್ ಮುಖಂಡ ಶ್ಯಾಂ ಸುಂದರ್, ಕಾಂಗ್ರೆಸ್ ಯುವ ಮುಖಂಡ ನವೀನ ದಾಸ್, ರಾಜೇಗೌಡ, ಮುಖಂಡರಾದ ರಾಧಾಕೃಷ್ಣ, ಅಪ್ಸರ್ ಖಾನ್, ಕಾಂತನಾಯಕ, ಫಯಾಜ್ ಅಹಮದ್, ಜಿಯಾವುಲ್ಲಾ, ಜಯಣ್ಣ, ಸುರೇಶ್, ಸೈಯದ್ ಅಸ್ಲಾಂ ಇತರರಿದ್ದರು.

ಡೆಲ್ಲಿ ವಿರುದ್ಧ ಎಸ್‌ಆರ್‌ಹೆಚ್‌ಗೆ ಸೋಲು

ಮುಂಬೈ, ಮೇ 5– ಡೇವಿಡ್ ವಾರ್ನರ್, ರೋವ್‌ಮ್ಯಾನ್ ಪೊವೆಲ್ ಅವರ ಅರ್ಧಶತಕಗಳ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 21 ರನ್‌ಗಳ ಜಯ ಸಾಧಿಸಿದೆ. ಈ ಮೂಲಕ ಡೆಲ್ಲಿ ಗೆಲುವಿನ ಹಾದಿಗೆ ಮರಳಿದರೇ, ಅತ್ತ ಸನ್‌ರೈಸರ್ಸ್ ಸತತ ಮೂರನೇ ಸೋಲಿಗೆ ಶರಣಾಗಿದೆ.



ಇಲ್ಲಿನ ಬ್ರೆಬೋರ್ನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 207 ರನ್‌ಗಳ ಬೃಹತ್ ಮೊತ್ತ ಗಳಿಸಿತ್ತು. ತಂಡದ ಪರ ಡೇವಿಡ್ ವಾರ್ನರ್ 3 ಸಿಕ್ಸರ್, 12 ಬೌಂಡರಿ ಒಳಗೊಂಡ 92, ರೋವ್‌ಮ್ಯಾನ್ ಪೊವೆಲ್ 6 ಸಿಕ್ಸರ್, 3 ಬೌಂಡರಿ ಒಳಗೊಂಡ 67, ನಾಯಕ್ ರಿಷಬ್ ಪಂತ್ 26 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಭುವನೇಶ್ವರ್ ಕುಮಾರ್, ಅಬೋಟ್, ಕಾರ್ತಿಕ್ ತ್ಯಾಗಿ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.


ಬಳಿಕ ಗುರಿ ಬೆನ್ನತ್ತಿದ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಲಷ್ಟೇ ಸಾಧ್ಯವಾಯಿತು. ತಂಡದ ಪರ ನಿಕೋಲಸ್ ಪೂರನ್ 62, ಏಡನ್ ಮಾರ್ಕರಮ್ 42, ರಾಹುಲ್ ತ್ರಿಪಾಠಿ 22 ರನ್ ಗಳಿಸಿದರು. ಡೆಲ್ಲಿ ಪರ ಖಲೀಲ್ ಅಹ್ಮದ್ 3, ಶಾರ್ದೂಲ್ ಠಾಕೂರ್ 2, ಮಿಚೆಲ್ ಮಾರ್ಷ್, ಕುಲದೀಪ್ ಯಾದವ್ ಹಾಗೂ ಅನ್ರಿಚ್ ನಾರ್ಟ್ಜೆ ತಲಾ ಒಂದೊಂದು ವಿಕೆಟ್ ಪಡೆದರು. ಡೇವಿಡ್ ವಾರ್ನರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಮೈಸೂರು ತಾಲೂಕಿನ ನಾಗವಾಲ ಗ್ರಾಪಂನಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು. ಸಭೆಯಲ್ಲಿ ತಾಲೂಕು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಮೇಶ್ ಅವರನ್ನು ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಸನ್ಮಾನಿಸಿದರು. ಈ ವೇಳೆ ಎ.ಡಿ.ರಘುನಾಥ್, ಗ್ರಾಪಂ ಉಪಾಧ್ಯಕ್ಷೆ ಯಶೋದಮ್ಮ, ಸದಸ್ಯರಾದ ಈಶ್ವರ್, ಕೆಂಪೇಗೌಡ, ಹೆಚ್.ಜೆ.ಕುಮಾರ್, ಗೌರಮ್ಮ, ಶ್ರೀಧರ್, ಮಮತ, ಭಾಗ್ಯ, ಲಕ್ಷ್ಮಿ, ಶೃತಿ, ಆಶಾ, ಪಿಡಿಓ ಡಾ.ಶೋಭಾರಾಣಿ ಇತರರಿದ್ದರು.

ಜುಲೈನಲ್ಲಿ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಮೊದಲ ಹಂತ ಸಂಚಾರಕ್ಕೆ ಮುಕ್ತ





ಬೆಂಗಳೂರು, ಮೇ 5– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಮೊದಲ ಹಂತದ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಜುಲೈನಲ್ಲಿ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಪುನರುಚ್ಚರಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 275ರ ಪರಿಷ್ಕೃತ ವಿಸ್ತರಣೆಯ ಪ್ರಯಾಣದ ಸಮಯವನ್ನು 3 ಗಂಟೆಯಿಂದ 75ರಿಂದ 90 ನಿಮಿಷಗಳವರೆಗೆ ಕಡಿತಗೊಳಿಸಲಾಗಿದ್ದು, ಬೆಂಗಳೂರಿನಿಂದ ನಿಡಘಟ್ಟವರೆಗಿನ 56 ಕಿಮೀ ಹೆದ್ದಾರಿ ಕಾಮಗಾರಿ ಇನ್ನೇನು ಅಂತಿಮ ಹಂತದಲ್ಲಿದ್ದು, ಜುಲೈ ವೇಳೆಗೆ ಪೂರ್ಣಗೊಳ್ಳಲಿದೆ. ನಂತರ ಹೆದ್ದಾರಿಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಕಳೆದ ಮಂಗಳವಾರ ಇಂಜಿನಿಯರ್‌ಗಳೊಂದಿಗೆ ಹೆದ್ದಾರಿಯ ಕಾಮಗಾರಿ ಪರಿಶೀಲಿಸಿದ ಪ್ರತಾಪ್‌ಸಿಂಹ ಕಾಮಗಾರಿ ಪ್ರಗತಿಯ ಸಂಬಂಧ ವೀಡಿಯೋವೊಂದನ್ನು ಪ್ರದರ್ಶಿಸಿ, ತಮ್ಮ ಹೇಳಿಕೆಗೆ ಪುರಾವೆ ನೀಡಿದ್ದಾರೆ. ಈಗಾಗಲೇ ಈ ವರ್ಷದ ದಸರಾ ವೇಳೆಗೆ ಹೆದ್ದಾರಿ ಕಾಮಗಾರಿ ಪೂರ್ಣಗೊಳ್ಳುವ ಬಗ್ಗೆ ಪ್ರಕಟಿಸಲಾಗಿದೆ. ಈಗಲೂ ಸಹ ಅದನ್ನೇ ಹೇಳುತ್ತಿದ್ದು, ನಿಗದಿತ ವೇಳೆಗೆ ಹೆದ್ದಾರಿಯನ್ನು ಸಂಚಾರಕ್ಕೆ ಮುಕ್ತಗೊಳಿಸುವ ಉದ್ದೇಶದಿಂದ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಮೊದಲ ಹಂತದ ಕಾಮಗಾರಿಯಲ್ಲಿ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಬಳಿ 4.5 ಕಿ.ಮೀ ಉದ್ದದ ಕುಂಬಳಗೋಡು ಮೇಲ್ಸೇತುವೆ, ಟೋಲ್ ಪಾಯಿಂಟ್ ಹಾಗೂ ಇನ್ನಿತರ ಪ್ರಮುಖ ಕಾಮಗಾರಿಗಳ ಬಗ್ಗೆ ಇಂಜಿನಿಯರ್‌ಗಳಿಂದ ಮಾಹಿತಿ ಪಡೆದಿದ್ದಾರೆ. ಪ್ರತಿ ಟೋಲ್‌ಪ್ಲಾಜಾದಲ್ಲಿ 11 ಪ್ರವೇಶ ದ್ವಾರಗಳಿರುತ್ತವೆ. ಇದರಿಂದ ವಾಹನಗಳು ಸರಾಗವಾಗಿ ಸಂಚರಿಸಲು ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

117 ಕಿ.ಮೀ ಉದ್ದದ ಹೆದ್ದಾರಿಯ ಕಾಮಗಾರಿಯನ್ನು ದಸರಾ ವೇಳೆಗೆ ಪೂರ್ಣಗೊಳಿಸಿ, ಇದರ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸುವ ಉದ್ದೇಶವನ್ನು ಹೊಂದಿರುವುದಾಗಿ ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಒಬ್ಬ ಡಿಸಿಗಾಗಿ 4 ಗಂಟೆ ನಿಲ್ಲೋದಕ್ಕೆ ನಾನೇನು ದನ ಕಾಯೋನಾ?



ಹಾಸನ: ಯಾವಾಗ್ಲೂ ಬಿಜೆಪಿ ಸರ್ಕಾರ ಇರುತ್ತೆ ಅನ್ಕೊಂಡಿದ್ದಾರೆ. ನಾನು 25 ವರ್ಷದಿಂದ ಎಲ್ಲವನ್ನೂ ನೋಡಿದ್ದೇನೆ. ಒಬ್ಬ ಶಾಸಕ ಧರಣಿ ಕೂತಿದ್ದಾನೆ ಎಂದರೆ ಸ್ಥಳಕ್ಕೆ ಒಬ್ಬ ಡಿಸಿ ಆದವರು ಬರುವುದಿಲ್ಲ ಎಂದರೆ ನಾನೇನು ದನ ಕಾಯೋನಾ? ಎಂದು ಮಾಜಿ ಸಚಿವ ಎಚ್‌ಡಿ ರೇವಣ್ಣ, ಡಿಸಿ ಆರ್.ಗಿರೀಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಾಸನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಡಿಸಿ ಆಫೀಸ್ ಒಡೆದು ಹಾಕಿದ್ರೆ ಅದರ ಪರಿಣಾಮ ಬೇರೆ ಆಗುತ್ತೆ. ಡಿಸಿ ಸಭೆಗೆ ಹೋದರೆ ಬೆಲೆ ಕೊಡಲ್ಲ. ಡಿಸಿ ಎಷ್ಟು ದಿನ ಆಡ್ತಾನೆ ಆಡ್ಲಿ ಎಂದು ಬೇಸರ ಹೊರಹಾಕಿದರು. ರಾತ್ರಿ ವೇಳೆ ಹಾಸನ ತಾಲೂಕು ಕಚೇರಿ ಕಟ್ಟಡ ಒಡೆದು ಹಾಕಿದ ಬಗ್ಗೆಯೂ ಅಸಮಾಧಾನ ಹೊರಹಾಕಿದ ರೇವಣ್ಣ, ಡಿಸಿಯವರಿಗೆ ಪುರುಸೊತ್ತಿಲ್ಲ, ರಾತ್ರಿ ವೇಳೆ ಬಿಲ್ಡಿಂಗ್ ಹೊಡೆಯುವುದರಲ್ಲಿ ಬ್ಯುಸಿ ಇದ್ದಾರೆ. ಡಿಸಿ ಅನ್ನೋ ಪದ ತೆಗೆಯ ಬೇಕಾಗುತ್ತದೆ ಎಂದು ವ್ಯಂಗ್ಯವಾಡಿದರು.

ಮೇ 8ರಂದು ಮೈಸೂರಲ್ಲಿ ಶ್ರೀಭಗೀರಥ ಜಯಂತಿ

ಮೈಸೂರು, ಮೇ 5– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀಭಗೀರಥ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮೇ 8 ರಂದು ಬೆಳಗ್ಗೆ 10 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಹಮ್ಮಿಕೊಂಡಿದ್ದು ಮಧ್ಯಾಹ್ನ 12 ಕಲಾಮಂದಿರದಲ್ಲಿ ಶ್ರೀಭಗೀರಥ ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು.